
ಕಲ್ಯಾಣ ಕಿರಣ

ಮಾರ್ಚ್ - 2001 ಶ್ರೀ ಬೆಲೆ : ರೂ. 5-00





★ ಕಲ್ಯಾಣ ಕಿರಣ ★

ಸಂಪುಟ 31 ಬಸವ ಶಕೆ 867 ಆಜೀವ ಸದಸ್ಯತ್ವ 500 ರೂ

ಸಂಚಿಕೆ 3 ಮಾರ್ಚ-2001 ವಾರ್ಷಿಕ ಚಂದಾ 50/- ರೂ

ಗುರು ಪ್ರಭುವೆ ನಾ ನಿನಗೆ ಅನವರತ ವಂದಿಪೆನು

ಗುರು ಪ್ರಭುವೆ ನಾ ನಿನಗೆ ಅನವರತ ವಂದಿಪೆನು
ವ್ಯೋಮಕಾಯ ಸಿದ್ಧ ಶೂನ್ಯ ಪೀಠಾಧೀಶ ॥ ಪಲ್ಲವಿ ॥
ಅನುಭವ ಮಂಟಪದ ಜ್ಞಾನದೀಪ್ತಿಯು ಆಗಿ
ಶರಣ ಸಾಧಕರುಗಳ ಮುನ್ನಡೆಸಿದಾ ಮಹಿಮ ॥ ಅ.ಪ ॥

ಧರ್ಮಪಿತ ಬಸವ ಗುರು ನೀಡಿದಾ ಲಿಂಗವನು
ಅನಿಮಿಷ ಯೋಗಿಯಿಂದ ಪಡೆದು ಪುಳಕಿತನಾದೆ
ಬ್ರಹ್ಮಾಂಡದೊಳಗಿಪ್ಪ ಶ್ರೀ ಲಿಂಗದೇವನಿಗೆ
ಘನ ಗುಹೇಶ್ವರನೆಂಬ ದಿವ್ಯ ನಾಮವನಿತ್ತೆ ॥1॥

ಆಸೆ ಆಮಿಷವಳಿದು ಕಾಮ ಮೋಹವ ಗೆಲಿದು
ಮಾಯೆಯಂ ಮಣಿಸಿ ಅಲ್ಲಮ ಪ್ರಭುವೆನಿಸಿ
ಹರಿವ ನದಿಯ ತೆರದಿ ಚರಿಪ ಜಂಗಮವಾಗಿ
ಅಪರಿಮಿತ ಸಾಧಕರ ಹೃನ್ಮನಗಳನು ತೊಳೆದೆ ॥2॥

ತನುವ ತೋಂಟವ ಮಾಡಿ ಮನವ ಗುದ್ದಲಿ ಮಾಡಿ
ಅಗೆದು ಕಳೆದೆ ನೀನು ಭ್ರಾಂತಿಯೆಂಬುವ ಬೇರ
ನಾನು ನನ್ನದು ಎಂಬ ಮಮಕಾರವಂ ತೊರೆದು
ಬ್ರಹ್ಮ ಬೀಜವ ಬಿತ್ತಿ ಪರಮಾರ್ಥ ಬೆಳೆ ತೆಗೆದೆ ॥3॥

ಧರ್ಮಗುರು ಬಸವಣ್ಣನ ಸಾಂಗತ್ಯ ಬಯಸುತ್ತ
ಸಿದ್ಧರಾಮರ ಕೂಡಿ ಶರಣ ಸಂಗಮ ಸೇರಿ
ವಿಶ್ವವಸು ವರ್ಷದ ಚೈತ್ರ ಪ್ರತಿಪದೆಯಂದು
ಶೂನ್ಯ ಪೀಠದ ಪ್ರಥಮ ಗುರುವಾಗಿ ಮೆರೆದೆ ॥4॥

ನಳನಾಮ ವರ್ಷದ ಆಷಾಡ ಮಾಸದಲಿ
ಪ್ರತಿಪದೆಯ ದಿನದಂದು ಕದಳಿಯಲಿ ಬಯಲಾದೆ
ಜಯ ಜಯ ಅಲ್ಲಮನೆ ಜಯತು ಮಹಗುರುವೆ
ಜಯ ಸಚ್ಚಿದಾನಂದ ಜಯ ಜಯತು ಸದ್ಗುರುವೆ ! ॥5॥

- ರಚನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

Web site : www.Lingayathism.com
Web site : www.Basavamission.com

ಕಲ್ಯಾಣ ಕಿರಣ ಅಕ್ಷರ ಜೋಡಣೆ : ರಮೇಶ್ ಲಿಂಗಾಯತ

★ ಕಲ್ಯಾಣ ಕಿರಣ ★

ಸಂಪುಟ 31 | ಬಸವ ಶಕೆ 867 | ಆಜೀವ ಸದಸ್ಯತ್ವ 500 ರೂ
ಸಂಚಿಕೆ 3 | ಮಾರ್ಚಿ-2001 | ವಾರ್ಷಿಕ ಚಂದಾ 50 ರೂ

ಪೂಜ್ಯ ಶ್ರೀ ಮಹಾಜಗದ್ಗುರು ಮಾತಾಜಿಯವರ
56ನೆಯ ವರ್ಧಂತಿ ನಿಮಿತ್ತ ಭಕ್ತಿಪೂರ್ವಕ ನಮನ



ದಿ. 13-3-2001ನೆಯ ದಿನಾಂಕಕ್ಕೆ ಪೂಜ್ಯ ಶ್ರೀ ಮಾತಾಜಿಯವರು, 55 ವರ್ಷಗಳನ್ನು ಪೂರೈಸಿ 56ಕ್ಕೆ ಪಾದಾರ್ಪಣ ಮಾಡುತ್ತಿರುವ ಸನ್ನಿವೇಶದಲ್ಲಿ ಕಲ್ಯಾಣ ಕಿರಣದ ಸಿಬ್ಬಂದಿ ವರ್ಗವು ಪೂಜ್ಯರಿಗೆ ನಮನವನ್ನು ಸಲ್ಲಿಸುತ್ತದೆ.

E-mails : **vishwakalyana@lingayathism.com.** / viswakalyana@yahoo.com

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ಅಕ್ಷರ ಜೋಡಣೆ ಪುಟ ವಿನ್ಯಾಸ: ರಮೇಶ್ ಲಿಂಗಾಯತ

ಸಂಪಾದಕೀಯ - 1

ಅಕ್ಕನ ವಚನಾಂಕಿತ - ಒಂದು ವಿವರಣೆ

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ ?
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ ?
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ ?
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ ?
ಅಲಗಿದ್ದು ಫಲವೇನು ಮನವಿಲ್ಲದನ್ನಕ್ಕ ?
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ
ಚನ್ನಮಲ್ಲಿಕಾರ್ಜುನಾ
(ಮಹಾದೇವಿಯಕ್ಕ ಪ್ರಿಯ ಲಿಂಗದೇವ)

1. ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ
2. ನಿನ್ನರಿಕೆಯ ನರಕವೇ ಮೋಕ್ಷ
3. ತನುಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು
4. ಗುರುವಿನ ಕರುಣದಿಂದ ಲಿಂಗವ

ಅಕ್ಕಮಹಾದೇವಿಯ ಈ ವಚನಗಳನ್ನು ಶರಣ ವಾಣಿ ಎಂಬ ಧ್ವನಿಸುರುಳಿಯಲ್ಲಿ ಧ್ವನಿ ಮುದ್ರಿಸಲಾಗಿದೆ. ರಾಗ ಸಂಯೋಜನೆಯೂ ಬಹಳ ಚೆನ್ನಾಗಿದ್ದು ಹಾಡುವಿಕೆಯಂತೂ ಮನೋಹರವಾಗಿದೆ. ಚನ್ನಮಲ್ಲಿಕಾರ್ಜುನಾ ಎಂಬ ವಚನ ಮುದ್ರಿಕೆಯನ್ನು ತೆಗೆಯದೆ ಹಾಗೆಯೇ ಇಟ್ಟು, ಇದನ್ನು ಹಾಡಿದ ತಕ್ಷಣವೇ ಮಹಾದೇವಿಯಕ್ಕ ಪ್ರಿಯ ಲಿಂಗದೇವಾ ಎಂದು, ಚನ್ನಮಲ್ಲಿಕಾರ್ಜುನ ಪದವು ಸಂಕೇತಿಸುವ ಪರಮಾತ್ಮನನ್ನು ಬಣ್ಣಿಸಲಾಗಿದೆ. ಇದಿಷ್ಟೂ ಪೀಠಿಕೆ.

ಒಂದು ಪಟ್ಟದ ಆನೆಯು ಸರ್ವಾಲಂಕೃತಗೊಂಡು ಬರುತ್ತಿತ್ತು. ಅದರ ಸಾಕಾಣಿಕೆಗೆ ಅವಕಾಶ ಸಿಕ್ಕ ಮಾವುತ ಬಹುಪ್ರೀತಿಯಿಂದ ಅದನ್ನು ಸಾಕುತ್ತಿದ್ದ. ಅದಕ್ಕೂ ಅವನ ಮೇಲೆ ಅಷ್ಟೇ ಮಮತೆ. ಆದರೆ ಮಾವುತನಿಗೆ ಸಿಕ್ಕ ಈ ಅವಕಾಶ ಕಂಡು ಮತ್ಸರ ಪಡುತ್ತಿದ್ದ ಇನ್ನಿತರ ಮಾವುತರು ಆನೆ ಬರುವಾಗ ಏನೇನೋ ಟೀಕೆ ಮಾಡುತ್ತಿದ್ದರು. "ಇವನು ಸರಿಯಾಗಿ ಉಣ್ಣಿಸುವುದಿಲ್ಲ, ಆನೆಯನ್ನು ಅಲಂಕರಿಸುವುದಿಲ್ಲ ; ನೋಡಿ, ಅದರ ಹಣೆಯ ಮೇಲೆ ಎಂಥಾ ದೊಡ್ಡ ಉಣ್ಣೆ ಕೂತಿದೆ ಎಂದು ಟೀಕಿಸುತ್ತಿದ್ದರು. ಸರಿ, ಇದನ್ನು ಪರೀಕ್ಷಿಸಲು ಪ್ರಧಾನ ಮಂತ್ರಿ ಮುಂದಾದಾಗ ಹಣೆಯ ಮೇಲೆ ಕುಳಿತುದು ಉಣ್ಣೆಯಲ್ಲ, ಬಹುದೊಡ್ಡ ಸುಂದರ ಮುತ್ತಿನ ಮಣಿ ಎಂಬುದು ಮನವರಿಕೆಯಾಯಿತು. ಲಿಂಗದೇವನ ಪರಿಕಲ್ಪನೆಯೂ ಹೀಗೇ ಇದೆ. ಎಂಥಾ ಅದ್ಭುತ, ಸೈದ್ಧಾಂತಿಕ ಪದ. ಈವರೆಗಿನ ನಮ್ಮ ಎಲ್ಲಾ ಸಾಧನೆಗೆ ಇದು ಕಿರೀಟವಿಟ್ಟಿತು !

ಅಕ್ಕಮಹಾದೇವಿ ಪೀಠದ ಅಧಿಕಾರಿಗಳಾಗಿ ನೀವೇಕೆ ಅಕ್ಕಮಹಾದೇವಿಯ ವಚನಗಳ ಕೆಸೆಟ್ಟು ಮಾಡಿಸುತ್ತಿಲ್ಲ ? ದಿನಾಲೂ ಒಬ್ಬಿಬ್ಬರಾದರೂ ಕೇಳುತ್ತಿದ್ದರು. ಏನು ಮಾಡುವುದು ? ಚನ್ನಮಲ್ಲಿಕಾರ್ಜುನ ಒಂದು ದೊಡ್ಡ ಆತಂಕವಾಗಿದ್ದ. ಶರಣರ ವಚನ ಮುದ್ರಿಕೆಗಳಲ್ಲಿ ಸಮಸ್ಯೆ ತಂದೊಡ್ಡುತ್ತಿದ್ದವು. ಆರು ಷಡುಗಣಾಧೀಶರಲ್ಲಿ 3 ಜನರವು

1. ಧರ್ಮಪಿತರ ಕೂಡಲಸಂಗಮದೇವ
2. ಅಕ್ಕಮಹಾದೇವಿಯ ಚನ್ನಮಲ್ಲಿಕಾರ್ಜುನ

3. ಸಿದ್ಧರಾಮೇಶ್ವರರ ಕಪಿಲಸಿದ್ಧಮಲ್ಲಿಕಾರ್ಜುನ

ಉಳಿದ ಮೂವರ ಮುದ್ರಿಕೆ ಅಲ್ಲಮಪ್ರಭುದೇವರ ಗುಹೇಶ್ವರ ಚನ್ನಬಸವಣ್ಣನವರ ಕೂಡಲ ಚನ್ನ ಸಂಗಮದೇವ, ಮಡಿವಾಳ ಮಾಚಿದೇವರ ಕಲಿದೇವರ ದೇವ ಅಷ್ಟೊಂದು ಸೈದ್ಧಾಂತಿಕ ಆತಂಕ ಒಡ್ಡುವುದಿಲ್ಲ. ಏಕೆಂದರೆ ಆ ಹೆಸರಿನ ಸ್ಥಾವರಲಿಂಗಗಳು ಯಾವುವೂ ಇಲ್ಲ. ಅದೇ ರೀತಿ ಇನ್ನಿತರ ಕೆಲವು ಪ್ರಮುಖ ಶರಣರ ವಚನ ಮುದ್ರಿಕೆಗಳನ್ನು ಸಂಕೇತಿಸುವ ಸ್ಥಾವರ ಲಿಂಗಗಳಿಲ್ಲ. ಅಕ್ಕನಾಗಮ್ಮನ ಬಸವಣ್ಣಪ್ರಿಯ ಚೆನ್ನಸಂಗ, ಹಡಪದ ಅಪ್ಪಣ್ಣನವರ ಬಸವ ಪ್ರಿಯ ಕೂಡಲ ಚನ್ನಸಂಗಮದೇವ, ಉರಿಲಿಂಗದೇವರ ಉರಿಲಿಂಗದೇವ, ತೋಂಟದ ಸಿದ್ಧಲಿಂಗೇಶ್ವರರ ಮಹಾಲಿಂಗ ಗುರು ಶಿವಸಿದ್ದೇಶ್ವರ ಪ್ರಭುವೆ, ಷಣ್ಮುಖಸ್ವಾಮಿಗಳ ಅಖಂಡೇಶ್ವರ ಈ ವಚನಾಂಕಿತದ ಹೆಸರಿನ ಸ್ಥಾವರಲಿಂಗಗಳಿಲ್ಲ. ಇನ್ನು ಕೆಲವು ಶರಣರವು ಇವೆಯಾದರೂ ಅವುಗಳ ಬಗ್ಗೆ ಬಹಳಷ್ಟು ಚಿಂತಿಸಬೇಕಿಲ್ಲ. ಅವರ ವಚನಗಳ ಸಂಖ್ಯೆಯೂ ಕಡಿಮೆ.

ಈ ಚಿಂತೆಯಿಂದಾಗಿ ಅಕ್ಕನ ವಚನಗಳ ಧ್ವನಿ ಸುರುಳಿ ಮಾಡಿಸಲು ಮನಸ್ಸು ಹೊಯ್ದಾಡುತ್ತಿತ್ತು. ಆದರೆ ನನ್ನ ಪ್ರೀತಿಯ, ಆದರ್ಶದ ಪ್ರತಿಮೂರ್ತಿಯಾದ ಅಕ್ಕನ ವಚನಗಳನ್ನು, ಗೀತೆಗಳನ್ನು ಕಿವಿಯಾರೆ ಮಧುರ ಧ್ವನಿಯಲ್ಲಿ ಕೇಳಬೇಕೆಂಬ ಅದಮ್ಯ ತುಡಿತ. ಸಿದ್ಧರಾಮೇಶ್ವರರು ಬುದ್ಧಿವಂತರು, ಎರಡನೆಯ ಮುದ್ರಿಕೆಯನ್ನಾಗಿ ಯೋಗಿನಾಥ ಕೊಟ್ಟಿದ್ದಾರೆ. ಕಡೆಗೆ ನಿರ್ಧರಿಸಿದೆ, "ಚನ್ನಮಲ್ಲಿಕಾರ್ಜನ ಹಾಗೆಯೇ ಇರಲಿ ; ಆದರೆ ಈ ಮುದ್ರಿಕೆಯು ಸಂಕೇತಿಸುವುದು ಸೂಚಿಸುವುದು ಶ್ರೀಶೈಲದ ಮಲ್ಲಿಕಾರ್ಜುನನ್ನಲ್ಲ, ಸಾವಿಲ್ಲದ, ರೂಹಿಲ್ಲದ ಚೆಲುವ ಸೃಷ್ಟಿಕರ್ತ ಲಿಂಗದೇವನನ್ನು. ಕೇವಲ "ಲಿಂಗದೇವ" ಬಳಸಲಾಗದು. ಏಕೆಂದರೆ ಅದು ಧರ್ಮಪಿತ ಬಸವಣ್ಣನವರು ಕೊಟ್ಟ ಸುಂದರ ಸೈದ್ಧಾಂತಿಕ ಪದ ಅದನ್ನು ಅವರ ವಚನಗಳಿಗೆ ಮೀಸಲಾಗಿ (reserve) ಇಟ್ಟಾಗ ಮಾತ್ರ. ಲಿಂಗದೇವ ವಚನಾಂಕಿತ ಇರುವ ವಚನವು ಧರ್ಮಪಿತರರದು ಎಂಬುದು ದೃಢಪಡುತ್ತ ಹೋಗುತ್ತದೆ. ಈ ಸಮಸ್ಯೆ ಬಗೆಹರಿಸಲು "ಮಹಾದೇವಿಯಕ್ಕ ಪ್ರಿಯ ಲಿಂಗದೇವ" ಎಂದು ಚನ್ನಮಲ್ಲಿಕಾರ್ಜುನ ಪದಕ್ಕೆ ವಿವರಣೆ ನೀಡಲಾಗಿದೆ.

ಹಿಂದೆ ನಾನು ಕೂಡಲ ಸಂಗಮದೇವನನ್ನು ತೆಗೆದು ನಿರಾಕಾರ ನಿರ್ಗುಣ ದೇವನ ಕಲ್ಪನೆ ಇರುವ ವಚನದಲ್ಲಿ ಲಿಂಗದೇವ ಇಟ್ಟಾಗ ಕೆಲವರು ಸೂಚಿಸಿದ್ದರು. ಬೀದರಿನ ಶರಣೆ. ಅನ್ನಪೂರ್ಣಾ ಹಂಗರಗಿ ಹೇಳಿದ್ದರು, "ಒಮ್ಮೆಲೇ ಕೂಡಲಸಂಗಮ ದೇವ ತೆಗೆದು, ಸೈದ್ಧಾಂತಿಕವಾಗಿ ಲಿಂಗದೇವ ಪದ ಸರಿ ಇದ್ದರೂ, ಲಿಂಗದೇವ ಇಟ್ಟುದನ್ನು ಜನರು ಬೇಗನೇ ಸ್ವೀಕರಿಸಲಾರರು. ಅದನ್ನು ಹಾಗೆಯೇ ಇಟ್ಟು ಇನ್ನೊಂದನ್ನು ಅಂದರೆ ಲಿಂಗದೇವನನ್ನು ಬ್ರಾಕೆಟ್ಟನಲ್ಲಿ ಇಡುತ್ತಾ ಹೋದಾಗ ನಿಧಾನವಾಗಿ ಅರ್ಥ ಮಾಡಿಕೊಳ್ಳುತ್ತಿದ್ದರು. ಆಗ ವಿರೋಧ ಬರುತ್ತಿರಲಿಲ್ಲ."

ಆಗ ನಾನು ಹೇಳಿದ್ದೆ, "ನಮ್ಮ ಜನರ ಕಲಿಯುವಿಕೆ, ತಿಳಿಯುವಿಕೆಯ ವೇಗ ಬಲು ನಿಧಾನ. ಅವರ ವೇಗದಲ್ಲಿ ನಾವು ಚಿಂತಿಸಿದರೆ ಏನೇನೂ ಸತ್ಯವನ್ನು ಹೇಳಲು ಆಗುವುದಿಲ್ಲ. "ಆದರೂ ಶರಣೆ ಅನ್ನಪೂರ್ಣ ಹಂಗರಗಿಯವರ ಒಂದು ಸಲಹೆ ತಲೆಯಲ್ಲಿ ಕೆಲಸ ಮಾಡುತ್ತಿತ್ತು. ಹೀಗಾಗಿಯೇ ಅಕ್ಕಮಹಾದೇವಿಯ ಚನ್ನಮಲ್ಲಿಕಾರ್ಜುನ ಹಾಗೆಯೇ ಇಟ್ಟು ಅದಕ್ಕೆ ಸೈದ್ಧಾಂತಿಕ ವಿವರಣೆ ಎಂಬಂತೆ ಬ್ರಾಕೆಟ್ಟನಲ್ಲಿ ಮಹಾದೇವಿಯಕ್ಕ ಪ್ರಿಯ ಲಿಂಗದೇವ ಎಂದು ಶರಣ ವಾಣಿ ಧ್ವನಿ ಸುರುಳಿಯಲ್ಲಿ ಹಾಡಿಸಲಾಗಿದೆ. ಹಾಡುವಾಗ ಬ್ರಾಕೆಟ್ ಹಾಕಲು ಬರುವುದಿಲ್ಲ ತಾನೆ ?

ಕೃತಯುಗದಲ್ಲಿ ಕೇತಾರವೆಂಬ ಮೂಲಸ್ಥಾನ
ತ್ರೇತಾಯುಗದಲ್ಲಿ ವಾರಣಾಸಿಯೆಂಬ ಮೂಲಸ್ಥಾನ

ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ
ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ
ಈ ನಾಲ್ಕು ಮೂಲಸ್ಥಾನ,
ನಾನಾ ಸ್ಥಾನಂಗಳ ಮುಟ್ಟದೆ ಜಂಗಮವೆ ಲಿಂಗವೆಂದು ನಂಬಿದೆ
ಲಿಂಗದೇವಾ. -ಬ.ವ.ದೀ 395

ಕೃತಯುಗದಲ್ಲಿ ಹಿಮಾಲಯದಲ್ಲಿರುವ ಕೇದಾರ ವಿಶೇಷ ಧಾರ್ಮಿಕ ಸ್ಥಾನವಾದರೆ, ತ್ರೇತಾಯುಗದಲ್ಲಿ ವಾರಣಾಸಿ ಪ್ರಸಿದ್ಧ ಯಾತ್ರಾಸ್ಥಳವಾಯಿತು. ದ್ವಾಪರದಲ್ಲಿ ಹಂಪೆಯ ವಿರುಪಾಕ್ಷ ಪ್ರಸಿದ್ಧನಾದರೆ ಕಲಿಯುಗದಲ್ಲಿ ಶ್ರೀಪರ್ವತದ ಮಲ್ಲಿಕಾರ್ಜುನ ಖ್ಯಾತನಾದ. ಆದರೆ ಲಿಂಗಾಯತ ಧರ್ಮದ ಸ್ಥಾಪಕರಾದ ಬಸವಣ್ಣನವರ ದಿವ್ಯಪಥದಲ್ಲಿ ಯಾವ ಭೌತಿಕ ಕ್ಷೇತ್ರವೂ ಮಹತ್ವಪೂರ್ಣವಲ್ಲ. ಜಂಗಮ ಅಂದರೆ ಜೀವಾತ್ಮ, ಸಮಾಜವೇ ಮಹತ್ವಪೂರ್ಣ. ಜಂಗಮ ಲಿಂಗವನ್ನು ಅಂದರೆ ಇಷ್ಟಲಿಂಗವನ್ನು ನಿಷ್ಠೆಯಿಂದ ಪೂಜಿಸುತ್ತ ಜಂಗಮ ಲಿಂಗದ ಅರ್ಥಾತ್ ಸಮಾಜದ ಸೇವೆ ಮಾಡುವುದೇ ನಿಜ ಧ್ಯೇಯವಾಯಿತು.

ಸತ್ಯವು ಹೀಗಿದ್ದಾಗ ಇದನ್ನರಿಯದ ಮಂದಮತಿಗಳು ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನನ್ನು ಹುಡುಕಿಕೊಂಡು ಶ್ರೀಶೈಲಕ್ಕೆ ಹೋದಳು ಎಂದು ಹೇಳುವುದುಂಟು.

ಹಾಲ ಹಿಡಿದು ಬೆಣ್ಣೆಯನರಸಲುಂಟೆ ?
ಲಿಂಗವ ಹಿಡಿದು ಪುಣ್ಯತೀರ್ಥಕ್ಕೆ ಹೋಗಲುಂಟೆ ?
ಇಷ್ಟ ಪ್ರಸಾದವ ಕೊಂಡು
ಅನ್ಯ ಬೋಧೆ, ಅನ್ಯ ಶಾಸ್ತ್ರಕ್ಕೆ ಹಾರೈಸಲೇತಕ್ಕೆ ?
ಇಷ್ಟಲಿಂಗವಿದ್ದಂತೆ ಸ್ಥಾವರ ಲಿಂಗಕ್ಕೆ ಶರಣೆಂದೊಡೆ
ತಡೆಯದೆ ಹುಟ್ಟಿಸುವ ಶ್ವಾನನ ಗರ್ಭದಲ್ಲಿ !
ಗುರು ಕೊಟ್ಟ ಲಿಂಗದಲ್ಲಿಯೇ ಎಲ್ಲ ತೀರ್ಥಗಳು
ಎಲ್ಲ ಕ್ಷೇತ್ರಂಗಳು ಇಹವೆಂದು ಭಾವಿಸಿ ಮುಕ್ತರಪ್ಪುದಯ್ಯಾ
ಇಂತಲ್ಲದೆ ಗುರುಕೊಟ್ಟ ಲಿಂಗವ ಕಿರಿದು ಮಾಡಿ
ತೀರ್ಥ ಲಿಂಗವ ಹಿರಿದು ಮಾಡಿ ಹೋದಾತಂಗೆ ಅಘೋರ ನರಕ
ತಪ್ಪದು ಕಾಣಾ, ಚನ್ನಮಲ್ಲಿಕಾರ್ಜುನ,
(ಮಹಾದೇವಿ ಪ್ರಿಯ ಲಿಂಗದೇವಾ) -ಮ.ಅ.ವಚನ 157

ಇಷ್ಟಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಶರಣೆಂದಡೆ ತಡೆಯದೆ ಹುಟ್ಟಿಸುವ ಶ್ವಾನನ ಗರ್ಭದಲ್ಲಿ ಎಂದು ಹೇಳಿದ ಅಕ್ಕ ಶ್ರೀಶೈಲದ ಸ್ಥಾವರಲಿಂಗವನ್ನು ಅರಸಿಹೋಗುವುದುಂಟೆ ? ಆದ್ದರಿಂದ ಏಕದೇವೋಪಾಸನೆಯ ತತ್ತ್ವ ತಿಳಿಯುವ ಮೊದಲು ಚನ್ನಮಲ್ಲಿಕಾರ್ಜುನ ವಚನಾಂಕಿತವು ಶ್ರೀಗಿರಿಯ ಮಲ್ಲಿಕಾರ್ಜುನ ಶಿವನಿಗೆ ಅನ್ವಯಿಸಿದರೆ, ಏಕದೇವೋಪಾಸನೆಯ ಆರಾಧಕಳಾದ ಮೇಲೆ ಸಾವಿಲ್ಲದ ಕೇಡಿಲ್ಲದ, ರೂಹಿಲ್ಲದ ನಿರಾಕಾರನಾದ ಲಿಂಗದೇವನಿಗೆ ಅನ್ವಯಿಸುತ್ತದೆ. ಅದಕ್ಕಾಗಿಯೇ ಚನ್ನಮಲ್ಲಿಕಾರ್ಜುನ ಎಂಬ ವಚನಾಂಕಿತವನ್ನು ಹಾಗೆಯೇ ಇಟ್ಟು ಅದಕ್ಕೆ ಮಹಾದೇವಿಯಕ್ಕ ಪ್ರಿಯ ಲಿಂಗದೇವ ಎಂದು ವಿವರಣೆ ಕೊಡಲಾಗಿದೆ. ಸ್ತೋತ್ರ ವಚನದಲ್ಲಿ ಮಹಾದೇವಿಯಕ್ಕ ಎಂದೇ ಅಕ್ಕನನ್ನು ಹೆಸರಿಸಲಾಗಿದೆಯಷ್ಟೆ ?

ಮುರುಘರಾಜೇಂದ್ರ ಶರಣರ ಅಪಸ್ವರ

ಬಸವ ಕೇಂದ್ರದವರಿಗೆ ಯಾವ ವಿಶೇಷ ಕಾರ್ಯಕ್ರಮ, ಯೋಜನೆ ಇಲ್ಲ. ಜನಗಣತಿಯಂಥ ಬೃಹತ್ ಪ್ರಸಂಗ ಎದುರಾದಾಗ ಕಡೆಯ ದಿನಗಳಲ್ಲಿ ಬಾಯಿಬಿಟ್ಟರೇ ವಿನಾ ಬಹಿರಂಗವಾಗಿ, ಧೈರ್ಯವಾಗಿ ಲಿಂಗಾಯತ ಎಂದು ಬರೆಸಿರಿ ಎಂದು ಹೇಳುವ ಕಾರ್ಯಕ್ರಮ ರೂಪಿಸಲಿಲ್ಲ. ನಮ್ಮ ರಾಷ್ಟ್ರೀಯ ಬಸವ ದಳಗಳವರಂತೆ ಪ್ರಚಾರ ಕಾರ್ಯಕ್ರಮ ಹಾಕಿಕೊಳ್ಳಲಿಲ್ಲ. ಅವರ ಏಕಂಶದ ಕಾರ್ಯಕ್ರಮ ನಮ್ಮನ್ನು ವಿರೋಧಿಸುವುದು ಮತ್ತು ರಾಷ್ಟ್ರೀಯ ಬಸವ ದಳಗಳನ್ನು ಒಡೆಯಲು ಯತ್ನಿಸುವುದು. ಹೀಗಾಗಿ ಬಸವ ಕೇಂದ್ರದವರನ್ನು ಸದಾ ಚಟುವಟಿಕೆಯಲ್ಲಿಡಲು ನಾವೂ ಏನಾದರೂ ಹೊಸ ಹೊಸದನ್ನು ಮಾಡಲೇ ಬೇಕಾದ ಅನಿವಾರ್ಯ ಪರಿಸ್ಥಿತಿ. ಅವರು ಸಮಾಜ-ಸಮಷ್ಟಿಯ ಹಿತಕ್ಕಾಗಿ ಈವರೆಗೂ ಒಂದೂ ಹೋರಾಟ ಕೈಕೊಂಡಿಲ್ಲ. ಚಿಕ್ಕವೀರರಾಜೇಂದ್ರ, ಮಹಾಚೈತ್ರ ರದ್ದತಿ, ವಿಶ್ವವಿದ್ಯಾಲಯ ನಾಮಕರಣ ಚಳುವಳಿ, ಜನಗಣತಿಯ ಜಾಗೃತಿ ಇಂಥ ಒಂದರಲ್ಲೂ ತೊಡಗದೆ ನಮ್ಮನ್ನು ವಿರೋಧಿಸಲು ಏನು ಸಿಗುತ್ತೆ ಎಂದು ಹೊಂಚುಹಾಕುತ್ತ ಕುಳಿತಿರುತ್ತಾರೆ. ಮಾತ್ರವಲ್ಲ ಸಮಾಜ ಸಮಷ್ಟಿಗೆ ಹಿತವಾಗುವಂಥ ? ಶರಣರ ಅವಹೇಳನ ಪ್ರತಿಭಟಿಸುವಂತಹ ಮಹಚೈತ್ರ ರದ್ದತಿ, ವಚನ ನಿರ್ವಚನ ವಿರೋಧ ಮಾಡುವಾಗ ಒಳಗೊಳಗೇ ಪಿತೂರಿ ಸಹ ಮಾಡಿದರು.

ದಾವಣಗೆರೆಯಿಂದ ಒಂದು ಫೋನ್ ಬಂದಿತು. ಅಲ್ಲಿ ಒಂದು ಕಾರ್ಯಕ್ರಮದಲ್ಲಿ ಶ್ರೀ ಮುರುಘರಾಜೇಂದ್ರ ಶರಣರು ಹೇಳಿದರಂತೆ : ''ಮಾತೆ ಮಹಾದೇವಿಯವರು ಅಕ್ಕ ಮಹಾದೇವಿಯ ವಚನಾಂಕಿತ ಬದಲಿಸಿದ್ದಾರೆ. ವಚನವನ್ನು ತಿರುಚಿದ್ದಾರೆ. ಮಹಾದೇವಿಯಕ್ಕ ಪ್ರಿಯ ಲಿಂಗದೇವ ಎನ್ನುವುದರಲ್ಲಿ ತಮ್ಮ ಹೆಸರು, ತಮ್ಮ ಪ್ರಿಯಕರನ ಹೆಸರು ಸೇರಿಸಿದ್ದಾರೆ. ಇದರ ವಿರುದ್ಧ ನಾವು ತೀವ್ರವಾದ ಬೃಹತ್ ವ್ಯಾಪಕ ಹೋರಾಟವನ್ನು ಕೈಗೊಳ್ಳುತ್ತಿದ್ದೇವೆ. ನೀವೆಲ್ಲರೂ ಸಹಕರಿಸಬೇಕು.

ದಾವಣಗೆರೆಯಲ್ಲಿ ಅವರ ಅಭಿಮಾನಿಗಳು ಕೆಲವರು ಇದ್ದಾರೆ. ಇವರೆಲ್ಲ ವ್ಯಕ್ತಿನಿಷ್ಠೆಯುಳ್ಳವರು. ಈಗಲಾದರೂ ಇವರು ವ್ಯಕ್ತಿ ನಿಷ್ಠೆ ತೊರೆದು ನಮ್ಮ ಹೋರಾಟವನ್ನು ಬೆಂಬಲಿಸುವ ಪ್ರಾಮಾಣಿಕತೆ ತೋರಬೇಕು.'' ಎಂದು ಕರೆ ನೀಡಿದರಂತೆ.

ಈಗ ಶ್ರೀ ಮುರುಘರಾಜೇಂದ್ರ ಶರಣರಿಗೆ ಒಂದು ಹೋರಾಟದ ಅಗತ್ಯವಿದೆ. ಏಕೆಂದರೆ ಕೋಟಿಗಟ್ಟಳೆ ಹಣದ ಅವ್ಯವಹಾರ, ಕಳ್ಳ ಸಾಗಾಣಿಕೆ ಒಳಗೊಂಡ ಪ್ರಾಚ್ಯವಸ್ತುಗಳ ಮಾರಾಟದ ವ್ಯವಹಾರದಲ್ಲಿ ಸಿಕ್ಕಿ ಬಿದ್ದು ಸ್ಥಳೀಯವಾಗಿ ಗೌರವವನ್ನು ಕಳೆದುಕೊಂಡಿದ್ದಾರೆ. ಅಷ್ಟಾದರೂ ತಮ್ಮ ಆಡಳಿತಾಧಿಕಾರಿಯ ಅವ್ಯವಹಾರವನ್ನು ಸಮರ್ಥಿಸಿಕೊಂಡಿದ್ದಾರೆ. ಹಣದ ಬಲದಿಂದ ಪೋಲಿಸ್ ಇಲಾಖೆಯನ್ನು ಮೌನಗೊಳಿಸಿ ಪತ್ರಿಕೆಗಳಲ್ಲಿ ಹೆಚ್ಚಿನ ಸುದ್ದಿಯಾಗದಂತೆ ನೋಡಿಕೊಂಡಿರುವರಾದರೂ ಸ್ಥಳೀಯ ಜನರ ಬಾಯಿ ಮುಚ್ಚಿಸಲಾರದವರಾಗಿದ್ದಾರೆ ಎಂದು ಚಿತ್ರದುರ್ಗದ ಜನತೆ ಗುಸುಗುಸು ಮಾತನಾಡುತ್ತಾರೆ. ಇದರಲ್ಲಿ ಸತ್ಯವೆಷ್ಟೋ ಸುಳ್ಳೆಷ್ಟೋ ? ಬಗೆಬಗೆಯ ವದಂತಿಗಳು ಜನರ ಬಾಯಲ್ಲಿ ಸುಳಿದಾಡುತ್ತವೆ. ವಿದೇಶಕ್ಕೆ ಸಾಗಿಸಲು ಸಿದ್ಧವಾಗಿದ್ದ ಕೋಟಿಗಟ್ಟಳೆ ಬೆಲೆ ಬಾಳುವ ಪ್ರಾಚ್ಯ ವಸ್ತುಗಳನ್ನು ವಶಪಡಿಸಿಕೊಂಡು ಪ್ರದರ್ಶನಕ್ಕಿಟ್ಟಾಗ ಅದನ್ನು ಗೃಹಮಂತ್ರಿ ಶ್ರೀ ಖರ್ಗೆ, ಡಿಜಿಪಿ ಶ್ರೀ ದಿನಕರ್ ನೋಡುತ್ತಿರುವ ಚಿತ್ರ ವೃತ್ತಪತ್ರಿಕೆಗಳಲ್ಲಿ ಪ್ರಕಟವಾದದ್ದುಂಟು. ಆದರೆ ಅದರ ಹಿನ್ನೆಲೆಯಲ್ಲಿ ಒಂದು ಮಠ ಇದೆ ಎಂಬ ಕಲ್ಪನೆ ಕನಸು ಮನಸಲ್ಲೂ ಸುಳಿದಿರಲಿಲ್ಲ. ಒಂದು ವಾರ ಪತ್ರಿಕೆಯಲ್ಲಿ ವಿವರಗಳು ಬಂದಿವೆ ಎಂದು ಅನೇಕರು ಹೇಳದರೂ ಆ ಪತ್ರಿಕೆ ನೋಡಿ ತಲೆಕೆಡಿಸಿಕೊಳ್ಳಲು ಹೋಗಲಿಲ್ಲ. ಆದರೆ ದಿ. 26-11-2000ದಂದು ಪತ್ರಿಕಾಗೋಷ್ಠಿಯೊಂದನ್ನು ಚಿತ್ರದುರ್ಗದಲ್ಲಿ ಕರೆದು ನಾನು ಮಾತನಾಡುವಾಗ

ಉದಯ ವಾಹಿನಿಯವರು, ಪತ್ರಿಕೆಯವರು ದಿಢೀರನೆ ಚೀಟಿ ಕಳಿಸಿ ಪ್ರಶ್ನೆ ಕೇಳಿಯೇ ಬಿಟ್ಟರು. ''ಮಠವೊಂದು ಪ್ರಾಚ್ಯ ವಸ್ತುಗಳನ್ನು ಕಳ್ಳಸಾಗಾಣಿಕೆ ಮಾಡುತ್ತಿರುವ ಬಗ್ಗೆ ನೀವು ತಿಳಿದಿರಬಹುದು. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?'' ಒಳ್ಳೆ ತರಲೆ ಪ್ರಶ್ನೆ. ''ವಿವಿಧ ವದಂತಿಗಳನ್ನು ಚಿತ್ರದುರ್ಗದಲ್ಲಿ ಕೇಳಿದ್ದೇನೆ. ಪತ್ರಿಕೆಗಳ ವರದಿ ನೋಡಿದ್ದೇನೆ. ಸತ್ಯ ಸಂಗತಿ ಏನೆಂದು ಬಯಲಿಗೆ ಬರಬೇಕಾದರೆ ಸಿ.ಬಿ.ಐ ತನಿಖೆಯಾಗಬೇಕು. ರಾಜ್ಯ ಪೋಲೀಸರ ತನಿಖೆಯಿಂದ ಸತ್ಯ ಹೊರಬರದು'' ಎಂದು ಹೇಳಿಯೇ ಬಿಟ್ಟೆ.

ಆದ್ದರಿಂದ ಈ ಪ್ರಾಚ್ಯವಸ್ತು ಕಳ್ಳಸಾಗಾಣಿಕೆಯ ಆರೋಪ ಎರಗಿ ಮಠದ ಹೆಸರು ಕೆಟ್ಟಿರುವುದರಿಂದ ಈಗ ಪುನಃ ಕಳೆದುಹೋದ ಕೀರ್ತಿ ಪಡೆದುಕೊಂಡು, ಆ ಮಸಿ ಒರೆಸಲು ಒಂದು ಹೋರಾಟದ ಅಗತ್ಯವಿದೆ. ಇದಕ್ಕೆ ಮಹಾದೇವಿಯಕ್ಕ ಪ್ರಿಯ ಲಿಂಗದೇವನು ನೆರವಾಗಬಹುದೆ ? ಎಂಬುದನ್ನು ಕಾಯ್ದು ನೋಡಬೇಕು. ಮುರುಘರಾಜೇಂದ್ರ ಶರಣರು ಹೋರಾಟಕ್ಕೆ ಕೈ ಹಾಕಿದರೆ ಅದಕ್ಕೂ ಒಳ್ಳೆಯ (?) ವಿಷಯ-ಪ್ರಾಚ್ಯವಸ್ತು ಕಳ್ಳಸಾಗಾಣಿಕೆಯ ವ್ಯವಹಾರದ ಸಿ.ಬಿ.ಐ ತನಿಖೆಗಾಗಿ ಸರ್ಕಾರವನ್ನು ಒತ್ತಾಯಿಸಲು ರಾಷ್ಟ್ರೀಯ ಬಸವ ದಳದವರಿಗೂ ಸದವಕಾಶ ಸಿಗುವುದಲ್ಲವೆ ? ಪತ್ರಿಕೆಗಳಿಗೂ ಉತ್ತಮ ಆಹಾರ, ಜನರಿಗೆ ಮನರಂಜನೆ ! ★

ಜನವರಿ-ಫೆಬ್ರವರಿ -2001 ಕಲ್ಯಾಣ ಕಿರಣ

ತಾಂತ್ರಿಕ ದೋಷದಿಂದಾದ ಪ್ರಮಾದ

ಆತ್ಮೀಯ ಓದುಗರೇ,

ಕಲ್ಯಾಣ ಕಿರಣ ಪತ್ರಿಕೆಗಾಗಿ ಜಾತಕ ಪಕ್ಷಿಗಳಂತೆ ಕಾಯುತ್ತಿರುವಿರಿ. ನಿಮ್ಮ ಕೈಗೆ ಸಕಾಲಕ್ಕೆ ತಲ್ಪಿಸಬೇಕು ಎಂಬ ಹಂಬಲ ನಮಗೂ ಉಂಟು. ಡಿಸೆಂಬರ್ ಸಂಚಿಕೆ ಕೈಸೇರಿದ ಮೇಲೆ ಜನವರಿ ಸಂಚಿಕೆ ಕಳಿಸುವ ಸಿದ್ಧತೆ ಮಾಡುವಾಗಲೇ ನೂತನ ಧ್ವನಿಸುರುಳಿಗಳನ್ನು ಸಿದ್ಧಪಡಿಸುವುದಕ್ಕಾಗಿ ಹಗಲು ರಾತ್ರಿ ಕೆಲಸ ಮಾಡಬೇಕಾಗಿ ಬಂದಿತು. ಜನವರಿ-ಫೆಬ್ರವರಿ ಸಂಚಿಕೆಯನ್ನು ಹೆಚ್ಚಿನ ಪುಟಗಳೊಡನೆ ಕಳಿಸುವ ಆದಮ್ಯ ಉತ್ಸಾಹದಿಂದ 80 ಪುಟಗಳ ಪತ್ರಿಕೆ ಸಿದ್ಧಪಡಿಸಲಾಯಿತು. ಆದರೆ ಅದರಲ್ಲಿ ಒಂದು ತಾಂತ್ರಿಕ ದೋಷ ಉಂಟಾಗಿ ಫೆಬ್ರವರಿ 1 ಕ್ಕೆ ನಿಗದಿಯಾದ ದಿನಾಂಕದಂದು ಅಂಚೆಗೆ ಹಾಕಲಾಗಲಿಲ್ಲ.

ಮೇಲಧಿಕಾರಿಗಳನ್ನು ಕಂಡು ಲೋಪವನ್ನು ತಿದ್ದಿ ರಿಯಾಯಿತಿ ದರ 15ಪೈಸೆದಲ್ಲಿ ಪೋಸ್ಟ್ ಮಾಡಲಾಗದೆ ಪ್ರತಿಯೊಂದಕ್ಕೆ 1 ರೂ.ದಂತೆ ಹೆಚ್ಚುವರಿ ವ್ಯಯಿಸಲಾಯಿತು. ಇಷ್ಟೆಲ್ಲಾ ಆಗುವ ಹೊತ್ತಿಗೆ ಫೆಬ್ರವರಿ 17 ಬಂದಿತು. ಜನವರಿ-ಫೆಬ್ರವರಿ ಸಂಯುಕ್ತ ಸಂಚಿಕೆಯು ಅತ್ಯಂತ ಕ್ರಾಂತಿಕಾರಿಯಾಗಿ ಹೊರಬಂದಿದ್ದು ಈಗಾಗಲೇ ನಿಮ್ಮ ಕೈಸೇರಿದೆ. ತುಂಬಾ ಬೇಗನೆ ನಿಮ್ಮ ಕೈಗೆ ಮುಟ್ಟಿಸಬೇಕೆಂಬ ನಮ್ಮ ಆಸೆ ಈಡೇರಲಿಲ್ಲ. ತಡವಾಗಿ ತಲ್ಪಿದರೂ ಓದಿ, ಚಿಂತನಾಮಗ್ನರಾಗಿದ್ದೀರೆಂದು ನಮ್ಮ ನಿರೀಕ್ಷೆ. ವಿಳಂಬಕ್ಕಾಗಿ ವಿಷಾದಿಸುತ್ತೇವೆ.

- ಕಲ್ಯಾಣ ಕಿರಣ ಸಂಪಾದಕರು.

ವಚನ ಕಿರಣ

ಭುವಿಗೆ ಬಂದಿಹ ಮಾತಾಜಿ
ವಚನಾಮೃತವೆಂಬ ಸಾಗರದಾಳಕ್ಕೆ
ಇಳಿದು 'ಲಿಂಗದೇವ'ನೆಂಬ ಅನರ್ಘ ರತ್ನವನೇ ತೆಗೆದಿಹರು
ಲೀಲಾವಿಶೇಷ ಲಿಂಗದೇವನ ಕಾರುಣ್ಯದಿಂದ.

-ಮಹಾದೇವಿ, ಧಾರವಾಡ

ಸಂಶೋಧನೆಯೋ ?! - ಸಂಶೋಷಣೆಯೋ ?!

ಬಸವ ಪಥ ಮಾಸಿಕ ಪತ್ರಿಕೆ ನವಂಬರ್, 2000 ಕೈಸೇರಿತು. ಸಹಜ ಕುತೂಹಲದಿಂದ ಪುಟಗಳನ್ನು ತಿರುಗಿಸುತ್ತಾ ಹೋದೆ. ಪುಟ 23ರಲ್ಲಿ ಶರಣ ಎಂ. ನಾಗರಾಜ ಅವರ ವಚನಕಾರ ಕೋಲ ಶಾಂತಯ್ಯ ಎಂಬ ಲೇಖನ ಪ್ರಕಟವಾಗಿತ್ತು . ಲೇಖಕರ ಪರಿಚಯಕ್ಕಾಗಿ ಹುಡುಕಾಡಿದಾಗ ಅವರೊಬ್ಬ ಹಂಪಿ ಕನ್ನಡ ವಿಶ್ವವಿದ್ಯಾಲಯದ, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿರುವುದು ತಿಳಿಯಿತು. ಇಂಥ ಸುಶಿಕ್ಷಿತರು 12 ನೇ ಶತಮಾನದ ಅನುಭವ ಮಂಟಪದಲ್ಲಿ ತಯಾರಾದ ಶರಣ ಕೋಲ ಶಾಂತಯ್ಯ ಅವರ ಜೀವನ-ಸಾಧನೆ - ಸಂದೇಶ - ಸಂಸ್ಕೃತಿಯ ಬಗ್ಗೆ ತಮ್ಮ ಸಂಶೋಧನೆಯ ಬುದ್ಧಿಯ ಬಲದಿಂದ, ಸತ್ಯದ ಬೆಳಕನ್ನು ಚೆಲ್ಲಿ ಹೆಚ್ಚಿನ ಮಾಹಿತಿ ನೀಡಿರುತ್ತಾರೆ ಎಂದು ಓದಲು ಉಪಕ್ರಮಿಸಿದೆ. ಮುಂದೆ ನನಗೆ ಸಿಕ್ಕಿದ್ದು ತಥ್ಯವೋ? ಮಿಥ್ಯವೋ? ಕತ್ತಲೆಯೋ? ಬೆಳಕೋ? ಏಕೆ ಕುತೂಹಲವೇ? ಹಾಗಿದ್ದರೆ ಸಮಾನ ಮನಸ್ಕರಾದ ನೀವು ನನ್ನೊಂದಿಗೆ ಬನ್ನಿ, ಹುಡುಕೋಣ

ಸಂಶೋಧನೆ ಎಂದರೇನು?

ವಿಷಯ ಯಾವುದೇ ಇರಲಿ, ಅದರ ಬಗ್ಗೆ ಸತ್ಯವೋ-ಮಿಥ್ಯವೋ? ಸರಿಯೋ-ತಪ್ಪೋ ಎಂಬ ಸಂದೇಹದಿಂದ ಶೋಧನೆಗೆ ತೊಡಗುವುದು. ಇಂಥ ಶೋಧನೆ ನಿಜವಾಗಲೂ ಪ್ರಾಮಾಣಿಕವೂ ಆಳವೂ ಆಗಿದ್ದರೆ ಬುದ್ಧಿಯ ಆಧಾರದ ಮೇಲೆ ಅದು ಹೊಸ ಹೊಸ ಚಿಂತನೆಗಳನ್ನು- ನಂಬಿಕೆಗಳನ್ನು ಸೃಷ್ಟಿಸುತ್ತದೆ. ಈ ಮಾತಿಗೆ ಕೋಲ ಶಾಂತಯ್ಯನವರ ವಚನದೊಂದಿಗೆ ಲೇಖಕರು ತಮ್ಮ ಒಪ್ಪಿಗೆಯನ್ನು ಹೀಗೆ ಸೂಚಿಸುತ್ತಿದ್ದಾರೆ.

ಸಾಧಕನ ಸಾಧನೆಯನ್ನು ಭಕ್ತಿ-ಜ್ಞಾನ-ವೈರಾಗ್ಯಗಳ ಮೂಲಕ ಪಡೆದ ಸತ್ಯದರ್ಶನದ ಸವಿಯನ್ನು ತನ್ನೊಂದು ವಚನದಲ್ಲಿ ಹೀಗೆ ಹೇಳುತ್ತಾನೆ-

ಭಕ್ತಿ ಜ್ಞಾನ ವೈರಾಗ್ಯದಿಂದ ಅರಿಯಬೇಕೆಂಬುದು
ಭಕ್ತಿಯೋ ಜ್ಞಾನವೋ ವೈರಾಗ್ಯವೋ?
ಮೂರಕ್ಕೆ ಬೇರೊಂದೆಡೆಯುಂಟೆ?
ಅದರ ಎಡೆಯ ಗುಡಿಯ ತೋರು
ಬರಿಯ ಮಾತಿನ ಮಾಲೆ ಬೇಡ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ

ಮುಂದೆ ಈ ಲೇಖಕರು ಮತ್ತೊಂದು ವಚನವನ್ನು ಕುರಿತು ಹೇಳುವಾಗ ''.... ವಚನಕಾರರು ವೇದ ಪುರಾಣ ಆಗಮ ಶಾಸ್ತ್ರಗಳ ಡೊಂಕನ್ನು ತೋರಿಸಲು ತೆಗಳುವ ವಚನಗಳನ್ನು ರಚಿಸಿದ್ದರೆ ಕೋಲ ಶಾಂತಯ್ಯನು ಅದೇ ವೇದ ಪುರಾಣ ಆಗಮ ಶಾಸ್ತ್ರಗಳನ್ನು ತೆಗಳದೆ ಅವುಗಳಲ್ಲಿರುವ ಉತ್ತಮವಾದ ಅಂಶಗಳನ್ನು ಗುರುತಿಸಿ ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸುವ ಮೂಲಕ ಅವುಗಳ ಪ್ರಾಶಸ್ತ್ಯವನ್ನು ತನ್ನ ವಚನದಲ್ಲಿ ಹೀಗೆ ನಿರೂಪಿಸಿದ್ದಾನೆ.

ಶಾಸ್ತ್ರವೇ ಅಡ್ಡಣಿಗೆಯಾಗಿ, ಆಗಮವೆ ಹರಿವಾಣವಾಗಿ
ಪುರಾಣವೇ ಓಗರವಾಗಿ ಉಂಬಾತ ವೇದವಾಗಿ
ಸಕಲ ರುಚಿಯನರಿದು ಭೋಗಿಸುವ ಪ್ರಣವ (ಪ್ರಾಣವೇ) ತಾನಾಗಿ
ಅದರ ಭೇದ ವಿತರಿಂದ ಅಳಿವು ಉಳಿವು ?

ನಿನ್ನ ನೀನರಿ ಪುಣ್ಯಾರಣ್ಯ ದಹನ ಭೀಮೇಶ್ವರ ಲಿಂಗ ನಿರಂಗ ಸಂಗ

ಎಂದು ಪ್ರತಿಪಾದಿಸುತ್ತಾರೆ. ಆದರೆ ಈ ವಚನವು ಶಾಸ್ತ್ರ ಪುರಾಣ ಆಗಮಗಳನ್ನು ಖಂಡಿಸಿರುವುದು ಸ್ಪಷ್ಟವಾಗಿಯೇ ತಿಳಿದುಬರುತ್ತಿದೆ. ಏಕೆಂದರೆ ಯಾವುದೇ ಧರ್ಮವಿರಲಿ, ತತ್ತ್ವವಿರಲಿ,ಅದರ ಅನುಯಾಯಿಯಾದವನು ತತ್ಸಂಬಂಧವಾದ ತತ್ತ್ವ ಮತ್ತು ಆದರ್ಶಗಳ ಪ್ರಣಾಳಿಕೆಯೊಳಗೆ ಮಾತ್ರ ತನ್ನ ಜೀವನ ಸಾಧನೆ - ಸಂಸ್ಕೃತಿಗಳನ್ನು ಪ್ರತಿಬಿಂಬಿಸುತ್ತಾನೆ ಎಂಬುದನ್ನು ಕೋಲ ಶಾಂತಯ್ಯನವರೇ ತಮ್ಮೊಂದು ವಚನದಲ್ಲಿ ಹೇಳುತ್ತಿದ್ದಾರೆ.

ಎನ್ನಾಕಾರವೆ ನೀನಯ್ಯಾ ಬಸವಣ್ಣ
ನಿ(ನ್ನಾಕಾರವೆ) ಕೋಲ ಶಾಂತ
ಹಿಡಿದಿರ್ದ ಕರಸ್ಥಲ ಬಸವಣ್ಣನಿಂದ ಉದಯವಾದ ಕಾರಣ
ಆ ಬಸವಣ್ಣನ ಶ್ರೀ ಪಾದಕ್ಕೆ ಅಹೋರಾತ್ರಿಯಲ್ಲಿ
ನಮೋ ನಮೋ ಎಂಬೆ
ಪುಣ್ಯಾರಣ್ಯದಹನ ಭೀಮೇಶ್ವರ ಲಿಂಗ ನಿರಂಗ ಸಂಗ -(ಸಂ. ವ. ಸಂ - 102)

ಈ ವಚನಕ್ಕೆ ಬೆಂಬಲವಾಗಿ ಜನಪದ ಕವಿಗಳು ಹಾಡುತ್ತಿದ್ದಾರೆ :-

ವಾದ ವಾದವೆ ನಡೆದು, ವೇದ ವೇದವೆ ಸೋತು
ಭೇದ ಬೇಡೆಂದು ಬಸವಣ್ಣ। ಸಾರುದಕೆ
ಹೋದ ಹೋದಲ್ಲಿ ಹೊಸ ಮಾತು॥

ಮಿದ್ದಿದನು ಶಿವಗೋಷ್ಠಿ ಬಿದ್ದು ವೇದಗಳಂದು
ಹುದ್ದೆ ಹೊಂದಿದವು ಜಗದೊಳಗೆ। ವಚನಗಳ
ಸುದ್ದಿ ನಾಡ್ತುಂಬಿ ಜನಹಿಗ್ಗಿ॥ -(ನೇ.ಆ 73)

ನಿಜಸ್ಥಿತಿ ಹೀಗಿರುವಾಗ ಇತರ ವಚನಕಾರರಂತೆ ವೇದ ಶಾಸ್ತ್ರ ಆಗಮ ಪುರಾಣಗಳನ್ನು ಶಾಂತಯ್ಯನವರು ತೆಗಳಲಿಲ್ಲ ಎಂದು. ಹೇಗೆ ಹೇಳುತ್ತಾರೆ ? ಅಂಥವರನ್ನು ಕುರಿತೇ ಶಾಂತಯ್ಯನವರು ಹೇಳುತ್ತಿದ್ದಾರೆ.

ಬ್ರಹ್ಮನ ಬಾಯ ಓಗರವನುಂಡು
ವಿಷ್ಣುವಿನ ಕೈಯ ಸೀರೆಯ ಹೊದ್ದು
ರುದ್ರನ ಮನೆಯಲ್ಲಿ ತಿರುಗಾಡುತ್ತಿಪ್ಪ
ಭದ್ರಾಂಗಿಗಳು ನೀವು ಕೇಳರೋ
ಬ್ರಹ್ಮನ ಬಾಯ ಮುಚ್ಚಿ , ವಿಷ್ಣುವಿನ ಕೈಯ ಮುರಿದು
ರುದ್ರನ ಮನೆಯ ಸುಟ್ಟು ಬುದ್ಧಿವಂತರಾಗಿ
ಬುದ್ಧಿವಂತರಾದವರ ಅರಿದವನರಿ
ಪುಣ್ಯಾರಣ್ಯ ದಹನ ಭೀಮೇಶ್ವರ ಲಿಂಗ ನಿರಂಗ ಸಂಗ -ಸಂ. ವ. ಸಂ - 7

12ನೇ ಶತಮಾನದ ಅನುಭವ ಮಂಟಪದಲ್ಲಿ ತಯಾರಾದ ಸಮಾಜದ ಕೆಳಸ್ತರದಿಂದ ಬಂದ ವಚನಕಾರ ಕೋಲ ಶಾಂತಯ್ಯನವರಂಥ ಒಬ್ಬ ತತ್ತ್ವನಿಷ್ಠ, ಸುಜ್ಞಾನಿ ಶರಣನಿಗೂ, 21ನೇ ಶತಮಾನದ ಹಂಪೆಯ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿಭಾಗದಲ್ಲಿ ತಯಾರಾಗುತ್ತಿರುವ ಒಬ್ಬ ಪದವೀಧರ ಸುಶಿಕ್ಷಿತ ವಿದ್ಯಾರ್ಥಿಗೂ ಇರುವ ವ್ಯತ್ಯಾಸವೇನು ? ಇಬ್ಬರ ನಡುವಿನ ಅಂತರವೇನು ? ಇವರಿಬ್ಬರ

ವ್ಯಕ್ತಿತ್ವದ ಮಾನದಂಡ ಯಾವುದು? ಇಬ್ಬರು ಪಡೆದ - ಪಡೆಯುತ್ತಿರುವ ಜ್ಞಾನದ ಪರಿಣಾಮವೇನು? ಅನುಭವ ಮಂಟಪದಲ್ಲಿ ಸಿಗುತ್ತಿದ್ದ ಶಿಕ್ಷಣದ ಸ್ವರೂಪ ಎಂಥದ್ದಿರಬಹುದು ? ತರಬೇತಿ ಹೇಗಿತ್ತು ? ಎಂಬ ಗಮನಾರ್ಹ ಪ್ರಶ್ನೆಗಳು ಕಾಡುತ್ತಿವೆ.

ಶರಣ. ಎಂ. ನಾಗರಾಜ ಅವರು ತಮ್ಮ ಲೇಖನದ ಪ್ರಾರಂಭದಲ್ಲಿ ಬಸವ ಯೋಗಿ ಶ್ರೀ ಸಿದ್ಧರಾಮೇಶ್ವರ ವಚನವೊಂದನ್ನು ಉದಾಹರಿಸುವುದರ ಮೂಲಕ ಹೀಗೆ ಪ್ರತಿಪಾದಿಸುತ್ತಾರೆ. '' ವಚನ ಸಾಹಿತ್ಯದಲ್ಲಿ ದಲಿತರು, ಶೋಷಿತರು, ಸ್ತ್ರೀಯರು, ಕಾಯಕ ಜೀವಿಗಳು ಮೊದಲಾದ ಹತ್ತು ಹಲವಾರು ಕುಲದವರು ಕುಲಭೇದ ಮರೆತು ಒಟ್ಟಿಗೆ ಬೆರೆತು ಸಮಾಜದ ಸಮಾನತೆಗೆ ಶ್ರಮಿಸಿದರು. ಇಲ್ಲಿ ತಾವು ನಂಬಿದ ಧರ್ಮ ; ರೂಪಿಸಿಕೊಂಡ ಸಿದ್ಧಾಂತ ಮತ್ತು ಸಾಧನೆಯ ಪರಿಪಕ್ವತೆಯಿಂದ ಮೂಡಿದ ಅರಿವು ವಚನ ಸಾಹಿತ್ಯವಾಗಿ ಸಿದ್ಧರಾಮಯ್ಯನ ಒಂದು ವಚನದ ಪ್ರಕಾರ -

ಅಲ್ಲಯ್ಯಗಳ ವಚನ ಎರಡೆಂಬತ್ತು ಕೋಟಿ ;
ಅಪ್ಪಯ್ಯಗಳ ವಚನ ನಾಲ್ಕು ಲಕ್ಷದ ಮೂವತ್ತಾರು ಸಾಸಿರ
ಎಮ್ಮಯ್ಯಗಳ ವಚನ ವಚನಕ್ಕೊಂದು
ನೀಲಮ್ಮನ ವಚನ ಲಕ್ಷದ ಮೇಲೆ ಹನ್ನೊಂದು ಸಾಸಿರ
ಗಂಗಾಂಬಿಕೆಯ ವಚನ ಲಕ್ಷದ ಮೇಲೆ ಎಂಟು ಸಾಸಿರ
ಮಡಿವಾಳಣ್ಣನ ವಚನ ಮೂರು ಕೋಟಿ ಮುನ್ನೂರು
ಹಡಪದಯ್ಯಗಳ ವಚನ ಹನ್ನೊಂದು ಸಾಸಿರ
ಮರುಳಸಿದ್ಧನ ವಚನ ಅರವತ್ತೆಂಟು ಸಾಸಿರ
ಇಂತಪ್ಪ ವಚನ ರಚನೆಯ ಬಿಟ್ಟು
ಕುತ್ಸಿತ ಕಾವ್ಯಾಲಂಕಾರವನೋದುವರ ನೋಡಿ

ಕಪಿಲಸಿದ್ಧ ಮಲ್ಲಿಕಾರ್ಜುನ

ಒಳ್ಳೆಯದು. ಆದರೆ ಇಲ್ಲಿ ಲೇಖಕರು ವಚನವನ್ನು ಅದು ಇದ್ದಂತೆ ಪೂರ್ತಿ ಬರೆಯುವುದನ್ನು ಬಿಟ್ಟು ಒಂದು ಸಾಲನ್ನು ಗೆರೆ ಹಾಕಿ ಖಾಲಿ ಬಿಟ್ಟದ್ದೇಕೆ ? ಇಂಥ ಅಪೂರ್ಣ ವಚನವಿರುವ ಲೇಖನವನ್ನು ಪತ್ರಿಕೆಯವರು ಹೇಗೆ ಮುದ್ರಿಸಿದರು? ಕುತೂಹಲ ಗರಿಗೆದರಿತು. ವಚನ ಸಂಪುಟವನ್ನು ತೆರೆದು ನೋಡಿದಾಗ ಆ ಖಾಲಿ ಜಾಗದಲ್ಲಿ '' ಹುಡಿಮಣ್ಣ ಹೊಯ್ಯದೆ ಮಾಬನೆ '' ಎಂದಿತ್ತು. ಪಾಪ, ಈ ಸಾಲಿನಲ್ಲಿದ್ದ ಮಾತುಗಳು ವಿದ್ಯಾರ್ಥಿಗೂ, ಆತನಿಗೆ ಮಾರ್ಗದರ್ಶನ ಮಾಡಿದವರಿಗೂ, ಪತ್ರಿಕೆ ಸಂಪಾದಕ ವರ್ಗಕ್ಕೂ ಬಹಳ ತ್ರಾಸು ಕೊಟ್ಟಿರಬೇಕು. ಏಕೆಂದರೆ ಸದಾ ಕಿರುಕುಳ ಕೊಡುವ ಸ್ವಭಾವದವರನ್ನು ನಿಂದಿಸಲು ಮೇಲ್ವರ್ಗದವರು '' ಇವನು ಯಾವಾಗ ಮೈ ಮೇಲೆ ಮಣ್ಣು ಹಾಕಿಕೊಂಡು ಹೋಗುತ್ತಾನೋ '' ಎಂಬ ಮಾತುಗಳನ್ನು ಬಳಸುತ್ತಾರೆ. ಅಂದರೆ ಈ ಮಾತುಗಳು ಅಂಥ ವ್ಯಕ್ತಿಗಳ ವಿನಾಶವನ್ನು ಬಯಸುತ್ತವೆ. ಅಂತೆಯೇ ಲೇಖಕರ ಪ್ರಸ್ತುತ ಲೇಖನ '' ವಚನಕಾರ ಕೋಲ ಶಾಂತಯ್ಯ '' ಸತ್ಯಕ್ಕೆ ದೂರವಾದುದಾಗಿದೆ. ಅಂತರಂಗದ ಬೌದ್ಧಿಕ ಪ್ರಾಮಾಣಿಕತೆಯನ್ನು ಚುಚ್ಚಿ ನೋಯಿಸುವ ಈ ಸಾಲನ್ನು ಬರೆದುಕೊಂಡು ಸಿದ್ಧರಾಮೇಶ್ವರರಿಂದ ಬೈಸಿಕೊಳ್ಳುವ ಮೂರ್ಖತನವನ್ನು ಇವರೇಕೆ ಮಾಡುತ್ತಾರೆ. ಬರೆದು ಮುದ್ರಿಸಿಕೊಂಡರೆ ತಮ್ಮನ್ನು ತಾವೇ ನಿಂದಿಸಿಕೊಂಡಂತೆ ಆಗುವುದಿಲ್ಲವೆ ? ಈ ಕಾರಣಕ್ಕಾಗಿಯೇ ಇಷ್ಟು ಮಹತ್ವಪೂರ್ಣವಾದ ವಚನದ ಸಾಲನ್ನು ಗಡಿಪಾರು ಮಾಡುವುದರ

ಮೂಲಕ ತಮ್ಮನ್ನು ತಾವು ರಕ್ಷಿಸಿಕೊಂಡಿದ್ದಾರೆ. ಎಂದು ಸ್ಪಷ್ಟವಾಗಿ ಗೋಚರವಾಗುತ್ತಿದೆ.

(ಶಬ್ದಾರ್ಥಗಳಿಗಾಗಿ ಸಂಕ್ಷಿಪ್ತ ಕನ್ನಡ ನಿಘಂಟನ್ನು ತೆರೆದು ನೋಡಿದಾಗ ---ಸಂಶೋಧನೆ ಎಂಬ ಪದಕ್ಕೆ ಪೂರ್ತಿಯಾಗಿ ಕಂಡುಹಿಡಿ ಎಂದಿದೆ. ಇನ್ನು ಸಂಶಯ ಎಂಬ ಪದಕ್ಕೆ ಒಂದು ಕಾವ್ಯಾಲಂಕಾರ ಎಂದಿದೆ. ನಾವು ಈಗ ಈ ಶಬ್ದಗಳ ಬೆನ್ನು ಹತ್ತಿ ಹೋಗೋಣ. ಮೇಲಿನ ವಚನದ ಕೊನೆ 4 ಸಾಲುಗಳನ್ನು ಗಮನಿಸಿರಿ.

ಇಂತಪ್ಪ ವಚನ ರಚನೆಯ ಬಿಟ್ಟು
ಕುತ್ಸಿತ ಕಾವ್ಯಾಲಂಕಾರವನೋದುವರ ನೋಡಿ
ಹುಡಿಮಣ್ಣ ಹೊಯ್ಯದೆ ಮಾಬನೆ
ಕಪಿಲ ಸಿದ್ಧ ಮಲ್ಲಿಕಾರ್ಜುನ

ಬಸವ ಪಥದ ಇದೇ ಸಂಚಿಕೆಯ ಪುಟ 8, 9, 10, 11, 12, 13, 14 ಮತ್ತು 15ರಲ್ಲಿ ಪತ್ರಿಕೆಯ ಸಂಪಾದಕರಾದ ಪ್ರೊ॥ ಬಿ.ವಿರುಪಾಕ್ಷಪ್ಪನವರು ತಮ್ಮ ಸ್ವರಚಿತ ವಚನಗಳ ಮುದ್ರಿಕೆ ಇಷ್ಟಲಿಂಗ ರೂಪಿ ಹಂಪೆಯ ವಿರೂಪಾಕ್ಷೇಶ್ವರ ಎಂದು ಬಳಸಿದ್ದಾರೆ. ಹಂಪೆಯ ವಿರುಪಾಕ್ಷ ಸ್ಥಾವರಲಿಂಗ, ಶಿವನ ಪ್ರತೀಕ ಕರಕಮಲದ ಇಷ್ಟಲಿಂಗ ನಿರಾಕಾರ ದೇವನ ಪ್ರತೀಕ ಇದರ ಶುದ್ಧಿಯನ್ನು ಹಾಳುಗೆಡಹುವಂತೆ ಇಷ್ಟಲಿಂಗರೂಪಿ ಹಂಪೆಯ ವಿರೂಪಾಕ್ಷೇಶ್ವರ ಎಂದೇಕೆ ವಚನಾಂಕಿತ ಇಟ್ಟುಕೊಳ್ಳಬೇಕಿತ್ತು. ಅಂದರೆ ತಮ್ಮ ಸ್ವಂತ ಹೆಸರಿನ ಅರ್ಥವನ್ನು ಸಾರ್ಥಕ ಪಡಿಸಬೇಕೆಂಬ ಕಾರಣಕ್ಕಾಗಿಯೋ ಏನೋ, ಅಂತೂ ಇಷ್ಟಲಿಂಗ ಮತ್ತು ಸ್ಥಾವರ ಲಿಂಗದ ಮೂಲ ತತ್ತ್ವಾರ್ಥಗಳನ್ನೇ ವಿರೂಪಗೊಳಿಸಿರುವ ಇಂಥ ವಚನ ರಚನೆಯನ್ನು ಕುತ್ಸಿತ ಬುದ್ಧಿಯ ಕಾವ್ಯಾಲಂಕಾರ ಅನ್ನದೆ ಇನ್ನೇನನ್ನಬೇಕು ? ಇಂಥ ಬೌದ್ಧಿಕ ಮಟ್ಟದ ಜನ ಮುದ್ರಿಸುವ ಪತ್ರಿಕೆಯ ಗುಣಮಟ್ಟ ಯಾವುದಿರುತ್ತದೆ ? ಇಂಥವರ ಮಾರ್ಗದರ್ಶನದಲ್ಲಿ ತಯಾರಾಗುವ ಜನ ಸತ್ಯವನ್ನು ನಿರ್ಭಯವಾಗಿ ಪ್ರತಿಪಾದಿಸುವ ಎದೆಗಾರಿಕೆಯನ್ನು ಹೇಗೆ ಬೆಳೆಸಿಕೊಳ್ಳುತ್ತಾರೆ ?

ಅಯ್ಯೋ !! ದುರ್ದೈವವೆ, 'ಸತ್ಯ' ಎದುರಿಗೆ ಬಂದು ನಿಂತಾಗ ಕಣ್ಣು ಮುಚ್ಚಿಕೊಳ್ಳುವ, ಹುಯ್ಯಿಲೆಬ್ಬಿಸುವ ಸಮಾಜದಲ್ಲಿ ಇಂಥ ಅಕ್ರಮಗಳನ್ನು ಸಕ್ರಮಗೊಳಿಸುವ ಧೀರರು ಯಾರೂ ಇಲ್ಲವೆ ? ಇದ್ದರೆ ಮುಂದೆ ಬನ್ನಿರಿ.

ಶೋಧಿಸಿ ಸತ್ಯದ ಬೆಳಕನ್ನು ಚೆಲ್ಲಲು ಅಂದರೆ ಸಂಶೋಧನೆಗೂ ಮತ್ತು ಕುತ್ಸಿತ ಬುದ್ಧಿಯಿಂದ ಸತ್ಯವನ್ನು ಮರೆ ಮಾಚಿ ಮಿಥ್ಯದ ಕತ್ತಲನ್ನು ಪಸರಿಸಲು ಅಂದರೆ ಸಂಶೋಷಣೆಗೂ ಮೂಲ ಬೇರು ಒಂದೇ. ಅದು ಸಂಶಯವೆಂಬ ತಾಯಿ. ಈ ತಾಯಿ ಹಡೆದ ಮಕ್ಕಳು ಕಾಲಾನಂತರ ಪರಸ್ಪರ 2 ವಿರುದ್ಧ ಗುಂಪುಗಳಾಗಿ ಮಾರ್ಪಡುತ್ತಾರೆ. ಅದರಲ್ಲಿ ಒಂದು ಗುಂಪು ಸತ್ಯದ ಪ್ರಬಲ ಪ್ರತಿಪಾದಕರಾದರೆ, ಇನ್ನೊಂದು ಗುಂಪು ಮಿಥ್ಯದ ದುರ್ಬಲ ಶೋಷಕರಾಗುತ್ತಾರೆ. ಅಂತೆಯೇ ವಚನ ಸಾಹಿತ್ಯದಲ್ಲಿ ಸತ್ಯ - ಮಿಥ್ಯ ಎರಡರ ತಾಯಿಯಾದ ಸಂಶಯ ಪಿಶಾಚಿಯನ್ನು ಬೇವು ಮತ್ತು ಬೇವಿನ ಮರಕ್ಕೆ ಹೋಲಿಸಿದ್ದಾರೆ. ಧರ್ಮಪಿತರ ವಾಣಿಯಲ್ಲಿ ಬರುವ ''ಲಿಂಗದೇವನ ಶರಣರ ವಚನ ಬೇವ ಸವಿದಂತೆ'' ಎಂಬುದು ಬಹಳ ಮಹತ್ವಪೂರ್ಣವಾದ, ಅನುಭವದ ಮಾತು. ಇಲ್ಲಿ ಅಪ್ಪನವರು ಮಾನವೀಯ ಸತ್ಯವನ್ನು ಗ್ರಹಿಸಲು ಬೇಕಾದ ಎಚ್ಚರಿಕೆ ಮತ್ತು ಉಪಾಯವನ್ನು ಹೇಳಿಕೊಡುತ್ತಿದ್ದಾರೆ. ವಜ್ರಕಾಯ ಪಡೆಯಬೇಕೆನ್ನುವ ಸಾಧಕನು ಬೇವಿನ ಮರದ ಚಿಗುರೆಲೆಗಳನ್ನು ನಿರಂತರವಾಗಿ ಮಿತವಾಗಿ ಸೇವಿಸಬೇಕು. ಬದಲಿಗೆ ಅತಿ ಬುದ್ಧಿವಂತಿಕೆಯಿಂದ ಇಡೀ ಬೇವಿನ ಮರದ ಕಹಿಯನ್ನೆಲ್ಲ ಹೀರುತ್ತೇನೆ ಎಂದು ಹೊರಟರೆ ಅವನು

ಪಡೆಯುವುದು ವಜ್ರಕಾಯವನ್ನಲ್ಲ ಕೃಶಕಾಯವನ್ನು - ದುರ್ಬಲ ವ್ಯಕ್ತಿತ್ವವನ್ನು. ಹಾಗೆಯೇ ಪ್ರಾಮಾಣಿಕ ಬುದ್ಧಿ ಜೀವಿಯಾದವನು "ಅಧರಕ್ಕೆ ಕಹಿ ಉದರಕ್ಕೆ ಸಿಹಿ" ಯಾಗಿರುವ ವಚನಗಳೆಂಬ ಬೇವಿನ ಎಲೆಗಳನ್ನು ಮೆಲಿದು ತನ್ನ ವ್ಯಕ್ತಿತ್ವವನ್ನು ಪರಿಪೂರ್ಣವಾಗಿ ಬೆಳೆಸಿಕೊಳ್ಳುತ್ತಾನೆ. ಕೆಟ್ಟ ಬುದ್ಧಿಯವನು ವಚನ ಸಾಹಿತ್ಯದ ಬೃಹತ್ ಬೇವಿನ ಮರದ ಕಹಿಯನ್ನೆಲ್ಲ ಹೀರಲು ಹೋಗಿ ತನ್ನ ವ್ಯಕ್ತಿತ್ವವನ್ನು ದುರ್ಬಲ, ವಿರೂಪ ಮತ್ತು ಕುಬ್ಜಗೊಳಿಸಿಕೊಳ್ಳುತ್ತಾನೆ. ಇಂಥವರಿಂದಲೇ ರಚನೆಯಾದ ಕುತ್ಸಿತ ಕಾವ್ಯಾಲಂಕಾರಕ್ಕೆ ಸತ್ಯವನ್ನೇ ಬರೆಯಬೇಕು - ಬೋಧಿಸಬೇಕೆಂಬ ನಿಯಮವೇನೂ ಇರುವುದಿಲ್ಲ. ಮನರಂಜನೆಗೆಂದು, ಕಾಲಹರಣಕ್ಕೆಂದು ಏನಾದರೂ ಬರೆದು ತಮ್ಮ ಹೀನ ಬುದ್ಧಿ ಮತ್ತು ವಿಕಲ್ಪ ಮನಸ್ಸಿನ ತೀಟೆಯನ್ನು ತೀರಿಸಿಕೊಳ್ಳುತ್ತಾರೆ. ಅಂದಾಗ ಇವರನ್ನೇ ಬೆರಳು ಮಾಡಿ ತೋರಿಸುತ್ತಿರುವ ಸಿದ್ಧರಾಮೇಶ್ವರರ ವಚನದ ಸಾಲು ಹುಡಿಯ ಹೊಯ್ಯದೆ ಮಾಬನೆ ಎಂಬುದನ್ನು ಬಿಟ್ಟುಕೊಡಲು ಇವರಿಗೆ ಲೇಖಕ ನಾಗರಾಜರಿಗಾಗಲೀ ಪತ್ರಿಕಾ ಸಂಪಾದಕರಿಗಾಗಲೀ ವಿರೂಪಾಕ್ಷಪ್ಪನವರಿಗಾಗಲೀ ಯಾವುದೇ ಕಷ್ಟ ಕಾಣಲಿಲ್ಲ.

ಸುಳ್ಳಿನ ಕಂತೆಗಳಾದ ವೇದ, ಶಾಸ್ತ್ರ ಆಗಮ, ಪುರಾಣಗಳ ಬಲದ ಮೇಲೆ ಪರಿಪೂರ್ಣವಾದ ಮಾನವೀಯ ಸತ್ಯವನ್ನು ಸಮರ್ಥವಾಗಿ ಪ್ರತಿಪಾದಿಸಲು ಸೋಲುವ ಈ ಜನ ನಾನಾ ರೀತಿಯ ವಿಧ್ವಂಸಕ ಕೃತ್ಯಗಳು ಮತ್ತು ಕುತ್ಸಿತ ಬುದ್ಧಿಯ ರಚನೆಗಳಾದ ಕಾವ್ಯಾಲಂಕಾರಗಳೆಂಬ ಕ್ರೂರ ಸತ್ಯದ ಕಹಿ ಫಲಗಳನ್ನು ಉಗುಳುತ್ತಾರೆ. ಇಂಥವರಿಗೆ ಸಂಶೋಧನೆ ಎಂದರೆ ತತ್ತ್ವ, ಸಿದ್ಧಾಂತ, ನಂಬಿಕೆ, ಸಾಧನೆ, ಸಂಸ್ಕೃತಿಗಳು ಯಾವುದೇ ಇರಲಿ, ಯಾರದೇ ಇರಲಿ, ಹೇಗೇ ಇರಲಿ ಅವುಗಳನ್ನು ಸೇರಿಸಿ ನವಿರಾಗಿ ಕಲುಷಿತಗೊಳಿಸಿ, ಮೂಲತತ್ತ್ವಕ್ಕೆ ಚ್ಯುತಿ ಬಂದರೂ ಚಿಂತೆಯಿಲ್ಲ, ಬರಿಯ ಮಾತಿನ ಮಾಲೆ ಹೆಣೆದು ಕೃತಾರ್ಥರಾಗುವುದು ಎಂದರ್ಥ. ಇವರು ಯಾವ ತತ್ತ್ವವನ್ನು ಉಳಿಸುವುದೂ ಇಲ್ಲ ; ಬೆಳೆಸುವುದೂ ಇಲ್ಲ ; ಬದಲಿಗೆ ತತ್ತ್ವಗಳ ಮೂಲ ಸ್ವರೂಪವನ್ನೇ ತಮ್ಮ ಕುತಂತ್ರದಿಂದ ಬತ್ತಿಸಿಬಿಡುತ್ತಾರೆ. ಇಂಥವರನ್ನು ನೋಡಿಯೇ ಕೋಲ ಶಾಂತಯ್ಯನವರು ಹೇಳುತ್ತಿದ್ದಾರೆ.

ಮದ್ದಿಗೆ ರುಜೆಯಡಸಿ, ನೀರಿಗೆ ಬಾಯಾರಿ
ಹಾವಿಗೆ ಹಲ್ಲಿಲ್ಲದೆ ವಿಷವುಂಟಾಯಿತ್ತು.
ಬೇವಿನ ಮರದಲ್ಲಿ ಮಾವಿನ ಹಣ್ಣಾಗಿ
ಆ ಮರನ ಏರಿ ಮೆದ್ದವರನರಿ
ಪುಣ್ಯಾರಣ್ಯದಹನ ಭೀಮೇಶ್ವರ ಲಿಂಗ ನಿರಂಗ ಸಂಗ (ವ. ಸಂ - 7)

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೇವಲ ಬುದ್ಧಿವಂತರನ್ನು ಮಾತ್ರ ನಿರ್ಮಿಸುತ್ತಾ, ಪ್ರತಿಭಾವಂತರನ್ನು ಮತ್ತು ಪ್ರಾಮಾಣಿಕರನ್ನು ಸೃಷ್ಟಿಸಲು ಸೋಲುತ್ತಿರುವ ಕೃತಕ, ಆಧುನಿಕ, ಶುಷ್ಕ ಶಿಕ್ಷಣ ಪದ್ಧತಿಯನ್ನೇ ನಾಚಿಸುವಂತೆ, ಅಂದಿನ ಅನುಭವ ಮಂಟಪದ ಈ ಸಾಮಾನ್ಯ ಶರಣ ತನ್ನ ಅನುಭಾವದ ವ್ಯಕ್ತಿತ್ವವನ್ನು ರೂಪಿಸಿದ ಪರಿಸರವನ್ನು ಈ ವಚನದಲ್ಲಿ ಅದೆಷ್ಟು ಚೆನ್ನಾಗಿ ಸೆರೆ ಹಿಡಿದಿದ್ದಾನೆ ನೋಡಿರಿ.

ಬೇವಿನ ಮರದಲ್ಲಿ ಕಾಗೆ ಮನೆಯ ಮಾಡಿತ್ತು.
ಕೋಗಿಲೆ ಮರಿಯ ಹಾಕಿತ್ತು
ಗೂಗೆ ಆರೈಕೆಯ ಮಾಡಿ ಸಾಕಿತ್ತು
ಹಂಸೆ ತಂಬೆಲರ ಕುಟುಕ ಕೊಟ್ಟು ಸಂಭ್ರಮವ ಮಾಡಿತ್ತು
ಅದು ಯಾರ ಹಂಗಿಲ್ಲದೆ ಹಾರಿ ಹೋಗುತ್ತ

ಎನಗೆ ಬೇವಿನ ಮರನೆ ತಾಯಿಯೆಂದಿತ್ತು
ಹಾಗೆಂದುದ ನಿನ್ನ ನೀನರಿ
ಪುಣ್ಯಾರಣ್ಯದಹನ ಭೀಮೇಶ್ವರ ಲಿಂಗ ನಿರಂಗ ಸಂಗ (ವ. ಸಂ - 7)

ಪ್ರಸ್ತುತ ಲೇಖಕರ ಮತ್ತು ವಚನಕಾರರ ವ್ಯಕ್ತಿತ್ತ್ವವನ್ನು ತಮ್ಮ ಮುಂದಿಡಬೇಕೆಂಬ ನನ್ನ ಶ್ರಮವನ್ನು ಹಗುರ ಮಾಡಿದ ವಚನವೊಂದನ್ನು ಬರೆಯುತ್ತಾ ಕೋಲ ಶಾಂತಯ್ಯನವರಿಗೆ ಶರಣುಗೈಯುತ್ತೇನೆ.

ಬಿಸಿಲ ಮುಂದಣ ಮಂಜಿನಂತಾಯಿತ್ತು
ದಿಟದ ಮುಂದಣ ಸಟೆಯಂತಾಯಿತ್ತು
ಪುಣ್ಯದ ಮುಂದಣ ಪಾಪದಂತಾಯಿತ್ತು
ಯೋಗಿಯ ಮುಂದಣ ಸಂಸಾರದಂತಾಯಿತ್ತು
ಧೀರನ ಮುಂದಣ ಹೇಡಿಯಂತಾಯಿತ್ತು
ಉರಗನ ಮುಂದಣ ಭೇಕನಂತಾಯಿತ್ತು
(ಹರಿಯ ಮುಂದಣ ಕರಿಯಂತಾಯಿತ್ತು ?)
ವಿವೇಕಿಯ ಮುಂದಣ ದುಃಖದಂತಾಯಿತ್ತು
ಪುಣ್ಯಾರಣ್ಯದಹನ ಭೀಮೇಶ್ವರನೆಂಬ ಸದ್ಗುರು ಕಾರುಣ್ಯವಾಗಲೊಡನೆ
ಎನ್ನ ಸುತ್ತಿಹ ಪ್ರಪಂಚ ಸರ್ವವೂ ಓಡಿದವಯ್ಯಾ. (ವ. ಸಂ - 7)

ಶರಣ ಬಂಧುಗಳೇ, ಮೇಲಿನ ವಚನವನ್ನು ಓದಿದಿರಾ ? ಈ ಲೇಖನದ ಎಲ್ಲಾ ಪ್ರಶ್ನೆಗಳನ್ನು ಚಿಂತಿಸಿ ತೀರ್ಪು ಕೊಡಬೇಕಾದ ಒಡೆಯರು ನೀವು. ಶ್ರೀ ನಾಗರಾಜ್ ಅವರ ಬರಹ ಸಂಶೋಧನೆಯೋ ? ಸಂಶೋಷಣೆಯೋ ? ಎಂಬುದನ್ನು ನಿರ್ಧರಿಸಿ ತಿಳಿಯಿರಿ. ಶರಣು ಶರಣಾರ್ಥಿ

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ. ಬಸವ ಗಂಗೋತ್ರಿ, ಕುಂಬಳಗೋಡು

ಮಾರ್ಚ-ಎಪ್ರೀಲ್ ತಿಂಗಳಲ್ಲಿ ಬರುವ

ಲಿಂಗಾಯತ ಧರ್ಮೀಯರ ಹಬ್ಬ-ಹುಣ್ಣಿಮೆ-ಉತ್ಸವಗಳು

806ನೆಯ ಕಲ್ಯಾಣ ಕ್ರಾಂತಿಯ ಸಂಸ್ಮರಣಾ ಕಾರ್ಯಕ್ರಮ	ಮಾರ್ಚ 6 ರಿಂದ 11
ಫಾಲ್ಗುಣ ದ್ವಾದಶಿ, ಧರ್ಮಪಿತರ ಗಡಿಪಾರು	ಮಾರ್ಚ 6
ತ್ರಯೋದಶಿ ಹರಳಯ್ಯ-ಮಧುವರಸರ ಬಂಧನ	ಮಾರ್ಚ 7
ಚತುರ್ದಶಿ - ಶರಣರಿಗೆ ಎಳೆಹೂಟೆ ಶಿಕ್ಷೆ (ಮೌನಾಚರಣೆ)	ಮಾರ್ಚ 8
ಹೋಳಿ ಹುಣ್ಣಿಮೆ, ಬಿಜ್ಜಳನ ವಧೆ	ಮಾರ್ಚ 9
ಕಲ್ಯಾಣದಿಂದ ಚನ್ನಬಸವಣ್ಣನ ನಿರ್ಗಮನ	ಮಾರ್ಚ 10
ಕಲ್ಯಾಣ ಕ್ರಾಂತಿಯ ಸಂಸ್ಮರಣಾ ದಿನ	ಮಾರ್ಚ 11
ಪೂಜ್ಯ ಶ್ರೀ ಮಾತಾಜಿಯವರ 56ನೆಯ ವರ್ಧಂತಿ	ಮಾರ್ಚ 13
ಪ್ರಭುದೇವರ ಶೂನ್ಯ ಪೀಠಾರೋಹಣದ 816ನೆಯ ಸಂಸ್ಮರಣಾ ದಿನ ಚಾಂದ್ರಮಾನ ಯುಗಾದಿ	ಮಾರ್ಚ 25
ಜಗನ್ಮಾತಾ ಅಕ್ಕಮಹಾದೇವಿ ಜಯಂತಿ (ದವನದ ಹುಣ್ಣಿಮೆ)	ಏಪ್ರಿಲ್ 8
ಬಸವ ಜಯಂತಿ-ಲಿಂಗಾಯತರ ಹೊಸವರ್ಷದ ಆರಂಭದ ದಿವಸ	ಏಪ್ರಿಲ್ 26

ಸಂಪಾದಕೀಯ - 2

ಲಿಂಗಾಯತ ಧರ್ಮ ವಿಮೋಚನಾ ಚಳುವಳಿ

ಪೂಜ್ಯ ಅಪ್ಪಾಜಿಯವರ ಹುಟ್ಟು ಹಬ್ಬದಲ್ಲಿ ಮುಖ್ಯ ಅತಿಥಿಗಳಾಗಿ ಭಾಷಣ ಮಾಡುತ್ತ ಶರಣ. ರಂಜಾನ್ ದರ್ಗಾರವರು ಒಂದು ಮಾತನ್ನು ಹೇಳಿದ್ದರು. ''ಅರಬ್ ದೇಶದ ಬುಡಕಟ್ಟು ಜನರು ತುಂಬಾ ಕ್ರೂರಿಗಳು, ಅಂಥವರನ್ನು ಸುಧಾರಿಸಲು, ಪರಸ್ಪರ ಬುಡಕಟ್ಟುಗಳಲ್ಲಿ ಸಾಮರಸ್ಯ ತರಲು ಪ್ರವಾದಿ ಮೊಹಮ್ಮದ್ ಪೈಗಂಬರರು ಬಹಳ ಶ್ರಮಿಸಿ ಇಸ್ಲಾಂ ಅಂದರೆ ಶಾಂತಿಯ ಸಂದೇಶ ಸಾರಿದರು. ಆದರೆ ಬಸವಣ್ಣನವರ ಪ್ರಯತ್ನ ಇನ್ನೂ ಕಠಿಣತಮ. ಏಕೆಂದರೆ ಅರಬ್‌ದಲ್ಲಿದ್ದುದು ಸಣ್ಣ ಸಣ್ಣ ಬುಡಕಟ್ಟುಗಳು ; ಬಸವಣ್ಣನವರು ಎದುರಿಸಿದುದು ಅತ್ಯಂತ ಪ್ರಬಲವಾದ ಶತ್ರು ವೈದಿಕ ಧರ್ಮವನ್ನು. ಆರಂಭದ ದಿನಗಳಲ್ಲಿ ಬುಡಕಟ್ಟು ಜನರು ವಿರೋಧ ವ್ಯಕ್ತಪಡಿಸಿದರೂ ಕಾಲಾನಂತರದಲ್ಲಿ ಮೊಹಮ್ಮದರ ತತ್ತ್ವಕ್ಕೆ ಶರಣಾದರು. ಆದರೆ ಈ ದೇಶದಲ್ಲಿ ಹಾಗಲ್ಲ. ವೈದಿಕ ಪುರೋಹಿತಶಾಹಿ ಹೊಸ ಹೊಸ ರೂಪ ಪಡೆದು ಶಕ್ತಿಶಾಲಿಯಾಗಿ ಬೆಳೆಯುತ್ತಲೇ ಇದೆ. ಎಂಥಾ ಸುಧಾರಣಾತ್ಮಕ ಧರ್ಮ, ಪಂಥಗಳು ಹುಟ್ಟಿದರೂ ಅವನ್ನು ನುಂಗಿ ನೀರು ಕುಡಿಯುತ್ತಲೇ ಇದೆ.''

ಈ ಮಾತುಗಳನ್ನು ನಾನು ತಕ್ಷಣ ಅರ್ಥಮಾಡಿಕೊಳ್ಳಲಿಲ್ಲವಾದರೂ ಅಂದಿನಿಂದಲೂ ಚಿಂತಿಸುತ್ತಲೇ ಇದ್ದೇನೆ. ಪುರೋಹಿತಶಾಹಿಯ ಹೊಸ ಹೊಸ ರೂಪಗಳನ್ನು ಕಾಣುತ್ತ ದಿಗ್ಭ್ರಾಂತಳಾಗುತ್ತಿದ್ದೇನೆ.

ಈ ವೈದಿಕ ಪುರೋಹಿತಶಾಹಿ ಲಿಂಗಾಯತ ಧರ್ಮವನ್ನು - ಸಮಾಜವನ್ನು ವಿಕೃತಗೊಳಿಸಿತು. ಪುಣ್ಯಕ್ಕೆ ನುಂಗಿ, ನೀರು ಕುಡಿದು ''ವಾತಾಪಿ ಜೀರ್ಣೋಭವ'' ಎನ್ನಲಿಲ್ಲ. ಇದು ಅಸಾಧ್ಯವಾದುದಕ್ಕೆ ಕಾರಣರು ರಕ್ಷಕರಾಗಬೇಕಿದ್ದ ಮಠಾಧೀಶರಲ್ಲ ದಾನವಿತ್ತು ಪೋಷಿಸಬೇಕಾಗಿದ್ದ ಶ್ರೀಮಂತರಲ್ಲ ; ಎಂತೆಂಥಾ ಸಂಕಷ್ಟದ ಮಧ್ಯದಲ್ಲೂ ರಕ್ಷಿಸಿದ್ದು ಗುರು ಬಸವಣ್ಣನ ಪವಿತ್ರನಾಮ ; ಭಕ್ತವರ್ಗ, ಜಾನಪದರು, ಗ್ರಾಮೀಣ ಜನರು ! ಜನಗಣತಿ, ಹಿಂದು, ವೀರಶೈವ, ಲಿಂಗಾಯತ ಈ ವಿಷಯಗಳೆಲ್ಲ ಈಗ ನಿಚ್ಚಳವಾಗುತ್ತಿದ್ದಂತೆಯೇ ಲಿಂಗಾಯತ ಧರ್ಮ ವೃಕ್ಷದ ಬೇರುಗಳನ್ನು ಕಟಕಟನೆ ಕಡಿಯುತ್ತಿದ್ದ ಇಲಿ ಹೆಗ್ಗಣಗಳು ಒಂದೊಂದಾಗಿ ಹೊರಬೀಳುತ್ತಿವೆ. ತಡವಾದರೂ ಚಿಂತೆಯಿಲ್ಲ ಕಳ್ಳರ ಜಾಡು ಸಿಗುತ್ತಲಿದೆ.

ವಚನ ಧರ್ಮದ ವನವಾಸ

ಸಮಾನತೆಯ ಸ್ಥಾಪನೆಯ ಧ್ಯೇಯ ಹೊತ್ತ ಬಸವಾದಿ ಪ್ರಮಥರ ಚಳುವಳಿ ವರ್ಣಾಂತರ ವಿವಾಹದಿಂದ ಅನಿರೀಕ್ಷಿತವಾಗಿ ನಿಂತು ಹೋಯಿತು. ಸೃಷ್ಟಿಯಾದ ಸಂಪೂರ್ಣ ವಚನ ಸಾಹಿತ್ಯವನ್ನು ಆದಿ ಶರಣರು ಉಳಿಸಿಕೊಳ್ಳಲಾರದೆ ಹೋದರೂ ಅಂತೂ ನಮಗಾಗಿ ಪ್ರಾಣಾರ್ಪಣೆ ಮಾಡಿಯಾದರೂ ಬಹುಪಾಲು ಸಾಹಿತ್ಯವನ್ನು ಗುಡ್ಡ ಗವಿಗಳಲ್ಲಿಟ್ಟು ರಕ್ಷಿಸಿದರು. ಜನಪದ ಕವಿಗಳು ಹೇಳುವಂತೆ

''ಮಂಟಪದ ಹೆಜ್ಜೇನ ಗಂಟೇರು ಕೆಡಿಸಿದರೆ''
ಕುಂಟಿತವೆ ಜೇನ ನೊಣಗಳಿಗೆ । ಹುಟ್ಟಿಡಲು
ಬಂಟ ಶರಣರಿಗೆ ಕಂಟಕವೆ ? ॥

ಅಳಿದುಳಿದ ಸಾಹಿತ್ಯದೊಡನೆ ಮಹಾಮನೆಯ ಪುನರ್‌ನಿರ್ಮಾಣ ಮಾಡಲು ಉಳಿವೆಯಲ್ಲಿ ಪುನಃ ಸಿದ್ಧರಾದರು. ಏನೇ ಆದರೂ ವಚನ ಸಾಹಿತ್ಯವು ವನವಾಸಕ್ಕೆ ತುತ್ತಾಯಿತು. ಆ ನಂತರ ಅದು ಬೆಳಕಿಗೆ ಬಂದುದು 15ನೆಯ ಶತಮಾನದಲ್ಲಿ. ಆದರೆ ಅತ್ಯಂತ ವಿಲಕ್ಷಣ ವೇಷ ತೊಟ್ಟು ; ವನವಾಸದ ಅವಧಿ ಮುಗಿಯಿತಾದರೂ ಅಜ್ಞಾತವಾಸದಲ್ಲಿ ಬಾಳ ತೊಡಗಿತು. ಹೇಗೆ ?

ಕ್ರಾಂತಿಪುರುಷ ಬಸವಣ್ಣನವರು ಕೈಗೊಂಡ ಮಹತ್ವಪೂರ್ಣ ಸಮಾಜ ಪರಿವರ್ತನೆಯ ಕಾರ್ಯದಲ್ಲಿ ಬಂದು ಕೈಜೋಡಿಸಿದವರು ಮುಖ್ಯವಾಗಿ ಶ್ರಮಜೀವಿಗಳು. ಇದು ಉದ್ಯೋಗಶೀಲ ಧರ್ಮವಾದ್ದರಿಂದ,

ಕಾಯಕವೇ ಕೈಲಾಸ ಎಂದು ದುಡಿಮೆಗೆ ದಿವ್ಯತ್ವ (divinity) ಕೊಟ್ಟುದರಿಂದ ಹೆಚ್ಚು ಶ್ರಮಜೀವಿಗಳೇ ಲಿಂಗಾಯತ ಧರ್ಮವನ್ನು ಸ್ವೀಕಾರ ಮಾಡಿದರು. ವಿಚಾರಶೀಲರಾದ ಮಧುವರಸರಂತಹ ಬ್ರಾಹ್ಮಣರು ದೀಕ್ಷಾವಂತರಾಗಿ ಬಂದರೂ ಅವರ ಸಂಖ್ಯೆ ಕಡಿಮೆ. ಆಚಾರ, ಮಡಿ-ಹುಡಿಗಳು, ನೇಮ ವ್ರತಗಳಿಂದ ಕೂಡಿದ ವೀರಶೈವರು ಮತ್ತು ಇನ್ನಿತರ ಶೈವ ಮಾರ್ಗಿಗಳೂ ಸಸ್ಯಾಹಾರ ಪ್ರಧಾನವಾದ ಸದಾಚಾರ ನಿಷ್ಠೆಯ ಲಿಂಗಾಯತ ಧರ್ಮದಲ್ಲಿ ಸೇರಿ ಸಾಮಾಜಿಕ ನೆಲೆಯನ್ನು ಕಂಡುಕೊಂಡರು. ಆದರೆ ಕಲ್ಯಾಣ ಕ್ರಾಂತಿಯಾಗಿ ವಚನ ಸಾಹಿತ್ಯವು ಅರಣ್ಯವಾಸಕ್ಕೆ ತೊಡಗುತ್ತಲೇ ಲಿಂಗಾಯತ ಧರ್ಮವು ತಂದೆ-ಬಸವಣ್ಣ, ತಾಯಿ-ವಚನ ಸಾಹಿತ್ಯ ಎರಡನ್ನೂ ಕಳೆದುಕೊಂಡ ಅನಾಥಶಿಶುವಾಯಿತು.

ಇಂಥ ನಿರ್ವಾತ ನಿರ್ಮಾಣವಾಗಿರುವಾಗ ಒಳಗೆ ಸೇರಿದ್ದ ಮಡಿವಂತ ಶಕ್ತಿಗಳು ತಲೆ ಎತ್ತ ತೊಡಗಿದವು. ಈ ಸಮಯದಲ್ಲಿ ರಚನೆಯಾದ ಪುರಾಣ ಸಾಹಿತ್ಯ, ಬಸವ ಪುರಾಣ-ತೆಲುಗು ಕನ್ನಡ ಭಾಷೆಗಳಲ್ಲಿ, ಹರಿಹರನ ಬಸವರಾಜ ದೇವರ ರಗಳೆ, ಚಾಮರಸನ ಪ್ರಭುಲಿಂಗಲೀಲೆ ಮುಂತಾದವು ಕ್ರಾಂತಿಪುರುಷ ಬಸವಣ್ಣ, ಅಲ್ಲಮಪ್ರಭು ಮುಂತಾದವರ ಬಗ್ಗೆ ಅಷ್ಟಿಷ್ಟಾದರೂ ಚಾರಿತ್ರಿಕ ಅಂಶಗಳನ್ನು ಉಳಿಸಿಕೊಟ್ಟವಲ್ಲ ಎಂದು ಸಮಾಧಾನ ಪಟ್ಟುಕೊಳ್ಳೋಣ ಎಂದರೆ, ವಚನ ಸಾಹಿತ್ಯದ ಮೂಲ ಆಶಯಕ್ಕೆ ಧಕ್ಕೆ ತರುವ ರೀತಿಯಲ್ಲಿ ಪುನಃ ಕಗ್ಗಗಳನ್ನು ಹೆಣೆದವಲ್ಲ ಎಂದು ದುಃಖವೆನಿಸುತ್ತದೆ. ಕಲ್ಯಾಣ ಕ್ರಾಂತಿಯಂತಹ ಹೃದಯ ಸ್ಪರ್ಶಿ ಚಾರಿತ್ರಿಕ ಘಟನೆಯನ್ನು, ಏಸುಕ್ರಿಸ್ತ ಶಿಲುಬೆಯ ಆರೋಹಣಕ್ಕಿಂತಲೂ ಹೃದಯ ಸ್ಪರ್ಶಿಯಾದ ಕ್ರಾಂತಿಗಾಥೆಯನ್ನು ಬಸವರಾಜ ದೇವರ ರಗಳೆ, ಪಾಲ್ಕುರಿಕೆ ಸೋಮನಾಥ - ಭೀಮಕವಿಯ ಬಸವ ಪುರಾಣ ಮುಂತಾದವು ಮುಚ್ಚಿ ಹಾಕಿಬಿಟ್ಟವಲ್ಲ. ಎಂಥಾ ದುರಂತ ! ಜಾನಪದ ಕವಿಗಳು ಹೃದಯತುಂಬಿ ಕಲ್ಯಾಣ ಕ್ರಾಂತಿಯ ಹಾಡನ್ನು ಹಾಡಿ ಉಳಿಸಿಕೊಟ್ಟಿದ್ದಾರೆ. ಏಕೆಂದರೆ ಬ್ರಾಹ್ಮಣ ಕವಿಗಳಿಗೆ ಬ್ರಾಹ್ಮಣ ಮಧುವರಸ ಮತ್ತು ಸಮಗಾರ ಹರಳಯ್ಯನವರ ನಡುವೆ ನಡೆದ ಬೀಗತನ ಅತ್ಯಂತ ವಿಷಾದನೀಯ. ಯಾವ ಲೇಖನಿಯಿಂದ ಅವರು ಬರೆಯಬಲ್ಲರು ? ಅಲ್ಲಿಂದ ಮುಂದೆ ಲಿಂಗಾಯತ ಧರ್ಮವು ವೀರಶೈವದ ವೇಷ ಧರಿಸಿತು. ಸಂಸ್ಕೃತೀಕರಣಗೊಂಡಿತು. ಮಡಿವಂತಿಕೆಯ ಸಂಕೋಲೆ ತೊಡಿಸಿಕೊಂಡಿತು. ಈ ವಿಕೃತಿಗೆ ವೀರಶೈವ ಕವಿಗಳು ಬಳಸಿಕೊಂಡಿರುವುದು ಚನ್ನಬಸವಣ್ಣನವರ ವಚನಗಳನ್ನು. ಧರ್ಮಪಿತ ಬಸವಣ್ಣನವರ ವಚನಗಳಲ್ಲಿ ಕೈಯಾಡಿಸಿರುವರಾದರೂ ಅಂಥ ಹಸ್ತಕ್ಷೇಪ ಐವತ್ತು ವಚನಗಳ ಸಂಖ್ಯೆ ದಾಟಲಿಕ್ಕಿಲ್ಲ. ಆದರೆ ಚನ್ನಬಸವಣ್ಣನವರನ್ನು ಸಾಕಷ್ಟು ವಿರೂಪಗೊಳಿಸಿದ್ದಾರೆ. ಇದಕ್ಕೆ ಕಾರಣ ಅವರ ವಚನಗಳು ಬಹಳ ಸಡಿಲವಾಗಿರುವ ಗದ್ಯವಾಗಿರುವುದು ಒಂದಾದರೆ ; ಚನ್ನಬಸವಣ್ಣನವರ ಮಾತಿಗೆ ಷಟಸ್ಥಲ ನಿರ್ಣಯ ಮಾಡುವ ಜ್ಞಾನಿ ಎಂಬ ಮಹತ್ವವಿದ್ದುದೂ, ಅವರು ಆಚಾರ ಸಂಹಿತೆ ಕುರಿತು ಬರೆದುದೂ ಕಾರಣವಾಗಿರಬಹುದು ; ಪ್ರಭುದೇವರ ವಚನಗಳು ಪ್ರೌಢವಾಗಿರುವುದರಿಂದಲೂ ವಿಧಿ-ವಿಧಾನಕ್ಕಿಂತಲೂ ಹೆಚ್ಚು ಅಧ್ಯಾತ್ಮಿಕವಾಗಿರುವುದರಿಂದಲೂ ಅವುಗಳ ಮೇಲೆ ಕೈಯಾಡಿಸಲು ಅಷ್ಟೊಂದು ಪ್ರಯತ್ನಿಸಿಲ್ಲ.

ವೀರಶೈವ ಪದ ಬಳಕೆ

ಅಲ್ಲಮ ಪ್ರಭುದೇವರ ವಚನಗಳಲ್ಲಿ ಒಂದು ಕಡೆ ಸಹ ವೀರಶೈವ ಪದ ಬಳಕೆಯಾಗಿಲ್ಲ. ಆದರೆ ಗೂಳೂರು ಸಿದ್ಧವೀರೇಶ್ವರ ಎಂಬ ವಿರಕ್ತನು ಸಂಪಾದಿಸಿರುವ ಶೂನ್ಯ ಸಂಪಾದನೆಯಲ್ಲಿ ಪ್ರಭುದೇವರ ವರ್ಣನೆ ಮಾಡುವಾಗ ಶ್ರೀ ವೀರಶೈವಾಚಾರ ಶಿರೋರತ್ನ , ಶ್ರೀ ವೀರಶೈವಾಚಾರ ಪ್ರಮಥ ನಾಯಕ, ಶ್ರೀ - ವೀರಶೈವಾಚಾರ ದೀಕ್ಷಾಚಾರ್ಯ ಎಂದು ಸ್ತುತಿಸುವನು. ಇದೇ ಸಮಯದಲ್ಲೇ ವೀರಶೈವವಾದಿಗಳೆಂಬ ಮಲತಾಯಿಯ ಕೈಯಲ್ಲಿ ಲಿಂಗಾಯತ ಸಮಾಜದ ಕೂಸು ಸಿಕ್ಕಿಬಿಟ್ಟಿತು.

(ಮಲತಾಯಿಯರೆಲ್ಲ ಕೆಟ್ಟವರಲ್ಲ. ಎಷ್ಟು ಜನರು ಮಲಮಕ್ಕಳನ್ನು ಸ್ವತಃ ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸುವುದಿಲ್ಲ ? ಈ ಉದಾಹರಣೆಯಿಂದ ಆದರ್ಶವಾದಿ ತಾಯಂದಿರು ನೊಂದುಕೊಳ್ಳಬಾರದು. ಹೋಲಿಕೆ ಕೊಡಲು ನನಗೆ ಬೇರೆ ಉದಾಹರಣೆ ಹೊಳೆಯದ್ದರಿಂದ ಬರೆದಿದ್ದೇನೆ ಮಾತ್ರ. ನಮ್ಮ ಶರಣ ಬಂಧುಗಳಲ್ಲೇ ಬಹಳ ಜನ ಮಲಮಕ್ಕಳನ್ನು ಪ್ರೀತಿಯಿಂದ ಬೆಳೆಸಿದವರು ಇದ್ದಾರೆ.) ಧರ್ಮಗುರು ಬಸವಣ್ಣನವರ ಸ್ಥಾನವನ್ನು ಕೆಳಗಿಳಿಸಿ ಪ್ರಭುದೇವರನ್ನು ನಾಯಕನನ್ನಾಗಿ ಮಾಡುವ ಪ್ರಯತ್ನವೂ ಕೆಲವು ಶೂನ್ಯ ಸಂಪಾದನೆಗಳಲ್ಲಿ ನಡೆದಿದೆ. ಶಿವಾದ್ವೈತ, ಶಿವಾನುಭವ, ಶಿವಾನುಭವ ಮಂಟಪ, ಶಿವಲಿಂಗ ಮುಂತಾದ ಪದಪುಂಜಗಳೂ ಇದೇ ಸಮಯದಲ್ಲೇ ವಚನ ಸಾಹಿತ್ಯದ ಒಳಹೊಕ್ಕವು. ಹೀಗೆ ಕ್ರಾಂತಿಕಾರಿ ವಿಚಾರಧಾರೆಯ ಲಿಂಗಾಯತ ಧರ್ಮಕ್ಕೆ ವೀರಶೈವ ಎಂಬ ಗ್ರಹಣ ಹಿಡಿದುದು 15-16ನೇ ಶತಮಾನದಲ್ಲೇ ಎಂದು ಹೇಳಬಹುದು.

ವಚನ ಸಾಹಿತ್ಯ ಬೆಳವಣಿಗೆಯಿಂದ ನೋಡಿದರೆ 12ನೆಯ ಶತಮಾನ ಅಮೃತಯುಗ. ಅದ್ಭುತ ಜಾಗತಿಕ ಮಟ್ಟದ ಕ್ರಾಂತಿಕಾರಿ ಮತ್ತು ದಾರ್ಶನಿಕ ಸಾಹಿತ್ಯ ಸೃಷ್ಟಿಯಾದುದು ಆಗಲೇ. ಹದಿಮೂರು-ಹದಿನಾಲ್ಕನೆಯ ಶತಮಾನ ಬರಡು ಯುಗ. ಸಮಾಜವು ನಿಧಾನವಾಗಿ ಹಬ್ಬುತ್ತಿತ್ತಾದರೂ ಕೇಂದ್ರ ಶಕ್ತಿಯಾಗಲೀ, ಮಾರ್ಗದರ್ಶಕರಾಗಲೀ ಸಿಗದುದು ಒಂದು ಆಶ್ಚರ್ಯ. ಭಕ್ತಿ ಕವಿಗಳಾದ ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ಪಾಲ್ಕುರಿಕೆ ಸೋಮನಾಥ, ಭೀಮಕವಿ ಮುಂತಾದವರು ಕಾವ್ಯ ಪುರಾಣಗಳನ್ನು ಬರೆದರಾದರೂ ಅವರು ವಚನ ಸಾಹಿತ್ಯದೊಳಗಿನ ಮಾನವೀಯ ತುಡಿತವನ್ನು ಅರ್ಥಮಾಡಿಕೊಳ್ಳದೆ ಕಥಾ ನಾಯಕರನ್ನು ಬಣ್ಣಿಸಿದರು. ತಮ್ಮ ಸಾಹಿತ್ಯ ಪ್ರತಿಭೆಯನ್ನು ಮೆರೆದರು. ಈ ಕವಿಗಳ ಕಾವ್ಯ ವೈಭವದ ಮಧ್ಯೆ ವಚನ ವಾಙ್ಮಯ ವನವಾಸಿಯಾಗಿತ್ತು. ವಿಜಯ ನಗರದ ಅರಸನಾದ ಪ್ರೌಢದೇವರಾಯ ಕಾಲ (1416-1446) ವಚನ ವಾಙ್ಮಯವನ್ನು ವನವಾಸದಿಂದ ಬಿಡುಗಡೆ ಮಾಡಿತು. ಪ್ರೌಢದೇವರಾಯನ ಮಂತ್ರಿಯಾಗಿದ್ದ ಲಕ್ಕಣ ದಂಡೇಶ, ಜಕ್ಕಣಾರ್ಯ ಮುಂತಾದವರು ವಚನಗಳನ್ನು ಸಂಗ್ರಹಿಸುವ, ತಾತ್ತ್ವಿಕವಾಗಿ ಹೆಣೆಯುವ ಕೆಲಸ ಕೈಗೊಂಡರು. ಶೂನ್ಯ ಸಂಪಾದನೆಗಳು ಕಲ್ಲುಮಠದ ಪ್ರಭುದೇವರ ಲಿಂಗಲೀಲಾ ವಿಸಾಸ ಚಾರಿತ್ರ್ಯ ಮುಂತಾದ ತಾತ್ತ್ವಿಕ ಮತ್ತು ಪ್ರೌಢ ಕೃತಿಗಳು ಹೊರಬಂದವು. ಲಿಂಗಾಯತ ಧರ್ಮದ ವಿಸ್ತರಣೆಯ ಹಿನ್ನೆಲೆಯಲ್ಲಿ ತೋಂಟದ ಸಿದ್ಧಲಿಂಗೇಶ್ವರರ ಪಾತ್ರ ಬಹಳ ಮುಖ್ಯ. ಇವರು ಸ್ವತಃ ವಚನಗಳನ್ನು ಬರೆದರು ಎಂಬುದು ಮಹತ್ವಪೂರ್ಣ. ಇದಕ್ಕಿಂತಲೂ ಹಿರಿದು ಅವರು ಧರ್ಮಪ್ರಚಾರದ ಮಹತ್ವಪೂರ್ಣ ಕಾರ್ಯಕೈಗೊಂಡುದು. ಅನೇಕ ಜನ ವಿರಕ್ತರು ತಯಾರಾಗಿ ಲಿಂಗಾಯತ ಧರ್ಮವು ಕರ್ನಾಟಕದ ಗಡಿಯನ್ನು ದಾಟುವಂತೆ ಪ್ರಚಾರವಾಯಿತು. ಈ ಹೊತ್ತಿಗಾಗಲೇ ಒಂದು ಸಮಾಜವಾಗಿ ಲಿಂಗಾಯತವು ರೂಪುಗೊಂಡದ್ದರಿಂದ ವಿಚಾರ ಸಂಹಿತೆಯೊಡನೆ ಆಚಾರ ಸಂಹಿತೆಯನ್ನೂ ರೂಪಿಸುವ ಅಗತ್ಯ ಅಂದಿನ ವಿರಕ್ತರಿಗೆ ಬಂದು ಲಿಂಗಾಯತ ಧರ್ಮವು ಸಂಸ್ಥೀಕರಣ(institutionalise)ಗೊಂಡಿತು. ಮಡಿವಂತ ಜಾತಿಗಳಿಂದ ಬಂದ ಜನರಿಗೆ ಪ್ರಿಯವಾಗುವ ಆಚರಣೆಗಳೂ ಹೆಚ್ಚಾಗಿ ಸೇರ್ಪಡೆಯಾದವು.

ಲಿಂಗಾಯತ ಧರ್ಮದ ಇತಿಹಾಸದಲ್ಲಿ ಇನ್ನೊಂದು ವಾಹಿನಿ ಹುಟ್ಟಿಕೊಂಡಿತು. ಸಂಸ್ಥೀಕರಣಗೊಂಡ, ಬೌದ್ಧಿಕ ಆಚರಣೆಗಿಂತಲೂ ಆದಿ ಶರಣರ ಮಾನವೀಯ ಕಳಕಳಿ ಅರ್ಥ ಮಾಡಿಕೊಂಡ ಕೆಲವು ಶರಣರು, ವಿರಕ್ತರು ಆ ಆಧ್ಯಾತ್ಮಿಕ-ಭಾಕ್ತಿಕ ಮಾರ್ಗದ ಜಾಡನ್ನು ಹಿಡಿದರು. ಇವರಲ್ಲಿ ಮುಖ್ಯರು ಮಲೆಯ ಮಾದೇಶ್ವರರು. ಕಪ್ಪಡಿಯ ಮಂಟೇಸ್ವಾಮಿಗಳು, ಕೊಡ್ಯೆಕಲ್ ಬಸವಣ್ಣನವರು, ತಿಂಥಿಣಿಯ ಮೌನೇಶ್ವರರು. ಇವರುಗಳು ಆಗಲೇ ವೀರಶೈವದ ಹೇರುವಿಕೆಯಿಂದ

ಜಡಗಟ್ಟುತ್ತಿದ್ದ, ಮಡುಗಟ್ಟಿದ್ದ ಪರಂಪರೆಯನ್ನು ಜರಿದು ಮೂಲಶರಣರ ಆಶೋತ್ತರ ಎತ್ತಿ ಹಿಡಿದರು. ಮಠಾಧೀಶರಾಗಿದ್ದ ಮಲೆಯ ಮಹದೇಶ್ವರರು ಧರ್ಮಪ್ರಚಾರಕ್ಕೆ ಆತಂಕವಾಗಿದ್ದ ಮಠದ ಅಧಿಕಾರವನ್ನು ಬೇರೆಯವರಿಗೆ ವಹಿಸಿಕೊಟ್ಟು ಕಾಡನ್ನು ಸೇರಿ ವನವಾಸಿಗಳಿಗೆ ಸಂಸ್ಕಾರಕೊಡುವ ಪವಿತ್ರ ಕಾರ್ಯವನ್ನು ಕೈಗೊಂಡುದು ನನ್ನನ್ನು ಬಹಳ ಪುಳಕಿತಗೊಳಿಸುತ್ತದೆ. ಅದೇ ರೀತಿ ಸುತ್ತೂರು ಮಠಾಧೀಶರಾದ ಘನಲಿಂಗದೇವರು, ದೇವನೂರಿನ ಗುರುಮಲ್ಲೇಶ್ವರರು ಪ್ರಾಮಾಣಿಕ ಬಸವ ಪಥಿಕರಾಗಿ ಧರ್ಮವನ್ನು ಹಬ್ಬಿಸಿದರು.

ಅನುಭವ ಮಂಟಪ ಎಂಬ ಪಾತ್ರೆಯಲ್ಲಿ ವಿವಿಧ ಜಾತಿ ಮತ ಪಂಥ ಪಂಗಡಗಳಿಂದ ದೀಕ್ಷಾವಂತರಾಗಿ ಬಂದ ಶರಣರನ್ನು ಸೇರಿಸಿ, ಅನುಭವ ಗೋಷ್ಠಿಯ ಮೂಲಕ ಸಂಸ್ಕಾರ ನೀಡಿ ಅಖಂಡ ಶರಣ ಸಮಾಜವನ್ನು ನಿರ್ಮಾಣಮಾಡುವ ಕಾರ್ಯ ನಡೆದಿತ್ತು. ಇನ್ನೂ ಪೂರ್ಣವಾಗುವ ಮೊದಲೇ ಕಲ್ಯಾಣ ಕ್ರಾಂತಿಯಾಯಿತು.

(ಶರಣ. ಡಿ.ಪಿ.ಪ್ರಕಾಶ್‌ರವರು ಶರಣ ಮೇಳದಲ್ಲಿ ಭಾಷಣ ಮಾಡುತ್ತ ಕೊಟ್ಟ ಒಂದು ಕ್ರಾಂತಿಕಾರಿ ಹೋಲಿಕೆಯನ್ನು ಇಲ್ಲಿ ಉದಾಹರಿಸುತ್ತೇನೆ. ಒಂದು ಬೃಹತ್ತಾದ ಹಡಗನ್ನು ಬಸವಣ್ಣನವರು ಎನ್ನುವ ತಂತ್ರಜ್ಞ ನಿರ್ಮಿಸುತ್ತಿದ್ದರು. ಬಿಡಿಬಿಡಿ ಭಾಗಗಳನ್ನು ಜೋಡಿಸುತ್ತಿದ್ದರು. ಆಗ ಜಾತಿವಾದಿಗಳ ದಾಳಿಯಾಯಿತು. ಜೋಡಣೆಯ ಕಾರ್ಯ ಮುಂದುವರಿಯಲಿಲ್ಲ. ಈಗ ಪುನಃ ಅದನ್ನು ಜೋಡಿಸಬೇಕಾದರೆ ಅಷ್ಟೇ ಪರಿಣತಿ ಇರುವ ಇಂಜನಿಯರ್ಸ್ ಬೇಕು. ಈಗ ಆ ಕಾರ್ಯ ಪೂಜ್ಯ ಮಾತಾಜಿಯವರ ನೇತೃತ್ವದಲ್ಲಿ ಆರಂಭವಾಗಿದೆ.)

ಮಡಿವಂತ ಜಾತಿಗಳಿಂದ ಬಂದು ಸೇರಿದವರು ಕೆಳವರ್ಗಗಳಿಂದ ಬಂದವರನ್ನು ಆದರಿಸದೆ ಹೋದಾಗ ಅನಾಥ ಪ್ರಜ್ಞೆಯಿಂದ ಖಿನ್ನರಾಗಿ ಬಳಲಿದ ಅವರು ಪುನಃ ಪ್ರತ್ಯೇಕಗೊಳ್ಳತೊಡಗಿದರು. ಸಮಾಜವನ್ನು ಬೆಸೆಯುವ ಕಾರ್ಯ ಮಾಡಬೇಕಾದ ಲಿಂಗಾಯತ ಮಠಾಧೀಶರು ಮೇಲ್ಜಾತಿಯ ದೀಕ್ಷಾವಂತರು, ಶ್ರೀಮಂತರನ್ನು ಆಶ್ರಯಿಸುತ್ತ ಹೋದಾಗ ಇನ್ನಿತರರು ಧರ್ಮಗುರು ಬಸವಣ್ಣನ ಮೇಲೆ ಪ್ರೀತಿ ಇದ್ದರೂ ದೂರವಾಗತೊಡಗಿದರು. ಆ ಭಾವವನ್ನು ಕೊಡ್ಯೆಕಲ್ ಬಸವಣ್ಣ, ಮಂಟೇಸ್ವಾಮಿಗಳು, ತಿಂಥಿಣ ಮೌನೇಶ್ವರರಲ್ಲಿ ಕಾಣುತ್ತೇವೆ. ಆದರೆ ಈ ಎಲ್ಲರೂ ಧರ್ಮಪಿತ ಬಸವಣ್ಣನವರ ಬಗ್ಗೆ ಅಷ್ಟೇ ಭಕ್ತಿ, ಪ್ರೇಮ, ಗೌರವ ಒಂದು ಬಗೆಯ ವ್ಯಾಮೋಹ (attachment ನಮಗಿರುವಂತೆ) ಇಟ್ಟುಕೊಂಡಿರುವುದನ್ನು ಕಾಣುತ್ತೇವೆ.

ಬೀದರ ಜಿಲ್ಲೆಯ ನಾವದಗಿಯಲ್ಲಿ ರೇವಪ್ಪಯ್ಯ ಅನ್ನುವ ಮಹಾನ್ ಶರಣರು ಆಗಿ ಹೋಗಿದ್ದಾರೆ. ಅವರು ಒಮ್ಮೆ ಸೊಲ್ಲಾಪುರದಲ್ಲಿ ಒಂದು ವರ್ಷಕಾಲ ಬೀಡುಬಿಟ್ಟು ಪ್ರತಿಯೊಬ್ಬ ಲಿಂಗಾಯತನ ಮನೆಯನ್ನು ಸಂದರ್ಶಿಸಿ ಮೇಲು-ಕೀಳು, ಬಡವ-ಬಲ್ಲಿದ ಭೇದವಿಲ್ಲದೆ ಲಿಂಗಾರ್ಚನೆ ಮಾಡಿ ಪ್ರಸಾದ ಸ್ವೀಕರಿಸಿದರಂತೆ. ನೀಲಗಾರರು ಎಂಬ ನಿಮ್ನ ವರ್ಗದವರಿಗೆ ದೀಕ್ಷೆ ಕೊಟ್ಟರಂತೆ. ಅವರು ಎಲ್ಲಾ ರೀತಿಯಲ್ಲೂ ಪ್ರಗತಿ ಸಾಧಿಸಿದರಂತೆ. ಇನ್ನೊಮ್ಮೆ ಸೊಲ್ಲಾಪುರಕ್ಕೆ ಪೂಜೆ-ಪ್ರಸಾದದ ಬಿನ್ನಹ ಒಪ್ಪಿಕೊಂಡರಂತೆ. ಅದರಂತೆ ಹೋಗುತ್ತಲಿರುವಾಗ ಮೇಲ್ಜಾತಿಯ ವೀರಶೈವವಾದಿಗಳು ಬಂದು "ನೀವು ಜಂಗಮರು. ಅವರ ಮನೆಗೆ ಹೋಗತಕ್ಕದ್ದಲ್ಲ" ಎಂದು ತಡೆಯೊಡ್ಡಿದಾಗ ಅವರು ರಸ್ತೆಯ ಮಧ್ಯದಲ್ಲಿ ಅಲ್ಲೇ ಧರಣಿ ಕುಳಿತುಬಿಟ್ಟರಂತೆ. ಪೂಜೆ-ಪ್ರಸಾದವಿಲ್ಲದೆ ಕುಳಿತಾಗ ಭೂಕಂಪವಾಗಿ ಎಲ್ಲರೂ ಭಯಗೊಂಡು, ಬಂದು ಕ್ಷಮೆ ಕೇಳಿದ ಮೇಲೆ ರೇವಪ್ಪಯ್ಯ ಶರಣರು ಬಿನ್ನಹ ಒಪ್ಪಿಕೊಂಡು ಮನೆಗೆ ಹೋಗಿ ಪೂಜೆ ಮಾಡಿ ಪ್ರಸಾದವನ್ನು ಸ್ವೀಕರಿಸಿದರಂತೆ.

ಜೇವರ್ಗಿಯ ಷಣ್ಮುಖ ಶಿವಯೋಗಿಗಳದೂ ಮಹತ್ವಪೂರ್ಣ ಕೊಡುಗೆ ಲಿಂಗಾಯತ ಧರ್ಮಕ್ಕೆ ಸುವರ್ಣ ಯುಗ ಪ್ರಾಪ್ತಿಯಾದುದು ಲಿಂ|| ಫ.ಗು.ಹಳಕಟ್ಟಿ ವಚನ ವಾಙ್ಮಯವನ್ನು ಬೆಳಕಿಗೆ ತಂದ ಮೇಲೆ ಅದೇ ಕಾಲದಲ್ಲಿ ರಾಹುಗ್ರಸ್ತ ಪ್ರಾಪ್ತಿಯಾದುದೂ ಒಂದು ವಿಪರ್ಯಾಸ. 1904ರಲ್ಲಿ ವೀರಶೈವ ಮಹಾಸಭೆ ಸ್ಥಾಪಿಸಿ ದೊಡ್ಡ ದುರಂತಕ್ಕೆ ಕಾರಣರಾದವರು ಶ್ರೀ ಹಾನುಗಲ್ ಕುಮಾರ ಸ್ವಾಮಿಗಳು 15-16ನೆಯ ಶತಮಾನದಿಂದ ಲಿಂಗಾಯತ ಧರ್ಮ ಎಂಬ ಶುದ್ಧ ಹಾಲಿಗೆ 'ಶೈವ' ಎಂಬ ನೀರನ್ನು ಬೆರೆಸಿ ತೆಳ್ಳಗೆ (dilute) ಮಾಡುವ ತಂತ್ರ ನಡೆದರೆ 1904ರಿಂದ ವೈದಿಕ ಎಂಬ ಮಾಲಿನ್ಯವನ್ನು ಸೇರಿಸುವ ಪರಮ ಘಾತಕ ಕೆಲಸವನ್ನು ಪಂಚ ಪೀಠಾಧೀಶರು (ಇವರು ಪ್ರಗತಿಪರ ಲಿಂಗಾಯತ ಧರ್ಮಕ್ಕೆ ಪೀಡಾಧೀಶರೇ ಆಗಿದ್ದಾರೆ) ಮತ್ತು ಹಾನುಗಲ್ ಶ್ರೀಗಳು ಮಾಡಿದರು. ಲಿಂಗಾಯತರಿಗೆ ಸಲ್ಲದ ವೇದಾಭ್ಯಾಸ ಮಾಡಿಸಲು ವೇದಪಾಠಶಾಲೆ ತೆರೆದರು. ಜಂಗಮ ಎಂಬ ಘನ ತತ್ತ್ವವನ್ನು ಜಾತಿಯನ್ನಾಗಿ ವಿಕೃತಗೊಳಿಸಿದರು. ತಮಗೆ ಸಂಬಂಧವಿಲ್ಲದ ವೀರಶೈವ ಎಂಬ ಸವಕಳಿ ಪದ ತಂದು ಲಿಂಗಾಯತ ಸಮಾಜದ ತಲೆಯ ಮೇಲೆ ಚಪ್ಪಡಿಯಂತೆ ಎಳೆದು ಈ ಪುಣ್ಯ ಪುರುಷರು ಮಾಡಿದ ಅನ್ಯಾಯ ಸರಿಪಡಿಸುವುದು ಎಷ್ಟು ಕಷ್ಟಸಾಧ್ಯವಾಗಿದೆ. ವರ್ಣವ್ಯವಸ್ಥೆಯನ್ನೇ ಧಿಕ್ಕರಿಸಿದ ಲಿಂಗಾಯತ ಧರ್ಮೀಯರಲ್ಲಿ ಜಂಗಮರೆಂಬ ಲಿಂಗಿ ಬ್ರಾಹ್ಮಣರನ್ನು ಸೃಷ್ಟಿಸಿದರು. ವಿಪರ್ಯಾಸವೆಂದರೆ ಅವರು ಈಗ ಮೂಲ ಜಂಗಮ, ಬ್ಯಾಡ ಜಂಗಮ, ಬುಡಗ ಜಂಗಮ ಎಂಬ ಪರಿಶಿಷ್ಟ ಜಾತಿಯವರಾಗಲು ಸುಳ್ಳು ಪ್ರಮಾಣ ಪತ್ರ ಸೃಷ್ಟಿಸುತ್ತಿದ್ದಾರೆ.

ಒಮ್ಮೆ ಬಳ್ಳಾರಿಯ ಕಡೆಯಿಂದ ಬೆಂಗಳೂರಿಗೆ ಬರುತ್ತಿದ್ದೆವು. ಕತ್ತಾಳೆಯ ನಾರನ್ನು ರಸ್ತೆಯ ಮೇಲೆ ಹಾಸಿದ್ದರು, ವಾಹನಗಳು ಹಾದು ಹೋಗಿ ಅದು ಎಳೆ ಬಿಡಲೆಂದು. ರೈತರು ತೆನೆಗಳನ್ನು ಕಣಮಾಡಲಾರದ ಸೋಮಾರಿತನದಿಂದ ರಸ್ತೆಯಲ್ಲಿ ತುಳಿಸಲು ಹಾಕುವರು ತಾನೆ ? ಗಾಲಿ ಹರಿದು ಕಾಳುಗಳು ತೆನೆಯಿಂದ ಬೇರ್ಪಡುತ್ತವೆ. ಇದೂ ಒಂದು ಬಗೆಯಿಂದ ನಾವು (ಸೋಮಾರಿ) ರೈತರಿಗೆ ಮಾಡಬಹುದಾದ ಉಪಕಾರ ಎಂದು ಭಾವಿಸಿದೆ. ಡ್ರೈವರ್ ಪಕ್ಕಕ್ಕೆ ತೆಗೆದುಕೊಳ್ಳುತ್ತಿದ್ದ. ನಾನು ಅಪಾತ್ರ ಮರುಕದಿಂದ, "ಅದರ ಮೇಲೆ ಬಿಡು, ಸಹಾಯವಾಗುತ್ತೆ" ಎಂದೆ. ಅಬ್ಬಾ ಎಂಥಾ ಅನಾಹುತ ! ಅಂಬಾಸಿಡರ್ ಚಕ್ರಕ್ಕೆ ಎರಡೂ ಚಕ್ರಗಳ ಮಧ್ಯೆ ಇರುವ ಅಚ್ಚಿಗೆ ಕತ್ತಾಳೆ ನಾರು ಸುತ್ತಿಕೊಂಡು ಕಾರು ನಿಂತು ಬಿಟ್ಟಿತು. ಹತ್ತಿರದಲ್ಲಿದ್ದ ತೋಟಕ್ಕೆ ಹೊಗಿ ಒಂದು ಕುಡುಗೋಲು ತಂದು ಒಂದೊಂದೇ ಎಳೆಯನ್ನು ಕೊಯ್ದು ತೆಗೆದು ಕಾರನ್ನು ಮುನ್ನಡೆಸಲು ಒಂದು ಗಂಟೆ ಕಾಲ ಹಾಳಾಯಿತು. ವೀರಶೈವ ಪಂಥ ಇಂದು ತೆನೆಯಾಗದೆ ಕತ್ತಾಳೆಯ ನಾರಾಗಿ ಲಿಂಗಾಯತ ಸಮಾಜದ ಗಾಡಿ ಚಲಿಸದಂತೆ, ಪ್ರಗತಿ ಶೀಲತೆಯನ್ನು ಕಳೆದುಕೊಳ್ಳುವಂತೆ ಮಾಡಿದೆ.

ಲಿಂಗಾಯತ ಧರ್ಮ ವಿಮೋಚನಾ ಚಳುವಳಿಯನ್ನು ಈಗ ನಾವು ಆರಂಭಿಸಿದ್ದೇವೆ. ವೈದಿಕ, ಶೈವ, ವೀರಶೈವ, ನಾಸ್ತಿಕವಾದ ಎಂಬ ನಾಲ್ಕು ಸಂಕೋಲೆಗಳಿಂದ ಈಗ ಲಿಂಗಾಯತ ಧರ್ಮವನ್ನು ವಿಮೋಚನೆಗೊಳಿಸಿ, ಸ್ವತಂತ್ರ ಧರ್ಮವಾಗಿ ಪಟ್ಟಗಟ್ಟಬೇಕಾಗಿದೆ. ಆದ್ದರಿಂದ ನಿಜ ಬಸವ ಭಕ್ತರು ವಚನ ಸಾಹಿತ್ಯದ ಮೂಲ ಆಶಯವನ್ನು ಅರಿತು ದೃಢವಾದ ಹೆಜ್ಜೆಗಳನ್ನಿಡಬೇಕಾಗಿದೆ.

ಅದೃಷ್ಟವಂತರಾದ ಬೌದ್ಧ, ಜೈನ, ಸಿಖ್ಖರು

ಆಚರಣೆಯಲ್ಲಿ ನಿರ್ದಿಷ್ಟತೆ, ಸಿದ್ಧಾಂತದಲ್ಲಿ ಖಚಿತತೆ ಹೊಂದಿರುವ ಬೌದ್ಧ, ಜೈನ, ಸಿಖ್ ಧರ್ಮಗಳು ಬ್ರಿಟಿಷರ ಕಾಲದಲ್ಲಿಯೇ ಸ್ವತಂತ್ರ ಧರ್ಮಗಳೆಂಬ ಮಾನ್ಯತೆ ಹೊಂದಿ ಜಗತ್ತಿನಾದ್ಯಂತ ಕೇಳಲ್ಪಟ್ಟಿವೆ. ಸಿಖ್ ಧರ್ಮ ನಮ್ಮ ಧರ್ಮ ಹುಟ್ಟಿದ ಮೇಲೆ ನಾಲ್ಕು ನೂರು ವರ್ಷಗಳ ನಂತರ ಹುಟ್ಟಿತು.

ಜನಸಂಖ್ಯೆ ನಮ್ಮ ಅರ್ಧದಷ್ಟೂ ಇಲ್ಲ. ಜೈನ ಧರ್ಮವು ಕಠಿಣತಮ ಆಚರಣೆಗಳಿಂದ ಮೇಲ್ವರ್ಣೀಯರನ್ನು ಆಕರ್ಷಿಸಿ ನಿಧಾನಗತಿಯಿಂದ ಬೆಳೆಯುವಂಥದು. ಎಂಥೋವೆನ್‌ನಂತ ಓರ್ವ ಕ್ರಿಯಾಶೀಲ ಬ್ರಿಟಿಷ್ ಅಧಿಕಾರಿ ಮಾನ್ಯತೆ ಕೊಡಬಹುದಾದ ಸಮಯದಲ್ಲಿ ಉಳ್ಳಾಗಡ್ಡೆ ತಲೆ ಲಿಂಗಾಯತರು ತಾವು ವೀರಶೈವರು, ಲಿಂಗೀಬ್ರಾಹ್ಮಣರು, ಹಿಂದುಗಳು ಎಂದು ಮನವಿ ಕೊಟ್ಟು ಒಂದು ಮಹಾನ್ ಧರ್ಮವನ್ನು ಜಾತಿಯನ್ನಾಗಿ ಮಾಡಿಬಿಟ್ಟರು. ಈ ಪೂರ್ವಜರು ಅಜ್ಞಾನದಿಂದ ಮಾಡಿದ ತಪ್ಪನ್ನು ಸರಿಪಡಿಸುವುದು ಎಷ್ಟು ಕಷ್ಟಸಾಧ್ಯವಾದ ಕೆಲಸವಾಗುತ್ತಿದೆ. ಪ್ರಾಜ್ಞರು, ವಿಚಾರಶೀಲರು ಆದ ಬ್ರಿಟಿಷರ ಕೈಯಿಂದ ಮಾನ್ಯತೆ ಪಡೆದುಕೊಂಡಷ್ಟು ಈಗ ಸುಲಭಸಾಧ್ಯವಿಲ್ಲ. ಆದರೂ ನನಗೆ ಅಚಲ ವಿಶ್ವಾಸವಿದೆ. ಬಸವಾದಿ ಪ್ರಮಥರ ಸಂಕಲ್ಪ ಹುಸಿಯಾಗದು. ಅವರ ಸಾಧನೆ ನಗಣ್ಯವಾಗಿ ಉಳಿಯದು. ಒಳಹೊರಗಿನ ಪುರೋಹಿತಶಾಹಿ ಜನರು ದೊಡ್ಡ ಆತಂಕವಾಗಿ ನಿಲ್ಲುತ್ತಾರೆ. ಆದರೆ ಯಾವ ಒಂದು ತುಳಿತಕ್ಕೊಳಗಾದ ಜನಾಂಗದ ಬಿಡುಗಡೆಗಾಗಿ ಬಸವಾದಿ ಪ್ರಮಥರು ತ್ಯಾಗ ಮಾಡಿ, ಭಾರತ ದೇಶದಲ್ಲಿ ಮೊಟ್ಟ ಮೊದಲನೆಯದಾದ ಸಮಾನತೆಯ ಕ್ರಾಂತಿ ಕಹಳೆ ಊದಿದರೋ ಆ ಜನರು ನೆರವಾಗಬಹುದು ಮತ್ತು ಪ್ರಾಜ್ಞರಾದ ಎಲ್ಲಾ ಜಾತಿಮತ ಧರ್ಮಗಳವರೂ ನೆರವಾಗಬಹುದು ಎಂಬ ಆಶೆಯು ನನ್ನಲ್ಲಿ ಮಿನುಗುತ್ತಿದೆ.

ಸಂಕಲ್ಪ ದೃಢವಾಗಿರಬೇಕು

ಲಿಂಗಾಯತ ಧರ್ಮದ ವಿಮೋಚನಾ ಕಾರ್ಯಕ್ಕೆ ಒಂದು ರೀತಿಯಲ್ಲಿ 2001ನೆಯ ಇಸವಿಯ ಜನಗಣತಿ ನಾಂದಿ ಹಾಡಿದೆ. ಈ ಜನಗಣತಿಯಲ್ಲಿ ನಮಗೆ ಪೂರ್ಣ ಪ್ರಮಾಣದ ನ್ಯಾಯ ಸಿಗಬಹುದೆಂಬ ವಿಶ್ವಾಸ ಅಷ್ಟಾಗಿ ಇಲ್ಲ. 1. ನಾವು 3 ವರ್ಷಗಳಿಂದ ತರಬೇತಿ ಕೊಟ್ಟರೂ ಇಡೀ ಸಮಾಜವನ್ನು ತಟ್ಟಿ ಎಬ್ಬಿಸಲು ಆಗಿಲ್ಲ.

2. ವೀರಶೈವ ಮಹಾಸಭೆ ತೊಡರುಗಾಲನ್ನು ಹಾಕಿ ತಾವು ಲಿಂಗಾಯತರು ಎಂದು ದೃಢವಾಗಿ ನಂಬಿದ್ದವರನ್ನೂ ವೀರಶೈವರೆಂದು ಬರೆಸಿ ಎಂದು ಪ್ರಚಾರ ಮಾಡಿ ಗೊಂದಲಕ್ಕೆ ಈಡು ಮಾಡಿತು.

3. ಡಾ|| ಚಿ.ಮೂ ಅವರಂಥ ವೈದಿಕ ವೀರಶೈವರು ಲಿಂಗಾಯತ ಧರ್ಮೀಯರನ್ನು ಮೊದಲೇ ಅಜ್ಞಾನದಲ್ಲಿ ಇರುವವರನ್ನು, ಇನ್ನಷ್ಟು ಗೊಂದಲದ ಕೂಪಕ್ಕೆ ತಳ್ಳಿದರು.

4. ಸಮಾಜ-ಧರ್ಮಗಳ ಹಿಂತಚಿಂತನೆ ಬಯಸಬೇಕಾದ, ಲಿಂಗಾಯತ ಸಮಾಜದ ಋಣದಿಂದಲೇ ಬೆಳೆದುನಿಂತರೂ, ಅದರ ಹಿತವನ್ನು ರಕ್ಷಿಸದೆ ಕೆಲವರನ್ನು ಹೊರತು ಪಡಿಸಿ ದೊಡ್ಡ ದೊಡ್ಡ ಮಠಾಧೀಶರು ಬಾಯಿಯಲ್ಲಿ ಕಡುಬು ಇಟ್ಟುಕೊಂಡವರಂತೆ ಮೌನ ತಳೆದರು.

5. ಹಿಂದುವಾದಿಗಳು ಜನಗಣತಿದಾರರ ಮೂಲಕ ಲಿಂಗಾಯತ ಎಂದು ಹೇಳಿದರೂ ಬರೆದುಕೊಳ್ಳದೆ, ಹಿಂದು ಎಂದು ಬರೆದುಕೊಂಡು ನಾಗರಿಕರ ಹಕ್ಕನ್ನು ಕಸಿದುಕೊಂಡರು.

6. ಪತ್ರಿಕೋದ್ಯಮವು ಪುರೋಹಿತಶಾಹಿಯ ಕೈಯಲ್ಲಿರುವುದು ಎಲ್ಲರಿಗೂ ತಿಳಿದ ಸಂಗತಿ. ಹಣ ಹಾಕಿದ ಮಾಲಿಕರು ಶೂದ್ರರಿರಬಹುದು, ಲಿಂಗಾಯತರಿರಬಹುದು ಆದರೆ ಜುಟ್ಟು ಬುದ್ಧಿಜೀವಿಗಳಾದ ಬ್ರಾಹ್ಮಣರ ಕೈಯಲ್ಲಿ. ಈ ವಿಷಯದಲ್ಲಿ ಪತ್ರಿಕಾಗೋಷ್ಠಿ ಕರೆದರೆ ಬಹುಪಾಲು ಪ್ರತಿನಿಧಿಗಳು ಬುಸುಗುಟ್ಟುತ್ತ ಬರುತ್ತಿದ್ದರು. ಅನೇಕರು, ಹೇಳುವ ಮೊದಲೇ ಪೂತ್ಕರಿಸುತ್ತಿದ್ದರು. ಅದೇ ಪುರೋಹಿತಶಾಹಿಯ ಪ್ರತಿನಿಧಿಗಳಾದ ಡಾ || ಚಿ. ಮೂ, ಡಾ || ಎಂ. ಡಿ. ಶಿವಕುಮಾರ ಸ್ವಾಮಿ ಮುಂತಾದವರ ವೀರಶೈವರು ಹಿಂದುಗಳು ಎಂಬ ಲೇಖನಗಳನ್ನು ಪುಟಗಟ್ಟಳೆ ಕೊಡುತ್ತಿದ್ದರು. ಸಹಜವಾಗಿ ಅವರು ಬರೆದು ಕಳಿಸುವ ಪತ್ರಿಕಾ ಹೇಳಿಕೆಗಳನ್ನು ಕೊಟ್ಟರೆ ನಾವು ಅಧಿಕೃತವಾಗಿ

ಪತ್ರಿಕಾಗೋಷ್ಠಿ ಕರೆದು ಕೊಟ್ಟರೂ ಹಾಕುತ್ತಿರಲಿಲ್ಲ. ಕೆಲವರು ಹಾಕಿದರೆ ಬರೀ ನಗರದ ಆವೃತ್ತಿಯಲ್ಲಿ ಮಾತ್ರ. ವಿಜಯ ಕರ್ನಾಟಕ ಮೇ 21ರಿಂದಲೂ ನಾವು ಕೊಟ್ಟದ್ದಕ್ಕೆ ವ್ಯತಿರಿಕ್ತ ವಿಚಾರವನ್ನು ಹಾಕುತ್ತಿತ್ತು. ಲಿಂಗಾಯತ ಎಂದು ಬರೆಸಿರಿ ಎಂದು ನಾವು ಕರೆಕೊಟ್ಟರೆ ವೀರಶೈವ ಎಂದು ಬರೆಸಿರಿ ಎಂದು ಕರೆಕೊಟ್ಟರು ಎಂದು ವಿಜಯ ಕರ್ನಾಟಕ ವರದಿ ಮಾಡುತ್ತಿತ್ತು. ಹಣ ಹಾಕಿದ ಮಾಲಿಕರು ವಿಜಯ ಸಂಕೇಶ್ವರ್-ಬ್ರಾಹ್ಮಣೀಕರಣಗೊಂಡ ಲಿಂಗಾಯತರು. ಇನ್ನು ಒಳಗೆ ಕೆಲಸ ಮಾಡುವವರೆಲ್ಲ ಅಪ್ಪಟ ವೈದಿಕರು. ಸಂಯುಕ್ತ ಕರ್ನಾಟಕ ಮುಖ್ಯಸ್ಥರು ಬ್ರಾಹ್ಮಣರು. ಆದರೆ ನಾನು ಕೊಟ್ಟ ಒಂದು ಪತ್ರಿಕಾ ಹೇಳಿಕೆ, ಬಹಳ ಕಠೋರ ಸತ್ಯವಾಗಿದ್ದರೂ ಸಂಯುಕ್ತ ಕರ್ನಾಟಕ ಚೆನ್ನಾಗಿ ವರದಿ ಮಾಡಿತು. ಆದರೆ ಅಂದಿನ ಪತ್ರಿಕಾ ಗೋಷ್ಠಿಯ ವಿವರ ಕುರಿತು ವಿಜಯ ಕರ್ನಾಟಕ ಒಂದು ಚಕಾರವನ್ನೂ ಪ್ರಕಟಿಸಲಿಲ್ಲ. ಆಗ ವಿಜಯಾ ಸಂಕೇಶ್ವರ್ ಕುರಿತು ಒಂದು ಸುಭಾಷಿತ ನೆನಪಿಗೆ ಬಂದಿತು. ಸೂರ್ಯನಿಗಿಂತಲೂ ಸೂರ್ಯನಿಂದ ಕಾಯ್ದ ಮರಳಿನ ಮೇಲೆ ನಡೆಯುವುದು ಕಷ್ಟ ಎಂಬುದು ಶ್ರೀ ವಿಜಯಾ ಸಂಕೇಶ್ವರ, ಶ್ರೀ ಎಡೆಯೂರಪ್ಪನವರಂಥ ಬ್ರಾಹ್ಮಣೀಕರಣಗೊಂಡ ಲಿಂಗಾಯತರು ವೈದಿಕ ಧರ್ಮಕ್ಕೆ ಪೋಷಕರಾದಾರೇ ವಿನಾ ತನ್ನ ಸ್ವಧರ್ಮಕ್ಕಲ್ಲ. ಏಕೆಂದರೆ ಅವರ ಹುಟ್ಟು ಆಕಸ್ಮಿಕವಾಗಿ ಲಿಂಗಾಯತ ಸಮಾಜದಲ್ಲಿ ಆದರೂ ಅವರು ಆಯ್ದುಕೊಂಡುದು ವೈದಿಕ ಧರ್ಮಾಧಾರಿತ ಪಕ್ಷವನ್ನು ತಾನೆ ?

ಯಾವಾಗ ನಾವು ಸತ್ಯವಾದಿಗಳಾಗುತ್ತೇವೆಯೊ ಆಗ ಪುರೋಹಿತ ಶಾಹಿಯಿಂದಲೇ ತುಂಬಿ ತುಳುಕುವ ಪತ್ರಿಕಾರಂಗ, ಟಿ.ವಿ ವಾಹಿನಿಗಳವರು ಸಹಕರಿಸಲಿಕ್ಕಿಲ್ಲ. ಇದಕ್ಕೆಲ್ಲ ಅಂಜಿಯೇ ನಮ್ಮ ಮಠಾಧೀಶರು ಗಪ್‌ಚುಪ್ ಎನ್ನದೆ ಕುಳಿತುಕೊಳ್ಳುವುದು. ಅನೇಕ ಸಂಘ - ಸಂಸ್ಥೆ ಕಟ್ಟಿ ಸ್ವಾತಂತ್ರ್ಯ ಕಳೆದುಕೊಂಡ ಅವರು ಸತ್ಯ ಹೇಳದಷ್ಟು ನಿಸ್ಸಹಾಯಕರು

ಇಂಥ ವಿಲಕ್ಷಣ ಪರಿಸ್ಥಿತಿಯಲ್ಲಿ ಲಿಂಗಾಯತ ಧರ್ಮವನ್ನು ವೈದಿಕ ಹಿಂದು ಧರ್ಮದ ಕಕ್ಷೆಯಿಂದ ಬಿಡಿಸಿ ಸ್ವತಂತ್ರ ಧರ್ಮವನ್ನಾಗಿ ಘೋಷಿಸುವಂತೆ, ಸಂವಿಧಾನಾತ್ಮಕ ಮನ್ನಣೆ ಸಿಗುವಂತೆ ಮಾಡುವುದು ತುಂಬಾ ಶ್ರಮದಾಯಕ ಕೆಲಸ.

ಇಂದು ಒಬ್ಬರು ಫೋನ್ ಮಾಡಿ ಕೇಳಿದರು, " ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಬೇರೆ ಯಾವುದೂ ಧರ್ಮಕ್ಕೆ ಸ್ವತಂತ್ರ ಸ್ಥಾನ ಸಿಕ್ಕಿಲ್ಲ; ಅಂದಾಗ ಲಿಂಗಾಯತ ಧರ್ಮಕ್ಕೆ ಹೇಗೆ ಸಿಗುತ್ತದೆ ?"

ಇದು ಹಾಸ್ಯಾಸ್ಪದ ಪ್ರಶ್ನೆ. ಅಂಥ ಪ್ರಯತ್ನವನ್ನೇ ಯಾರೂ ಮಾಡಿಲ್ಲ. ಒಂದು ಸ್ವತಂತ್ರ ಧರ್ಮವಾಗಬೇಕಾದರೆ ಅದಕ್ಕೆ ಇರಬೇಕಾದ ಅಗತ್ಯ ಲಕ್ಷಣಗಳಿಲ್ಲದೆ ಯಾರು ತಾನೇ ಹೇಗೆ ಪ್ರಯತ್ನ ಮಾಡಬಲ್ಲರು ? ಲಿಂಗಾಯತರಾದರೂ ಅಜ್ಞಾನಿಗಳಾಗಿ ತಮ್ಮದು ಕೇವಲ ಹಿಂದುದೊಳಗಣ ಒಂದು ಜಾತಿ ಎಂದು ತಿಳಿದುದರಿಂದ ತಾನೇ ಇಂಥ ದಾಸ್ಯಕ್ಕೆ ಒಳಗಾದದ್ದು ?

ವಿಧಾನ ಪರಿಷತ್ ಸಭಾಪತಿ ಶ್ರೀ ಡೇವಿಡ್ ಸಿಮೆಯೋನ್‌ರವರು ಶರಣ ಮೇಳಕ್ಕೆ ಬಂದಾಗ ನುಡಿದರು. "ಪಾಪ, 1971 ರ ಜನಗಣತಿಯಿಂದ ಸುಮಾರು 30 ವರ್ಷಗಳಿಂದಲೂ ಪ್ರಯತ್ನಿಸು-ತ್ತಿರುವರು. ಇನ್ನೂ ಸಿಕ್ಕಿಲ್ಲ." ಆಗ ನಾನು ಹೇಳಿದೆ, "ಮಾನ್ಯತೆ ಕೊಡದಿರುವುದು ಕೇಂದ್ರ ಸರ್ಕಾರದವರ ತಪ್ಪು ಎನ್ನುವುದಕ್ಕಿಂತಲೂ ಸರಿಯಾಗಿ ಕೇಳದೆ ಇರುವ ಲಿಂಗಾಯತರದೇ ತಪ್ಪು. ವೀರಶೈವ ಪದ ಇಟ್ಟುಕೊಂಡು ಇನ್ನೂ ಒಂದು ಸಾವಿರ ವರ್ಷ ಪ್ರಯತ್ನಿಸಿದರೂ ಇವರು ಯಶಸ್ವಿಯಾಗರು." ಎಂದು ಹೇಳಿದೆ.

ಯಾರೋ ಮಾಡಿದ ಪಾಪಕ್ಕೆ ಯಾರಿಗೋ ಶಿಕ್ಷೆ

ಆಯುರ್ವೇದೀಯ ಆಹಾರ ಎಂಬ ಒಂದು ಪುಸ್ತಕ ಓದುತ್ತಿದ್ದೆ. ಆಗ ಅದರಲ್ಲಿ ಒಂದು ಮಾತು

ಹೀಗೆ ಬಂದಿತು. " ಯಾರೋ ಮಾಡಿದ ತಪ್ಪಿಗೆ ಬೇರೆ ಯಾರೋ ಏಕೆ ಶಿಕ್ಷೆ ಅನುಭವಿಸಬೇಕು ? ನಾಲಿಗೆ ಮಾಡಿದ ತಪ್ಪಿಗೆ ಅಂದರೆ ನಾಲಿಗೆಯು ರುಚಿಗಾಗಿ ತಿನ್ನುವ ದುರಭ್ಯಾಸದಿಂದ ಹೊಟ್ಟೆ ಸಂಕಟವನ್ನು ಅನುಭವಿಸಬೇಕಲ್ಲವೆ ?" ಇದೇ ಮಾತು ವೀರಶೈವ ಮತ್ತು ಲಿಂಗಾಯತಕ್ಕೂ ಅನ್ವಯಿಸುತ್ತದೆ. ವೀರಶೈವವು ತಂದು ಹಾಕಿದ ಕೊಳೆಯು ಲಿಂಗಾಯತ ಧರ್ಮದ ಶುಚಿತ್ವವನ್ನು, ಆದಿ ಶರಣರ ಆಶೋತ್ತರವನ್ನು ಹಾಳುಗೆಡವಿತು. ವೀರಶೈವರಾದ ಪಂಚಪೀಠಾಧೀಶರು ರಾಜ್ಯಪಾಲರನ್ನು ಕೆಳಗೆ ಕೂರಿಸಿ, ಸಮಾನತೆಯಿಂದ ವಿಜೃಂಭಿಸುವ ಲಿಂಗಾಯತ ಧರ್ಮ - ಸಮಾಜಗಳ ಬಗ್ಗೆಯೇ ತಪ್ಪು ಕಲ್ಪನೆ ಹುಟ್ಟುವಂತೆ ಮಾಡಿದರು. ಬೇರೆಯವರಿಗೆ ವೀರಶೈವ ಮತ್ತು ಲಿಂಗಾಯತಗಳ ಮಧ್ಯೆ ಇರುವ ವ್ಯತ್ಯಾಸ ಏನು ಗೊತ್ತಿದೆ ? ಬೆಳಗಾಂವಿಯಲ್ಲಿ ಪಂಚ ಪೀಠಾಧೀಶರ ಸಮಾವೇಶವಾದಾಗ ವಯೋವೃದ್ಧರು, ಹಿರಿಯರೂ ಆದ ಪೂಜ್ಯ ನಾಗನೂರು ಶ್ರೀಗಳಿಗೆ ಸಮಾನವಾಗಿ ಕುರ್ಚಿಕೊಡದೆ ಅಸಹ್ಯತನ ಪ್ರದರ್ಶಿಸಿದರು. ಶ್ರೀಮಂತ ಹೆಣ್ಣು ಮಕ್ಕಳನ್ನು ನಾಚಿಸುವಂತೆ ಈ ಪೀಠಾಧೀಶರು ಹೇರಿಕೊಳ್ಳುವ ಕಿರೀಟ, ಉಂಗುರ ಇತ್ಯಾದಿ ಸರಳತೆ ಬೋಧಿಸುವ ಶರಣೋಕ್ತ ಲಿಂಗಾಯತ ಧರ್ಮಕ್ಕೆ ಕಳಂಕ. ಬಸವಾದಿ ಪ್ರಮಥರು ಕೊಟ್ಟ ವಿಚಾರ-ಆಚಾರಗಳಿಂದ ಪೂರ್ತಿಯಾಗಿ ಬೇರೆಯೇ ಆಗಿರುವ ಪಂಚ ಪೀಠಾಧೀಶರು ಹಿಂದಿನ ಆಚಾರ್ಯರು ಕೊಟ್ಟ (?) ಧರ್ಮವನ್ನೇ ಬಸವಣ್ಣನವರು ಪ್ರಚಾರ ಮಾಡಿದರು ಎಂದು ಹೇಳುತ್ತಾರೆ. ಯಾರೋ ಮಾಡಿದ ಅಡಿಗೆಯನ್ನು ಹಿತ್ತಲ ಬಾಗಿಲಿನಿಂದ ತಂದು ಅತಿಥಿಗಳಿಗೆ ಊಟಕ್ಕಿಟ್ಟು ನಾವೇ ಅಡಿಗೆ ಮಾಡಿದೆವು ಎಂದು ಹೇಳಿಕೊಳ್ಳುವ ಅಪ್ರಾಮಾಣಿಕ ಗೃಹಿಣಿಯಂತೆ, ಅಷ್ಟಾವರಣ ಪಂಚಾಚಾರ, ಷಟಸ್ಥಲಯುಕ್ತ, ಅನುಭವ ಮಂಟಪದಲ್ಲಿ ಸಿದ್ಧವಾದ ಲಿಂಗಾಯತ ಧರ್ಮದ ಅಡಿಗೆಯನ್ನು ಸಂಸ್ಕೃತ ಶ್ಲೋಕಗಳೆಂಬ ಹಿತ್ತಲ ಬಾಗಿಲ ಮೂಲಕ ತೂರಿಸಿ ತಾವೇ ಅಡಿಗೆ ಮಾಡಿದವರೆಂದು ಹೇಳಿಕೊಳ್ಳುತ್ತಾರೆ. ಆಡಂಬರ, ಅಸಮಾನತೆ, ಶೋಷಣೆ, ಮೂಢನಂಬಿಕೆಗಳ ದೃಷ್ಟಿಯಲ್ಲಿ ವೈದಿಕ ಸ್ವಾಮಿಗಳನ್ನು ಮೀರಿಸುತ್ತಾರೆ. ಆದ್ದರಿಂದ ಬಸವ ಪಥಿಕರು ಈ ಪಂಚ ಪೀಠಾಧೀಶರನ್ನು ವಿಮರ್ಶಿಸುವುದು ಸಾಕು. ಅವರ ಮಾರ್ಗವೇ ಬೇರೆ ; ಅದು ವೀರಶೈವ ಎಂದು ಅರಿತು ಸ್ಪಷ್ಟವಾಗಿ ಬಸವೋಕ್ತ ಲಿಂಗಾಯತ ಧರ್ಮವನ್ನು ಹಿಡಿದರೆ ಒಳ್ಳೆಯ ಸಮಾಜವನ್ನಾದರೂ ಕಟ್ಟಬಹುದು. ಅವರನ್ನು ಟೀಕಿಸಲು, ವಿಮರ್ಶಿಸಲು ಅಪವ್ಯಯ ಮಾಡುವ ಸಮಯವನ್ನು ವಿಧಾಯಕವಾಗಿ ಶರಣ ಸಮಾಜ ಕಟ್ಟಲು ವಿನಿಯೋಗಿಸಬಹುದು.

ಲಿಂಗಾಯತ ಧರ್ಮ - ಮಾನ್ಯತೆಗಾಗಿ ಹೋರಾಟ

2001, 21ನೆಯ ಶತಮಾನದ ಮೊದಲ ವರ್ಷ ; ಸಹಸ್ರಮಾನದ ಮೊದಲ ವರ್ಷವೂ ಅಹುದು. ಸಹಸ್ರಮಾನದ ಪುರುಷ, ಯುಗಪುರುಷ ಯಾರು ಎಂಬ ಪ್ರಶ್ನೆಗೆ ನಾವು ವಿಶ್ವಗುರು ಬಸವಣ್ಣನವರನ್ನು ಜಗತ್ತಿಗೆ ಪರಿಚಯ ಮಾಡಿಕೊಟ್ಟಿದ್ದರೆ ಇಡೀ ಜಗತ್ತಿನ ಪ್ರಾಜ್ಞರು ಬಸವಣ್ಣನವರನ್ನು ಆಯ್ಕೆ ಮಾಡುತ್ತಿದ್ದರು. ಅಲ್ಲಮ ಪ್ರಭುಗಳು ಅಂದೇ ಆಯ್ಕೆ ಮಾಡಿದ್ದಾರೆ.

ಯುಗದ ಉತ್ಸಾಹವ ನೋಡಿರೆ !
ಪಂಚಶಕ್ತಿಗಳಿಗೆ ಪಂಚ ಪ್ರಧಾನರು
ಅವರ ಆಗುಹೋಗನಾ ಶರಣನೆ ಬಲ್ಲ.
ಆ ಶರಣನು ತಾನು ತಾನಾಗಿ ಆರು ದರುಶನಕ್ಕೆ ಯಾಚಕನಲ್ಲ.
ನಿಘಂಟುಗಳೆಂಬವಕ್ಕೆ ಭೇದಕನಲ್ಲ. ಅದೆಂತೆಂದಡೆ :
ಅವರಂಗದ ಮೇಲೆ ಗುರುವಿಲ್ಲ, ಲಿಂಗವಿಲ್ಲ ಜಂಗಮವಿಲ್ಲ,
ಪ್ರಸಾದವಿಲ್ಲ, ಪಾದೋದಕವಿಲ್ಲದ ಭಾಷೆ

ಆ ಗುರು ಲಿಂಗ ಜಂಗಮ ಪ್ರಸಾದ ಪಾದೋದಕ ಏಕಾರ್ಥವಾದ ಕಾರಣ
ಪ್ರಾಣಗಳೆಲ್ಲವೂ ಪ್ರಣಾಮಂಗೈಯುತ್ತಿದ್ದವು
ಜೀವಿಗಳೆಲ್ಲವೂ ಜಯ-ಜೀಯಾ ಎನ್ನುತ್ತಿದ್ದವು
ಆತ್ಮಂಗಳೆಲ್ಲಾ ಅನುವ ಬೇಡುತ್ತಿದ್ದವು
ಗುಹೇಶ್ವರಾ, ಸಂಗನಬಸವಣ್ಣನ ಪಾದಕ್ಕೆ
ಈರೇಳು ಭುವನವೆಲ್ಲವೂ ಜಯ ಜೀಯಾ ಎನುತ್ತಿದ್ದವು.

ವಿಶ್ವಗುರು ಬಸವಣ್ಣನವರ ಕಾರ್ಯಸಾಧನೆ ಯುಗದ ಒಂದು ಮಹತ್ವಪೂರ್ಣ ಘಟನೆಯಂತೆ. ಪರಮಾತ್ಮನಿಗೆ 5 ಮುಖಗಳು - ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ. ಅರ್ಥಾತ್ 5 ಬಗೆಯ ವ್ಯಕ್ತಿತ್ವ, ಸೃಷ್ಟಿಯ ನಿರ್ಮಾಣ, ರಕ್ಷಣೆ, ಲಯ, ತಿರೋದಾನ, ಅನುಗ್ರಹ. ಈ ಐದು ಕಾರ್ಯಗಳನ್ನು ತನ್ನ ಅಂತರ್ಗತವಾಗಿರುವ 5 ಮೊಗದ ಶಕ್ತಿ (energy)ಯಿಂದ ನಿರ್ವಹಿಸುವನು. ಜ್ಞಾನಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿ, ಆದಿಶಕ್ತಿ ಮತ್ತು ಪರಾಶಕ್ತಿ ಎಂಬುವೇ ಆ 5 ಶಕ್ತಿಗಳು.

ಈ ತತ್ವಶಾಸ್ತ್ರವನ್ನು ಬಸವಣ್ಣನವರು ಬಲ್ಲರು. ಈ ಮಾರ್ಗವು ಆರು ದರ್ಶನಗಳಿಂದ ಬೇರೆಯಾದುದು. ವೇದ, ಶಾಸ್ತ್ರ, ಆಗಮ, ಪುರಾಣಗಳಲ್ಲಿ ಸಿಗುವಂಥದಲ್ಲ. ಆ ಎಲ್ಲ ಮಾರ್ಗಗಳಲ್ಲಿ ನಡೆಯುವವರಿಗೆ ಗುರುಬೋಧೆಯಿಲ್ಲ, ಲಿಂಗಧಾರಣೆಯಿಲ್ಲ, ಜಂಗಮದ ನಿರಂತರ ಸಾಂಗತ್ಯವಿಲ್ಲ. ಶರಣರ ಒಕ್ಕೂಟ ಸೇರಿದಾಗ ಲಭ್ಯವಾಗುವ ಪದೋದಕವಿಲ್ಲ, ಪ್ರಸಾದವಿಲ್ಲ. ಹೀಗೆ ಗುರು-ಲಿಂಗ-ಜಂಗಮ-ಪದೋದಕ-ಪ್ರಸಾದಗಳಿಂದ ಕೂಡಿದ ವಿಶೇಷ ಮಾರ್ಗವನ್ನು ಧರ್ಮಪಿತರು ಕೊಟ್ಟುದರಿಂದ ಪ್ರಾಣಿಗಳು ಸಹ ಬಸವಣ್ಣನವರನ್ನು ಕೃತಜ್ಞತೆಯಿಂದ ಕೊಂಡಾಡುತ್ತವೆ. ಏಕೆಂದರೆ ಅವರು ಕೊಟ್ಟ ಅಹಿಂಸಾ ಧರ್ಮದಿಂದಾಗಿ ಹತ್ಯೆಯಾಗಬಹುದಾಗಿದ್ದ ಅಸಂಖ್ಯಾತ ಪ್ರಾಣಿಗಳ ಪ್ರಾಣ ಉಳಿಯಿತು. ಸಕಲ ಜೀವಾತ್ಮರಿಗೆ ಲೇಸು ಬಯಸುವ ದಾರಿಯನ್ನು ಕೊಟ್ಟುದರಿಂದ ಸಕಲ ಜೀವಿಗಳು ಬಸವಣ್ಣನವರಿಗೆ ಜಯಕಾರ ಹಾಕುತ್ತಲಿವೆ. ಹದಿನಾಲ್ಕು ಲೋಕ ಸಹಿತವಾಗಿ ಜಗತ್ತೆಲ್ಲವೂ ಕೃತಜ್ಞತೆಯನ್ನು ಸಲ್ಲಿಸುತ್ತಲಿದೆ.

ಇಂಥ ನೂರಾರು ವಚನಗಳ ಮೂಲಕ ಗೆರೆ ಕೊರೆದಂತೆ ಶರಣರು ಆದಿಗುರು ಬಸವಣ್ಣನವರು ಹೊಸ ಧರ್ಮವನ್ನು ಕೊಟ್ಟರು ಎಂದು ಹೇಳಿದ್ದಾರೆ. ಆದಿ ಶರಣರು ಅಷ್ಟು ಸ್ಪಷ್ಟವಾಗಿ ಹೇಳಿದ ಮಾತನ್ನು ಅರಿತುಕೊಳ್ಳಲು ದಡ್ಡ ಲಿಂಗಾಯತರಿಗೆ 850 ವರ್ಷ ಹಿಡಿದವು. ಇಂದಿಗೂ ಕೆಲವರಿಗೆ ಮನವರಿಕೆಯಾಗುತ್ತಿಲ್ಲ. ಡಾ|| ಜಿ.ಎಸ್. ಶಿವರುದ್ರಪ್ಪನವರು ತಮ್ಮ ಒಂದು ಸಂದರ್ಶನ "ಸಾಹಿತ್ಯ ಸಂವಾದ" ಪ್ರಜಾವಾಣಿ ಸಾಪ್ತಾಹಿಕ ಪುರವಣಿ 14-1-2001 ಹೇಳಿದ್ದಾರೆ. " ಈ ಧರ್ಮವನ್ನು ಶರಣ ಧರ್ಮ ಎಂದು ಕರೆಯುವುದು ಹೆಚ್ಚು ಸೂಕ್ತ ಎನ್ನಿಸುತ್ತದೆ. ಒಂದರ್ಥದಲ್ಲಿ ನಾನು ಈ ಶರಣ ಧರ್ಮಕ್ಕೆ ಸೇರಿದವನು ಎಂಬ ಬಗ್ಗೆ ಹೆಮ್ಮೆ ಕೂಡಾ ಇದೆ. ಯಾಕೆಂದರೆ ಅದು ವೈಚಾರಿಕವಾದ, ಉದಾರವಾದ, ಸಾಮಾಜಿಕ ಜವಾಬ್ದಾರಿ ಉಳ್ಳ, ಎಲ್ಲ ಮನುಷ್ಯರ ಏಕತೆಯ ಪರವಾಗಿರುವ ಧರ್ಮವಾಗಿ ರೂಪುಗೊಂಡದ್ದು. ಈ ಚರಿತ್ರೆಯನ್ನು ಗಮನಿಸಿದಾಗ ಸಂತೋಷವಾಗುತ್ತದೆ. ಈ ಶರಣ ಧರ್ಮ ತನ್ನ ಮೂಲ ಸ್ವರೂಪದಲ್ಲಿ ಶ್ರೀ ಸಾಮಾನ್ಯನ ಪರವಾಗಿ ನಿಂತದ್ದು, ಶ್ರೀ ಸಾಮಾನ್ಯರ ಎಲ್ಲ ವರ್ಗಗಳ ಹಿತದ ಬಗ್ಗೆ ಕಾಳಜಿ ಇಟ್ಟುಕೊಂಡದ್ದು."

ನಿಜವಾಗಿಯೂ ಶರಣ ಧರ್ಮ, ಬಸವ ಧರ್ಮ ಎಂಬ ಪದಗಳು ಸಂವೇದನಶೀಲ ಹೃದಯಗಳಿಗೆ ಆಪ್ಯಾಯಮಾನವಾದ ಹೆಸರು. ಅದನ್ನೇ ಪ್ರಾಯೋಗಿಕವಾಗಿ ಲಿಂಗಾಯತ ಎನ್ನುವುದು. ಆಳ ಹರಹುಗಳುಳ್ಳ ಈ ಶರಣ ಧರ್ಮ, ಬಸವ ಧರ್ಮ, ಲಿಂಗಾಯತ ಎಂಬ ಪರಿಕಲ್ಪನೆಯ ಮಾನಸ

ಸರೋವರವನ್ನು 'ವೀರಶೈವ'ವು ಕಲುಷಿತಗೊಳಿಸುವ ಕಾರಣ ಅದರ ಪ್ರಯೋಗವನ್ನು ತೊರೆಯುವುದು ಅತೀವ ಅಗತ್ಯದ ಕೆಲಸವಾಗಿದೆ.

ಆದ್ದರಿಂದಲೇ ದಿ.14-1-2001ರಂದು ಬಸವ ಧರ್ಮವು ಸಂಸ್ಥಾಪನೆಯಾದ (14-1-1155) 846ನೆಯ ವರ್ಷಕ್ಕೆ, ಲಿಂಗಾಯತ ಧರ್ಮದ ವಿಮೋಚನೆ ಮಾಡುವ ದೃಢ ಸಂಕಲ್ಪ ಮಾಡಲಾಗಿದೆ. ವೈದಿಕ ಮತ್ತು ವೀರಶೈವ ಪುರೋಹಿತಶಾಹಿಗಳಿಗೆ ಇದು ಅತೀವ ಸಂಕಟದ, ಅಸಹನೆಯ ವಿಷಯ. ಏಕೆಂದರೆ ವಚನ ವಾಙ್ಮಯದ ಸೋನಾ ಮಸೂರಿ ಅಕ್ಕಿಯಲ್ಲಿ ವೀರಶೈವ ಮತೀಯವಾದದ ಕಲ್ಲುಹರಳು ಸೇರಿಸಿ ಮಾರುತ್ತಿದ್ದವರಿಗೆ ಸಂಕಟವಾಗುವುದು ಸ್ವಾಭಾವಿಕ. ಬಹುಪಾಲು ಪತ್ರಿಕೆಗಳವರು, ಪ್ರಗತಿಪರ ವಿಚಾರದವರು ಬಿಟ್ಟರೆ ಖಂಡಿತಾ ಪ್ರಚಾರ ಕೊಡರು. ಇನ್ನಷ್ಟು ವಿಕೃತಗೊಳಿಸುವರು. ಆದರೆ ಸ್ವಯಂ ಸಂಘಟನೆ, ದೃಢ ಸಂಕಲ್ಪ ಸಮಾಜಕ್ಕೆ ಅತ್ಯಗತ್ಯ. ಸಿಖ್ ಸಂತರು ಜಾತಿವಾದದ ವಿರುದ್ಧ, ಹಿಂದು ಸಂಸ್ಕೃತಿಯ ಉಳಿವಿಗಾಗಿ ಹೋರಾಡಿದರೂ ಅವರಿಗೆ ಜಾತಿವಾದಿ ಹಿಂದುಗಳು ತುಂಬಾ ಕಿರುಕುಳ ಕೊಟ್ಟರು. ಸ್ವಯಂ ರಕ್ಷಣೆಗಾಗಿ ಗುರುಗೋವಿಂದ ಸಿಂಗರು ಖಾಲ್ಸಾ ಕಟ್ಟಿದರು. ಆಗ ಟೀಕಿಸಿದರು ಹಿಂದುವಾದಿಗಳು. ಖಾಲ್ಸಾದ 300ನೆಯ ವರ್ಷಾಚರಣೆ ಸಮಯದಲ್ಲಿ ಪ್ರಧಾನ ಮಂತ್ರಿ ವಾಜಪೇಯಿಯವರು 100 ಕೋಟಿ ರೂಪಾಯಿ ಬಿಡುಗಡೆ ಮಾಡಿದರು, ಭಾಷಣದಲ್ಲಿ ಹೇಳಿದರು "ಸಿಖ್ ಧರ್ಮ ಶೌರ್ಯ ಸಾಹಸ ಮೆರೆಯದಿದ್ದರೆ ಪಂಜಾಬ್ ಮತ್ತು ಜಮ್ಮುಗಳು ಪಾಕಿಸ್ಥಾನದಲ್ಲಿರುತ್ತಿದ್ದವು."

ಕೆಲವರು ಬಸವ ಭಕ್ತರ ಈ ಪ್ರಯತ್ನವನ್ನು ಟೀಕಿಸಿ, "ಲಿಂಗಾಯತರು ಜನಗಣತಿಯಲ್ಲಿ ಪ್ರತ್ಯೇಕವಾಗಿ ದಾಖಲೆ ಮಾಡಬೇಕೆಂಬ ಹೋರಾಟ ಶುರುಮಾಡಿದರು. ಇದು ಅನ್ಯಜಾತಿಗಳವರಿಗೂ ಪ್ರೇರಣೆ ನೀಡಿತು. ಎಲ್ಲರೂ ತಮ್ಮ ತಮ್ಮ ಜಾತಿಗಳನ್ನೇ ದಾಖಲಿಸುತ್ತಾ ಹೋದರೆ, ತಮ್ಮದೂ ಒಂದು ಧರ್ಮ ಎಂದು ವಾದಿಸಿದರೆ ಆಗ ಏನು ಗತಿ ?" ಎಂದು ಹೇಳುತ್ತಾರೆ. ಶ್ರೀ ಚಿದಾನಂದ ಮೂರ್ತಿಯವರೂ ಈ ಟೀಕೆ ಮಾಡಿದ್ದಾರೆ.

1. ಭಾರತ ದೇಶದಲ್ಲಿ ನಡೆಯುವುದು ಜಾತಿವಾರು ಜನಗಣತಿಯಲ್ಲ, ಧರ್ಮವಾರು. ಲಿಂಗಾಯತರಿಗೆ ತಮ್ಮದು ಒಂದು ಪರಿಪೂರ್ಣ ಧರ್ಮ ಎಂಬ ವಿಶ್ವಾಸವಿದೆ, ಅದನ್ನು ಸಾಧಿಸಿ, ವಾದಿಸಿ ತೋರಬಲ್ಲೆವು ಎಂಬ ಧೈರ್ಯವಿದೆ. ಅದೇ ಧೈರ್ಯ, ಆಧಾರ ಅನ್ಯ ಜಾತಿಗಳಿಗೂ ಇದ್ದರೆ ಅವರದೂ ಒಂದು ಧರ್ಮವೆಂದು ಪ್ರತಿಪಾದಿಸಲು ಬೇಡ ಎನ್ನುವವರಾರು ?

2. ಭಾರತದಲ್ಲಿ ಜಾತಿವಾರು ಜನಗಣತಿಗೆ ಬ್ರಿಟಿಷರು ಯತ್ನಿಸಿದರು. ಆದರೆ ಇಲ್ಲಿ 4000ಜಾತಿ, ಅವನ್ನು ಮೀರಿಸುವಷ್ಟು ಉಪಜಾತಿ ಇದ್ದುದರಿಂದ ಅಧಿಕಾರಿಗಳು ದಿಗ್ಭ್ರಾಂತರಾಗಿ ಅದನ್ನು ಕೈಬಿಟ್ಟರು. ಭಾರತ ಸರಕಾರಕ್ಕೆ ಆ ಸಾಮರ್ಥ್ಯವಿದ್ದರೆ ಜಾತಿವಾರು ಜನಗಣತಿಯನ್ನೇ ಮಾಡಲಿ. ಅದಕ್ಕೂ ನಮ್ಮದು ತಕರಾರು ಇಲ್ಲ.

3. ಯಾವುದನ್ನೇ ಆಗಲಿ ಒಂದು ಧರ್ಮ ಎನ್ನಬೇಕಾದರೆ ಅದಕ್ಕೆ ಸಿದ್ಧಾಂತ, ಸಾಧನೆ, ಪ್ರತ್ಯೇಕ ಸಂಸ್ಕಾರ, ಸಮಾಜಶಾಸ್ತ್ರ, ದರ್ಶನಶಾಸ್ತ್ರ ಎಲ್ಲ ಇರಬೇಕು. ಇದೆಲ್ಲ ಇಲ್ಲದೆ ಧರ್ಮ- Religion ಎಂದು ಸಿದ್ಧಮಾಡಲು ಆಗದು.

ಮತ್ತೆ ಕೆಲವರು ನಮ್ಮ ಈ ಪ್ರಯತ್ನ ಸಂಕುಚಿತ, ಜಾತಿವಾದ ಎಂದು ಮಾತನಾಡುತ್ತ ಭ್ರಮೆ ಹುಟ್ಟಿಸುವರು. ತಮಗೆ ಅಂಥ ಒಂದು ಧರ್ಮದ ಆಸರೆಯಿಲ್ಲ. ತಾವೂ ಪಡೆದುಕೊಳ್ಳಬೇಕು ಎಂಬ ಪ್ರಯತ್ನ ಮಾಡದೆ ಧರ್ಮವಂತರನ್ನು ಧರ್ಮವಿರಹಿತರನ್ನಾಗಿ ಮಾಡುವ ತಂತ್ರ ಇವರದು. ಮೂಗು ಹರುಕನೊಬ್ಬ ತನ್ನ ಲೋಪ ಮುಚ್ಚಿಕೊಳ್ಳಲು ಇನ್ನಿತರರ ಮೂಗು ಕೊಯ್ದು ಕೂರಿಸಿದಂತೆ. ತಿರುಪತಿಗೆ

ಹೋಗಿ ತಲೆ ಬೋಳಿಸಿಕೊಂಡವನು ಇನ್ನಿತರರು ತಲೆ ಬೋಳಿಸಿಕೊಳ್ಳಲು ಪ್ರೇರಣೆ ನೀಡುವಂತೆ. ವಚನ ಸಾಹಿತ್ಯ *ಎಂಬ* ಜಾಗತಿಕ ಸಾಹಿತ್ಯದ ಸಂಪತ್ತು ಹೊಂದಿರುವ ನಾವು ಪಡೆದುಕೊಂಡು, ಇನ್ನಿತರರಿಗೂ ಹಂಚೋಣ. ಬಗೆ ಬಗೆಯ ಭ್ರಮೆ ಹುಟ್ಟಿಸುವವರ ಮಾತಿಗೆ ಮರುಳಾಗುವುದು ಬೇಡ.

ಸಿಸೇರಿಯನ್

ತಾಯಿ ಗರ್ಭವತಿ ಇರುತ್ತಾಳೆ. ಪ್ರಕೃತಿ ನೇಮದಂತೆ ಮಗು ವಿಶಿಷ್ಟ ಸಮಯದವರೆಗೆ ತಾಯಿಯ ಗರ್ಭದಲ್ಲಿ ಇರುತ್ತದೆ. ಅವಧಿ ಮೀರಿದರೂ ಮಗು ಸಹಜವಾಗಿ ಹೆರಿಗೆಯಾಗದಿದ್ದರೆ ತಾಯಿಗೂ ಅಪಾಯ, ಮಗುವಿಗೂ ಅಪಾಯ. ಆಗ ವೈದ್ಯರು ಸಿಸೇರಿಯನ್ ಮಾಡಿ ಮಗುವನ್ನು ತೆಗೆಯುತ್ತಾರೆ. ಅದೇ ರೀತಿ ಹಿಂದು ಸಮಾಜದ ಗರ್ಭದಲ್ಲಿ ಇರುವ ಲಿಂಗಾಯತ ಧರ್ಮ ಈ ಹೊತ್ತಿಗಾಗಲೇ ಹೊರಬರಬೇಕಿತ್ತು. ಅವಧಿ ಮೀರಿರುವುದರಿಂದಲೇ ಹೆರಿಗೆಯ ಬೇನೆ ಶುರುವಾಗಿದೆ. ವರ್ಣಾಶ್ರಮ ಪಾಲಕ, ಬಹುದೇವತೋಪಾಸಕ ವೀರಶೈವವಾದಿ, ಹಿಂದೂ ವಾದಿ ಸ್ವಾಮಿಗಳು ಒಳಗೇ ಇರಲಿ ಎನ್ನುತ್ತಾರೆ. ಜಾತ್ಯತೀತ ದೃಷ್ಟಿಕೋನದ ಸಮತಾವಾದಿಗಳೂ, ಏಕದೇವೋಪಾಸಕರೂ ಆದ ಶರಣರು ಬೇಗನೇ ಹೊರಬರಲಿ ಎನ್ನುತ್ತಾರೆ. ಈ ದ್ವಂದ್ವ ನಿಲುವಿನಿಂದ ವಿಪರೀತ ಗೊಂದಲವಾಗುತ್ತಿದೆ. ಸಿಸೇರಿಯನ್ ಮಾಡುವಾಗ ತಾಯಿ-ಮಗು ಉಭಯತರಿಗೂ ನೋವು ಸಹಜ. ಆದರೆ ನಂತರ ಉಭಯತರೂ ಸುಖವಾಗಿರುತ್ತಾರೆ. ಜಗತ್ತಿನ ಪ್ರಾಜ್ಞ ಜನರು, ವಿಚಾರಶೀಲ ಭಾರತೀಯರಾದರೂ ಮಸಿ ಬಟ್ಟೆಯಲ್ಲಿ ಕಟ್ಟಿದ ಮಾಣಿಕ್ಯದಂತೆ ಇರುವ ಲಿಂಗಾಯತ ಧರ್ಮವನ್ನು ಅರಿತುಕೊಳ್ಳಲು, ಅಧ್ಯಯನಿಸಲು ಆಗ ಯತ್ನಿಸುತ್ತಾರೆ.

-ಮಾತಾಜಿ

ಈ ಮನುಸ್ಮೃತಿ ಇರಬೇಕೆ ?

ಮನು ಸ್ಮೃತಿ ಸಮಾಜಕ್ಕೆ ಅತ್ಯಂತ ಅಪಾಯಕಾರಿ' ಎಂದು ಗಿರಿಜನರ ಬದುಕಿಗೆ ಶ್ರಮಿಸುತ್ತಾ ಪ್ರಶಸ್ತಿ ಪುರಸ್ಕೃತರಾದ ಡಾ. ಹೆಚ್. ಸುದರ್ಶನ್ ಇತ್ತೀಚೆಗೆ ಮೈಸೂರಿನಲ್ಲಿ ಹೇಳಿದ್ದಾರೆ. "ಯಾರಾದರೂ ಮನುಸ್ಮೃತಿಯನ್ನು ಸುಡಲು ಮುಂದಾದರೆ ನಾನು ಅವರೊಂದಿಗೆ ಸೇರಿಕೊಳ್ಳುತ್ತೇನೆ. ಇದಕ್ಕೆ ಯಾರು ಅಡ್ಡಿ ಬಂದರೂ ನಾನು ಹೆದರುವುದಿಲ್ಲ" ಎಂದಿದ್ದಾರೆ. ಈ ಸಮಾಜ ವಿರೋಧಿ ಮನುಸ್ಮೃತಿಯನ್ನು ಡಾ. ಬಾಬಾಸಾಹೇಬ್ ಅಂಬೇಡಕರ್ ಬಹಳ ಹಿಂದೆಯೇ ಸುಟ್ಟು ಹಾಕಿದ್ದಾರೆ. ಹಿಂದುತ್ವದ ಹೆಸರಿನಲ್ಲಿ ಮನುವಾದಿಗಳು ಹುಟ್ಟು ಹಾಕುತ್ತಿರುವ ಗೊಂದಲದ ಈ ಸಂದರ್ಭದಲ್ಲಿ ಈ ಮನುಸ್ಮೃತಿಯ ಅಗತ್ಯವಿದೆಯೆ ಅಥವಾ ಮತ್ತೊಮ್ಮೆ ಅದನ್ನು ಸುಟ್ಟು ಹಾಕಬೇಕೆ ಎಂಬುದು ಈಗ ಪ್ರಮುಖವಾಗಿದೆ.

ಮನುಸ್ಮೃತಿ ಏನು ಹೇಳುತ್ತದೆ ? ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವರ್ಣ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತದೆ.

'ನೈಸರ್ಗಿಕ ಅಭಿರುಚಿಗೆ ಸರಿಯಾಗಿ ಬ್ರಾಹ್ಮಣನಿಗೆ ಮಂಗಲಾರ್ಥದ, ಕ್ಷತ್ರಿಯನಿಗೆ ಬಲಾಢ್ಯದ, ವೈಶ್ಯನಿಗೆ ಧನಾರ್ಥದ ಹೆಸರನ್ನು ಕೊಡಬಹುದು. ಉಳಿದವರಿಗೆ ಯಾವುದೂ ಆಗಬಹುದು' 2-32.

'ಬ್ರಾಹ್ಮಣನು ಹತ್ತು ವಯಸ್ಸಿನವನಾದರೂ, ನೂರು ವರ್ಷ ವಯಸ್ಸಿನ ಭೂಮಿ ಪತಿಗೆ ಪಿತೃ ಸಮಾನನು. ಇದು ಜಾತಿ ವ್ಯವಸ್ಥೆಯು, ಅವರಿಬ್ಬರಲ್ಲಿ ಬ್ರಾಹ್ಮಣನೇ ತಂದೆ' 2-135.

ಶೂದ್ರನಾದರೋ ತೊಂಬತ್ತರ ಮೇಲಿನ ವಯಸ್ಸಿನವನು ಮಾನ್ಯನು. 2-137

ವೇದವು ವರ್ಣಬೋಧೆಗಾಗಿ ಪ್ರಕಟವಾಗಿದೆ. ಅದು ಅಧರ್ಮವನ್ನು ಹೇಳುವುದಿಲ್ಲ. ಆದುದರಿಂದ ವೈದಿಕ ಹಿಂಸೆಯಲ್ಲಿ ಸಂಶಯ ಬೇಡ. 5-44

ಹುಡುಗಿ, ಯುವತಿ, ಮುದುಕಿ ಅಥವಾ ಹೆಂಗಸು ಮನೆಯಲ್ಲಿ ತನ್ನ ಯಜಮಾನನನ್ನು ಕೇಳದೆ ಸ್ವತಂತ್ರವಾಗಿ ಯಾವ ಕೆಲಸವನ್ನೂ ಮಾಡಕೂಡದು. ಹೆಂಗಸು ಬಾಲ್ಯದಲ್ಲಿ ತಂದೆಯ, ಯೌವನದಲ್ಲಿ ಗಂಡನ, ಅವನಿಲ್ಲದಿದ್ದರೆ ಮುಪ್ಪಿನಲ್ಲಿ ಮಕ್ಕಳ ಆಶ್ರಯದಲ್ಲಿ ಬಾಳಬಹುದು. ಸ್ವತಂತ್ರಳಾಗುವ ಅವಶ್ಯವಿಲ್ಲ. 5-147-48

ದಾನದಿಂದ ಸ್ತ್ರೀಯು ಪತಿಯ ಸೊತ್ತಾಗುವಳು. 5-152

ಸೇವಕನಿಗೆ ಸ್ವಾಮಿಸೇವೆ, ಹೆಂಡತಿಗೆ ಗಂಡನ ಸೇವೆಯಲ್ಲದೆ, ಪೂಜೆ ಹೋಮ, ಯಾಗ, ಉಪವಾಸ, ಜಪ ಒಂದೂ ಬೇಡ. 5-155.

ಶೂದ್ರನು ಧರ್ಮಪತಿಯಾದರೆ ರಾಷ್ಟ್ರವು ಕೆಸರಿನಲ್ಲಿಯ ಗೋವಿನಂತೆ ಕುಂಟುತ್ತದೆ. 8-21.

ಬಹುಮಂದಿ ಹೆಂಗಸರು ಒಳ್ಳೆಯವರಾದರೂ ಅವರು ಹೇಳಿದುದು ಅವರ ಸ್ವಭಾವ ಚಾಂಚಲ್ಯದಿಂದ ವಿಶ್ವಾಸಾರ್ಹವಲ್ಲ. 8-77

ಸುಳ್ಳು ಸಾಕ್ಷಿ ಹೇಳಿದುದು ತಿಳಿದು ಬಂದರೆ ಅವರನ್ನು ಊರಿನಿಂದ ಓಡಿಸಿ ಬಿಡಬೇಕು. ಉತ್ತಮರಿಗೆ ದಂಡನೆ ಬೇಡ, ಉತ್ತಮನಿಗೆ ದೇಹದಂಡನೆ ಬೇಡ. 8-123-24.

ಶೂದ್ರನು ಶ್ರೇಷ್ಠನನ್ನು ತನ್ನ ಯಾವ ಅವಯವದಿಂದ ಹಿಂಸಿಸುತ್ತಾನೋ ಅವನ ಅದೇ ಅಂಗವನ್ನು ಕತ್ತರಿಸುವುದು ಮನುಸಮ್ಮತ ದಂಡನೆಯು. 8-279.

ಎದುರಾಗಿ ಉಗುಳಿದರೆ ತುಟಿ ಕೊಯ್ಯುವುದು. ಮೂತ್ರ ಬಿಟ್ಟರೆ ಮೂತ್ರಾಂಗ ಕುಯ್ಯುವುದು, ಅಪಾನವಾಯು (ಹೂಸು) ಬಿಟ್ಟರೆ ಗುದ ಕೆತ್ತುವುದು. 8-282.

ತಲೆಕೂದಲು ಹಿಡಿದೆಳೆದರೆ ಕೈ ಕಡಿಯಬೇಕು. 8-287.

ಶೂದ್ರನು, ರಕ್ಷಣೆಗೊಳಪಟ್ಟ ಅಥವಾ ಅನಾಥ ಬ್ರಾಹ್ಮಣ ಸ್ತ್ರೀಯನ್ನು ಪ್ರೀತಿಸಿದರೆ ಅಂಗ ಹೀನತೆಯ ದಂಡಕ್ಕೆ ಅರ್ಹನು. 8-374.

ವೈಶ್ಯನು ಬ್ರಾಹ್ಮಣ ಸ್ತ್ರೀಯನ್ನು ದೂಷಿಸಿದರೆ ಒಂದು ವರ್ಷ ಬಂಧನದಲ್ಲಿಟ್ಟು ಬಳಿಕ ಅವನ ಸೊತ್ತನ್ನು ರಾಜನು ವಶಪಡಿಸಬೇಕು. ಕ್ಷತ್ರಿಯನು ಬ್ರಾಹ್ಮಣಿಯನ್ನು ದೂಷಿಸಿದರೆ ಅವನ ತಲೆಯನ್ನು ಕತ್ತೆ ಮೂತ್ರದಿಂದ ನೆನೆಸಿ ಬೋಳಿಸಬೇಕು. 8-375.

ರಕ್ಷಿತ ಬ್ರಾಹ್ಮಣಿಯು ನಿರಾಕರಿಸುವಾಗ ಬಲಾತ್ಕರಿಸಿ ಬ್ರಾಹ್ಮಣನು ಸಂಭೋಗಿಸಿದರೆ ಸಾವಿರ ಪಣ ದಂಡವು. 8-378.

ಬ್ರಾಹ್ಮಣನನ್ನು ತಲೆ ಬೋಳಿಸಿ ಬಿಡುವುದು ಲಜ್ಜಾಕರವಾಗಿ ಮರಣ ದಂಡನೆಗೆ ಸಮಾನವು. ಇತರರಿಗೆ ಮರಣ ದಂಡನೆಯು. 8-379.

ಯಾವ ತಪ್ಪಿಗೂ ಬ್ರಾಹ್ಮಣನಿಗೆ ಮರಣ ದಂಡನೆ ಇಲ್ಲ. ಅವನನ್ನು ಧನಸಹಿತವಾಗಿ ದೇಹವನ್ನು ಪೀಡಿಸದೆ ಓಡಿಸಿಬಿಡುವುದು ಪರಮಾವಧಿ ದಂಡವು. 8-380.

ಸ್ತ್ರೀಯನ್ನು ಬಾಲ್ಯದಲ್ಲಿ ತಂದೆ, ಯೌವನದಲ್ಲಿ ಗಂಡ, ಮುಪ್ಪಿನಲ್ಲಿ ಮಕ್ಕಳು ರಕ್ಷಿಸುತ್ತಾರೆ. ಆದುದರಿಂದ ಸ್ತ್ರೀಯು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ. 9-3.

ಬ್ರಾಹ್ಮಣನಿಗೆ ಕ್ರಮವಾಗಿ ನಾಲ್ಕು ಜಾತಿಯ ನಾಲ್ಕು ಹೆಂಡಿರು ಇರಬಹುದು. 9-149.

ಬ್ರಾಹ್ಮಣ ಶಾಪದಿಂದ ಬೆಂಕಿಯು ಸರ್ವದಾಹಿಯಾಯಿತು. ಸಮುದ್ರವು ಉಪ್ಪಾಗಿ ಕುಡಿಯದಂತಾಯಿತು. 9-314.

ಬ್ರಾಹ್ಮಣನು ಅವಿದ್ಯಾವಂತನಾದರೂ ಪೂಜ್ಯನು. 9-317.

ಅಗ್ನಿಯು ಶವವನ್ನು ದಹಿಸುವಂತೆ ಬ್ರಾಹ್ಮಣನು ಕಲಿಕರ್ಮ ಮಾಡಿದರೂ ಅಗ್ನಿಯಂತೆ ಪೂಜ್ಯನಾಗಿ ದೇವನಾಗುವನು. 9-319.

ಜಾತಿ ತಾರತಮ್ಯ ಸತ್ಯ. 10-2. ನಾಲ್ಕು ವರ್ಣಗಳಲ್ಲಿ ಬ್ರಾಹ್ಮಣನು ಪ್ರಭುವು. 10-3. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಎಂದು ಮೂವರು ಉಪನಯನ ಉಳ್ಳವರು. ಉಳಿದವರು ಒಂದೇ ಜಾತಿ. ಇದು ಶಾಸ್ತ್ರ ಸಂಪ್ರದಾಯವು. 10-4.

ಬ್ರಾಹ್ಮಣನು ಹುಟ್ಟನಿಂದಲೇ ದೇವರಿಗೂ ದೇವನು. 11-84.

ಈ ಲೋಕದಲ್ಲಿ ಪರಲೋಕದಲ್ಲಿ ಶೂದ್ರನಿಗೆ ಬ್ರಾಹ್ಮಣ ಸೇವೆಯಿಂದ ಮುಕ್ತಿ ಲಭಿಸುವುದು. 10-122.

ಬ್ರಾಹ್ಮಣನು ಶೂದ್ರ ಸೇವಕನ ಜೀವನಕ್ಕೆ ಸಾಕಷ್ಟು ಕೊಡಬೇಕು. 10-124. ಉಂಡುಳಿದ ಅನ್ನ, ಹಳೆ ಬಟ್ಟೆ ಕೂಡಿದ (ಬೆರಕೆ)ಧಾನ್ಯ, ಹಳೆಯ ಹಾಸುಗೆ ಕೊಡಬೇಕು. 10-125. ಶೂದ್ರನಿಗೆ ಧರ್ಮಸಂಸ್ಕಾರಗಳಿಲ್ಲ. 10-126.

ಧನಾರ್ಜನ ಸಾಮರ್ಥ್ಯವಿದ್ದರೂ ಶೂದ್ರನು ಹಣ ಸಂಗ್ರಹಿಸಬಾರದು. ಅದು ಅವನಿಗೆ ಬ್ರಾಹ್ಮಣ ಪೀಡೆಗೆ ಪ್ರೇರಣೆಯಾಗುವುದು. 10-129.

ಬ್ರಾಹ್ಮಣನಿಗೆ ಆತ್ಮಜ್ಞಾನ, ಕ್ಷತ್ರಿಯನಿಗೆ ರಕ್ಷಣೆ, ವೈಶ್ಯನಿಗೆ ಕೃಷಿ, ಶೂದ್ರನಿಗೆ ಸೇವೆಯೆ ತಪಸ್ಸು, ಬೇರೆ ಇಲ್ಲ. 11-235.

ಶೂದ್ರ ತನ್ನ ಒಡೆಯನ ದಾಸ್ಯದಿಂದ ಬಿಡುಗಡೆ ಪಡೆದರೂ ಅವನಿಗೆ ಬಿಡುಗಡೆ ಇಲ್ಲ. ಏಕೆಂದರೆ ದಾಸ್ಯ ಅವನಿಗೆ ಸ್ವಭಾವತಃ ಬಂದಿದೆ. 8-414.

ಬ್ರಾಹ್ಮಣನು ಸಂಶಯಪಡದೆ ಶೂದ್ರನ ಹಣವನ್ನು ಕಿತ್ತುಕೊಳ್ಳಬೇಕು. ಏಕೆಂದರೆ ಶೂದ್ರನಿಗೆ ಸ್ವಂತ ಸಂಪತ್ತೆಂಬುದೇ ಇಲ್ಲ. ಅವನ ಐಶ್ವರ್ಯವೆಲ್ಲವೂ ಬ್ರಾಹ್ಮಣನಿಗೆ ಸೇರಿದ್ದು. 7-417.

ಊರ ಹೊರಗೆ ಅಸ್ಪೃಶ್ಯರು ವಾಸ ಮಾಡಬೇಕು. ಒಳ್ಳೆಯ ಪಾತ್ರೆಗಳನ್ನು ಅವರು ಉಪಯೋಗಿಸಬಾರದು. ನಾಯಿಕತ್ತೆಗಳೇ ಅವರ ಸೊತ್ತು.

ಚಂಡಾಲರು ಹೆಣದ ಬಟ್ಟೆಗಳನ್ನು ಧರಿಸಬೇಕು. ಒಡೆದ ಮಡಕೆಗಳಲ್ಲಿ ಊಟ ಮಾಡಬೇಕು. ಕಬ್ಬಿಣದ ಬಳೆಗಳನ್ನು ತೊಟ್ಟುಕೊಂಡು ಸದಾ ಅಲೆಮಾರಿಗಳಾಗಿರಬೇಕು. 10-81-82.

ಮೇಲು ಜಾತಿಯವರ ಕೆಲಸ ಮಾಡಲು ಶೂದ್ರ ತಿರಸ್ಕರಿಸಿದರೆ ಅವನ ಆಸ್ತಿಪಾಸ್ತಿಯನ್ನು ರಾಜ ಮುಟ್ಟುಗೋಲು ಹಾಕಿಕೊಂಡು ದೇಶದಿಂದ ಹೊರಗಟ್ಟಬೇಕು. 10-96.

ಕೆಳ ಜಾತಿಯ ಹೆಂಗಸು ಮೇಲು ಜಾತಿಯ ಪುರುಷನ ಸಂಬಂಧದಿಂದ ಏಳು ಸಂತತಿಯನ್ನು ಪಡೆದರೆ ಅವಳು ಉಚ್ಚ ಜಾತಿಯಲ್ಲಿ ಹುಟ್ಟುತ್ತಾಳೆ. 10-14.

ಹೀಗೆ ಮನು ಅತ್ಯಂತ ನಯನಾಜೂಕಿನಿಂದ, ಚತುರತೆಯಿಂದ ಪಾಪವನ್ನೇ ಪುಣ್ಯವನ್ನಾಗಿರಿಸಿದ್ದಾನೆ. ಜಾತಿ ಬೆಂಬಲಿತ, ಕೆಳವರ್ಗದ ದಮನದ ಈ ಕೃತಿ ಬೆಂಕಿಗೆ ಆಹುತಿಯಾಗಲು ಯೋಗ್ಯವಾಗಿಲ್ಲವೆ ? ಶಾಂತರಾಗಿ ಯೋಚಿಸಿ.

ಹಾಗೆ ಬ್ರಹ್ಮಸೂತ್ರದ ಅಪಶೂದ್ರಾಧಿಕರಣ

ಅದು ಹೇಳುತ್ತದೆ. ಶೂದ್ರನಿಗೆ ವೇದಾಧ್ಯಯನವೇ ಇಲ್ಲ. ಶೂದ್ರನು ಯಜ್ಞಕ್ಕೆ ತಕ್ಕವನಲ್ಲ. ಶೂದ್ರನಿಗೆ ಅಧಿಕಾರವಿಲ್ಲ. ಶೂದ್ರನ ವಿಷಯದಲ್ಲಿ ಯಾವುದೂ ಪಾಪವಲ್ಲ. ಅವನು ಸಂಸ್ಕಾರಕ್ಕೂ ತಕ್ಕವನಲ್ಲ. ಶೂದ್ರನು ವೇದವನ್ನು ಶ್ರವಣ ಮಾಡಕೂಡದೆಂದಿರುವುದು. ವೇದಾಧ್ಯಯನವನ್ನು ಮಾಡಕೂಡದೆಂದಿರುವುದು, ಅರ್ಥವನ್ನು ತಿಳಿದುಕೊಳ್ಳುವುದೂ ಅನುಷ್ಠಾನ ಮಾಡುವುದೂ ಕೂಡದೆಂದಿರುವುದು. ಇನ್ನು ಇವನು ವೇದವನ್ನು ಉಪಶ್ರವಣ ಮಾಡಿದರೆ ಕರಗಿಸಿದ ಸೀಸ, ಅರಗುಗಳಿಂದ ಕಿವಿಯನ್ನು ತುಂಬಬೇಕು. ಶೂದ್ರನೆಂಬುವನಿದಾನಲ್ಲ, ಅವನು ಕಾಲುಳ್ಳ ಸ್ಮಶಾನವು. ಆದ್ದರಿಂದ ಶೂದ್ರನ ಬಳಿಯಲ್ಲಿ ಅಧ್ಯಯನ ಮಾಡಬಾರದು. ವೇದೋಚ್ಚಾರಣೆಯನ್ನು ಮಾಡಿದರೆ ನಾಲಗೆಯನ್ನು ಕತ್ತರಿಸಬೇಕು. ಪಾಠ ಮಾಡಿ ಧರಿಸಿದ್ದರೆ ಶರೀರವನ್ನು ಕತ್ತರಿಸಿಬಿಡಬೇಕು. ಶೂದ್ರನಿಗೆ ತಿಳುವಳಿಕೆಯನ್ನು ಕೊಡಬಾರದು. ದ್ವಿಜ ಜಾತಿಯವರಿಗೆ ಅಧ್ಯಯನ, ಯಾಗ, ದಾನ ಇವು ಧರ್ಮಗಳು ಎಂದು ಸ್ಮೃತಿ ಇದೆ. (ಬ್ರಹ್ಮಸೂತ್ರ ಭಾಷ್ಯ. ಸಂಪುಟ - 1, ಪುಟ 496-507. ಆಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ)

ಇದನ್ನು ಸುಡುವುದು ಯೋಗ್ಯವಲ್ಲವೆ ? ಇದನ್ನು ಬೆಂಕಿಗೆ ಸೋಂಕಿಸಿದರೆ ಬೆಂಕಿಯೇ ಅಪವಿತ್ರವಾಗುವಷ್ಟು ಅಸಹ್ಯವಾಗಿದೆ. ಆದರೆ ಬೆಂಕಿ ಬ್ರಹ್ಮನನ್ನೂ ಸುಡಬಲ್ಲದು ಅಲ್ಲವೆ ? ಆದ್ದರಿಂದ ಬೆಂಕಿ ಈ ಅನಿಷ್ಟ ಕೃತಿಗಳನ್ನು ಸುಟ್ಟು ಮನುಕುಲಕ್ಕೆ ಬೆಳಕನ್ನು ನೀಡಲಿ.

ಈ ಕೃತಿಯನ್ನು ಏಕೆ ಸುಡಬೇಕು ?

1. ಇವು ಮನುಷ್ಯರ ನಡುವೆ ವಿಷ ಬಿತ್ತುತ್ತವೆ.
2. ಹೀಗೆ ಇವು ವಿಷಬೀಜ ಬಿತ್ತಿದ ಕಾರಣ ಇಡೀ ವಿಶ್ವದಲ್ಲಿ ಪ್ರಬಲರಾಗಿ ಪ್ರಪಂಚವನ್ನೇ ಆಳಬೇಕಾಗಿದ್ದ ಭಾರತ ಗುಲಾಮ ರಾಷ್ಟ್ರವಾಗಲು ಕಾರಣವಾಗಿವೆ.
3. ಇಂದಿಗೂ ಈ ದೇಶದಲ್ಲಿ ಜಾತಿ ಪ್ರಬಲವಾಗಿ ಬೇರೂರಲು, ನಾವು ನಮ್ಮೊಳಗೆ ಕಚ್ಚಾಡಲು ಈ ಕೃತಿಗಳ ಅಂತಃಪ್ರೇರಣೆ ಕಾರಣವಾಗಿದೆ.
4. ಈ ರೋಗ ಇಂದಿಗೂ ವೈದಿಕರ ಹಿಂದುತ್ವ ಎನ್ನುವ ಹುಸಿ ಕಲ್ಪನೆಯಿಂದ ಕಿಡಿ ಕಾರುತ್ತಿದೆ.

5. ವೈದಿಕ ಧರ್ಮ ಅಂದು ಹೇಗೆ ಮನುಷ್ಯರನ್ನು ಮನುಷ್ಯರಂತೆ ಕಾಣಲಿಲ್ಲವೋ ಅದು ಇಂದೂ ಕೂಡ ಕಾಣುವ ಸೌಜನ್ಯವನ್ನು ತೋರಿಸುತ್ತಿಲ್ಲ.

6. ಅಂದು ಹರಿಜನರನ್ನು ಪಶುಗಳಂತೆ ಮಾರಾಟ ಮಾಡಿ ಕ್ರಯ ಪತ್ರ ಮಾಡಿತು, ತಪಸ್ಸು ಮಾಡಿದ ಕಾರಣಕ್ಕಾಗಿಯೇ ಶೂದ್ರ ಶಂಬೂಕನ ಕತ್ತನ್ನು ಕತ್ತರಿಸಿತು. ಏಕಲವ್ಯನ ಬೆರಳನ್ನು ಗುರುಕಾಣಿಕೆಯ ನೆಪದಲ್ಲಿ ಬಲಿಗೊಂಡಿತು. ಈಗ ಹಿಂದುತ್ವದ ಕವಚ ತೊಟ್ಟು ಅದೇ ಕೃತ್ಯಕ್ಕೆ ಕೈ ಹಾಕುತ್ತಿದೆ.

7. ಸಂವಿಧಾನ ಪರಾಮರ್ಶೆಯ ಅಂತರಂಗದಲ್ಲಿ ಅಡಗಿರುವುದು ವೈದಿಕ ಧರ್ಮದ ಪುನರ್ ಪ್ರತಿಷ್ಠಾಪನೆಯೆ.

8. ಅಯೋಧ್ಯೆ, ಬಾಬರಿ ಮಸೀದಿಯ ವಿಷಯದಲ್ಲಿ ಪ್ರಧಾನಿಯೂ ಸೇರಿದಂತೆ ಹಿಂದುತ್ವದ ಹೆಸರಿನಲ್ಲಿ ಮಾಡುತ್ತಿರುವ ವೈದಿಕ ಧರ್ಮದ ಆತ್ಮವಂಚಕ ಕೃತ್ಯದಿಂದಾಗಿ ನಿಜವಾದ ಹಿಂದೂಧರ್ಮದ, ದೇಶದ, ಭಾರತೀಯರ ಹಾಗೂ ಮನುಕುಲದ ಆತ್ಮಗೌರವ ಹರಾಜಾಗುತ್ತಿದೆ.

9. ಹಿಂದೂ ಎಂದು ಕಿರುಚಿದರೆ ಆಗುವುದಿಲ್ಲ. ಅದಕ್ಕೆ ಹೃದಯ ತೆರೆಯಬೇಕು. ಆತ್ಮವಂಚನೆಯ ಕಹಿಯನ್ನು ಕಕ್ಕಬೇಕು. ಹಿಂದು ಒಂದಾಗುವುದು ಕೂಡ ಅನ್ಯ ಧರ್ಮಗಳ ವಿರುದ್ಧ ಅಲ್ಲ. ಅದು ವಿವೇಕಾನಂದರು ವಿಶ್ವಕ್ಕೆ ಸಾರಿದ ವೇದಾಂತದ ಸರ್ವಸಮಾನತಾ ಭಾವವನ್ನು, ಸಹೋದರತ್ವವನ್ನು ಕಾರ್ಯರೂಪಕ್ಕೆ ತರಲು.

10. ದೇವಸ್ಥಾನ, ಮಂದಿರ, ಸಾಮಾಜಿಕ ಜೀವನದಲ್ಲಿ ಅಸ್ಪೃಶ್ಯತಾ ಆಚರಣೆ ಕೊನೆಗೊಳ್ಳಬೇಕು.

11. ಮಠಮಾನ್ಯಗಳ ಅಂತರಂಗದಲ್ಲಿ ಅವಿತಿಟ್ಟುಕೊಂಡಿರುವ ಅಸ್ಪೃಶ್ಯತೆ, ಜಾತಿಮತದ ಭಾವನೆಗಳು ಅಳಿಯಬೇಕು.

12. ಮಡಿಕೇರಿಯಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣ ನಡೆಯದಂತೆ ದಾಂಧಲೆ ಮಾಡಿದ ಸಂಘ ಪರಿವಾರ ಪ್ರಧಾನಿ ವಿರುದ್ಧ ಕೋಮುವಾದ ಕುರಿತು ಮಾತನಾಡಬಾರದೆಂಬ ಉದ್ಧಟತನ ಪ್ರದರ್ಶಿಸಿದ್ದು ನಾಚಿಕೆಗೇಡು. ಹಾಗೆ ಮುಸ್ಲಿಮರ ಓಟಿನ ಹಕ್ಕನ್ನು ಕಿತ್ತುಕೊಳ್ಳಬೇಕೆಂಬ ಶಿವಸೇನೆಯ ಬಾಳಠಾಕ್ರೆ ಮಾತು ಸಂವಿಧಾನ ವಿರೋಧಿಯಾದ್ದರಿಂದ ಅದನ್ನು ಗುರುತರವಾಗಿ ಪರಿಗಣಿಸಿ ಕೇಂದ್ರ ಸರ್ಕಾರ ಕಾನೂನು ಕ್ರಮ ಜರುಗಿಸಬೇಕು.

13. ಈ ಎಲ್ಲ ಹುಚ್ಚುತನಕ್ಕೆ ಪ್ರೇರಣೆ ಜಾತಿಯನ್ನು ಎತ್ತಿ ಹಿಡಿಯುವ ಈ ಕೃತಿಗಳ ಮಾನವ ವಿರೋಧಿ ತತ್ತ್ವಗಳೇ ಕಾರಣ. ಆದ್ದರಿಂದ ಈ ಕೃತಿಗಳು ಸುಡಲು ಯೋಗ್ಯವಾಗಿದೆ.

ಈ ವಿಚಾರಗಳಿಂದ ನೊಂದವರಲ್ಲಿ ಡಾ|| ಹೆಚ್. ಸುದರ್ಶನ್ ಇತ್ತೀಚಿನವರು. ಹಾಗೆ ನೊಂದವರ ಸಾಲಿನಲ್ಲಿ ರಾಜಾರಾಂ ಮೋಹನ್‌ರಾಯ್‌ರಿಂದ ಹಿಡಿದು ವಿವೇಕಾನಂದ, ಪುಲೆ, ಪೆರಿಯಾರ್, ನಾರಾಯಣಗುರು, ಡಾ|| ಅಂಬೇಡ್ಕರ್, ಕುವೆಂಪು ಮುಂತಾದ ಮಹನೀಯ ರಿದ್ದಾರೆ ಎನ್ನುವುದನ್ನು ಮರೆಯುವಂತಿಲ್ಲ.

-ಜ.ಹೊ. ನಾರಾಯಣಸ್ವಾಮಿ. ಹಾಸನ

(ಕೃಪೆ : ಜಾಣಗೆರೆ ಪತ್ರಿಕೆ, ದಿ. 17-1-2001 ಸಂಚಿಕೆ.)

ವೈಚಾರಿಕ ಪತ್ರಿಕೆಯಾದ ಕಲ್ಯಾಣ ಕಿರಣವನ್ನು ಓದಲು ಪ್ರೇರೆಪಿಸಿ,
ನಿಮ್ಮ ಬಂಧು ಮಿತ್ರರಿಗೂ ಉಡುಗೊರೆಯಾಗಿ ಕಳಿಸಿರಿ.

ಸಂಪಾದಕೀಯ - 3

ಶಿಕ್ಷಣ ಮಂತ್ರಿಗಳು ಮತ್ತು ಕುರಿ ಬಲಿ

-ಮಾತಾಜಿ

ಎಲ್ಲರೂ ವೀರರು ಎಲ್ಲರೂ ಧೀರರು
ಕಾದುವ ಮುಖದಲ್ಲಿ ಕಾಣಬಾರದು, ಓಡುವ ಮುಖದಲ್ಲಿ ಕಾಣಬಹುದು

ಇದು ಧರ್ಮಪಿತ ಬಸವಣ್ಣನವರ ಅಮರವಾಣಿ. ಯುದ್ಧ ಭೂಮಿಯಲ್ಲಿ ಅನೇಕರು ಕಾದುತ್ತಿರುತ್ತಾರೆ. ಸೈನ್ಯಕ್ಕೆ ಎಷ್ಟೋ ಜನರನ್ನು ಸೇರಿಸಿಕೊಳ್ಳಲಾಗಿರುತ್ತದೆ. ಅವರೆಲ್ಲರನ್ನೂ ವೀರಯೋಧರೆಂದೇ ತಿಳಿಯಲಾಗುತ್ತದೆ. ಆದರೆ ಯುದ್ಧದಲ್ಲಿ ಯಾವಾಗ ಬೆನ್ನು ತೋರಿಸಿ ಓಡುವರೋ ಆಗ ಆ ವ್ಯಕ್ತಿಯ ಧೀರತನ ಪ್ರಕಟವಾಗುತ್ತದೆ. ಹಾಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿ ಶ್ರೀ ವಿಶ್ವನಾಥ ಅವರ ಬಗ್ಗೆ ನಾವು ಬಹಳ ತಿಳಿದಿದ್ದೆವು. ಸಾಂಪ್ರದಾಯಿಕ ವ್ಯವಸ್ಥೆ ಎನ್ನುವುದು ಕೇವಲ ಧಾರ್ಮಿಕ ಜಗತ್ತಿನಲ್ಲಷ್ಟೇ ಇಲ್ಲ ; ಅದು ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ ಎಲ್ಲ ಕ್ಷೇತ್ರದಲ್ಲೂ ಇದೆ. ಶ್ರೀ ವಿಶ್ವನಾಥರವರು ವ್ಯವಸ್ಥೆಯನ್ನು ಅಂದರೆ ಜಡಗಟ್ಟಿದ ವಿಶಿಷ್ಟ ವ್ಯವಸ್ಥೆಯನ್ನೂ ವಿರೋಧಿಸಿ ಹೊಸತನ್ನು ತರುವ ಕ್ರಾಂತಿಕಾರಿ ಸಚಿವರು ಎಂಬ ಅಭಿಮಾನ ನಮಗಿತ್ತು. ಅವರ ಬಗ್ಗೆ ಆಗಾಗ ವಿವಾದಗಳು ಏಳುತ್ತಲೇ ಇರುತ್ತವೆ. ಪಟ್ಟಭದ್ರ ವ್ಯವಸ್ಥೆಗೆ ಒಗ್ಗಿಕೊಂಡ ಇನ್ನಿತರ ಸಹೋದ್ಯೋಗಿಗಳು, ಪಕ್ಷಗಳು ಏನಾದರೂ ಮಾಡುತ್ತಲೇ ಇರುತ್ತವೆ ಎಂದುಕೊಳ್ಳುತ್ತಿದ್ದೆವು. ಇತ್ತೀಚೆಗೆ ಶ್ರೀ ವಿಶ್ವನಾಥ ಅವರು ಇನ್ನೊಂದು ರೀತಿಯಲ್ಲಿ ಸುದ್ದಿ ಮಾಡಿದ್ದಾರೆ.

ಶಿವನ ಸಮುದ್ರದ ಬಳಿ ಇರುವ ಒಂದು ಮಾರಿಕಾಂಬಾ ದೇವಾಲಯಕ್ಕೆ ಶುಕ್ರವಾರ ದಿ. 9ರಂದು ಹೋಗಿ, ಕುರಿ ಬಲಿಯನ್ನು ಮಾಡಿಸಿ, ಪೂಜೆ, ನೈವೇಧ್ಯ ಮಾಡಿ, ತಾವೂ ಊಟ ಮಾಡಿ ಬಂದಿರುವುದಾಗಿ ಸುದ್ದಿಯಾಗಿದೆ. ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಸೋಮವಾರ ಮಾನವ ಶಾಸ್ತ್ರದ ವಿದ್ಯಾರ್ಥಿಗಳು ಏರ್ಪಡಿಸಿದ ಒಂದು ವಿಚಾರಗೋಷ್ಠಿ ನಡೆದಾಗ ಪ್ರೊ|| ಕೆ. ರಾಮದಾಸ್ ಅವರು ವಿಶ್ವನಾಥ್ ಅವರ ನಡೆಯನ್ನು ತೀವ್ರವಾಗಿ ಟೀಕಿಸಿದ್ದಾರೆ. ಅದೇ ಸಭೆಯಲ್ಲಿ ಉಭಯತರೂ ಏಕ ವಚನದಲ್ಲಿ ನೀನು ನಾಲಾಯಕ್, ನೀನು ನಾಲಾಯಕ್ ಎಂದು ಬೈಗುಳಗಳನ್ನು ವಿನಿಮಯ ಮಾಡಿಕೊಂಡಿದ್ದಾರಂತೆ.

ವಿಶ್ವನಾಥ್‌ರವರು ಧಾರವಾಡದಲ್ಲಿ ದಿ.20ರಂದು ಬೆಳಗಾವಿ ವಿಭಾಗ ಮಟ್ಟದ ಶೈಕ್ಷಣಿಕ ಸಮ್ಮೇಳನಕ್ಕೆ ಬಂದಾಗ ಈ ಕುರಿತು ಪ್ರಸ್ತಾಪಿಸಿದ್ದಾರೆ. ಅದರಲ್ಲಿನ ಕೆಲವು ಮಾತುಗಳು ಪರಿಶೀಲನಾರ್ಹ.

1. ದೇವಸ್ಥಾನಕ್ಕೆ ಹೋದುದು ನಿಜ, ಆದರೆ ಬಲಿ ಕೊಡಲಿಲ್ಲ. ನಾನೇನಾದರೂ ಹಾಗೆ ನಡೆದುಕೊಂಡಿದ್ದರೆ ಸಾಬೀತು ಮಾಡಲಿ ಎಂದಿದ್ದಾರೆ. ಇಷ್ಟೇ ಹೇಳಿಬಿಟ್ಟಿದ್ದರೆ ವಿಶ್ವನಾಥರವರು ಪ್ರಾಜ್ಞರ ಸಹಾನುಭೂತಿ ಗಳಿಸುತ್ತಿದ್ದರು. ಏಕೆಂದರೆ ನಡೆಯದಿದ್ದ ಘಟನೆಗಳನ್ನು ನಡೆದಂತೆ ಸುಳ್ಳು ಬರೆದು ವಿವಾದಗಳನ್ನು ಎಬ್ಬಿಸುವುದು ಅದೂ ಅಧಿಕಾರದಲ್ಲಿರುವವರ ಬಗ್ಗೆ ಅತ್ಯಂತ ಸಹಜವಾಗಿರುವ ಈ ಕಾಲಮಾನದಲ್ಲಿ ಜನರು ವಿಶ್ವನಾಥರವರ ಕುರಿ ನೈವೇಧ್ಯವೂ ಕಪೋಲ ಕಲ್ಪಿತ ಎಂದು ಭಾವಿಸುತ್ತಿದ್ದರು. ಆದರೆ ಅವರು ಆಡಿದ ಇನ್ನೆರಡು ಮಾತುಗಳು ಹೀಗಿವೆ. (ಪ್ರಜಾವಾಣಿ 21-2-2001)

1. ಮಾರಿಕಾಂಬಾ ದೇವಸ್ಥಾನದಲ್ಲಿ ಕುರಿ, ಕೋಳಿ ಬಲಿ ಕೊಡುವುದು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ. ಬೆಳಗಿನಿಂದ ಸಂಜೆಯವರೆಗೆ ಬಲಿ ಕೊಡುವ ಪ್ರಕ್ರಿಯೆ ನಡೆಯುತ್ತೆ. ಬಲಿ ಕೊಡಬೇಡಿ ಎಂದು ಹೇಳಿದರೆ ಆ ಜನ ನಮ್ಮನ್ನೇ ಬಲಿ ತೆಗೆದುಕೊಂಡು ಬಿಡುತ್ತಾರೆ.

2. ಪ್ರೊ|| ರಾಮದಾಸ್ ಅವರಷ್ಟು ಸತ್ಯ ಹರಿಶ್ಚಂದ್ರ ನಾನಲ್ಲ. ಆದರೆ ಪ್ರಾಮಾಣಿಕ ಬದುಕು ನಡೆಸುತ್ತಿರುವವರಲ್ಲಿ ನಾನೂ ಒಬ್ಬ. ನಮ್ಮದು ಜಾತ್ಯತೀತ ರಾಷ್ಟ್ರ. ನಾವು ನಂಬಿದ ಧರ್ಮ, ನಂಬಿದ

ಆಚರಣೆ ಉಳಿಸಿಕೊಳ್ಳಲು ಹಕ್ಕಿದೆ. ಅದನ್ನು ಪ್ರಶ್ನೆ ಮಾಡುವದಕ್ಕೆ ರಾಮದಾಸ್ ಯಾರು ? ಎಂದು ವಿಶ್ವನಾಥ ಪ್ರಶ್ನಿಸಿದರು.

ಈ ಎರಡು ಮಾತುಗಳಿಂದ ಹೊರಬರುತ್ತಿರುವ ವಾಸನೆಯಿಂದ ಶ್ರೀ ವಿಶ್ವನಾಥರವರು ಪ್ರಾಣ ಬಲಿಯ ಹರಕೆ ಪೂರೈಸಿರಬಹುದೆ ? ಎಂಬ ಸಂದೇಹ ಉಂಟಾಗುವಂತಿದೆ. ಮಾನವನು ಅನಾಗರಿಕ ಸ್ಥಿತಿಯಿಂದ ಹಂತಹಂತವಾಗಿ ಸುಧಾರಿಸುತ್ತ ಬಂದನು. ಆರಂಭದ ದಿನಗಳಲ್ಲಿ ಒಂದು ಬುಡಕಟ್ಟಿನ (tribe) ಜನರು ಇನ್ನೊಂದು ಬುಡಕಟ್ಟಿನ ಜನರನ್ನು ಹಿಡಿದು ತಂದು ಕ್ಷುದ್ರ ದೇವತೆಗಳಿಗೆ , ತಮ್ಮ ಬುಡಕಟ್ಟಿನ ದೇವತೆಗಳಿಗೆ ಬಲಿಕೊಡುತ್ತಿದ್ದರು. ಶತ್ರು ಬುಡಕಟ್ಟಿನವರನ್ನು ಬಲಿಕೊಟ್ಟು ಅವರನ್ನು ತಿಂದರೆ, ಆ ರಕ್ತ ಕುಡಿದರೆ ತಮಗೆ ಅದ್ಭುತ ಶಕ್ತಿ ಬರುವುದೆಂದು ತಿಳಿದಿದ್ದರು. ಮಾನವ ಸಮಾಜದಲ್ಲಿ ನಾಗರೀಕತೆ ಪ್ರವೇಶವಾದಂತೆ ನರಬಲಿ ನಿಂತಿತು. (ಇಂದಿಗೂ ಭಾರತ ದೇಶದಲ್ಲಿ ಕಾನೂನಿಗೆ ವಿರುದ್ಧವಾಗಿ ನಡೆಯುತ್ತಲೇ ಇದೆ ರಹಸ್ಯವಾಗಿ) ಅದರ ಬದಲು ಕೋಣ, ಕುರಿ, ಕೋಳಿಗಳೆಂಬ ಮುಗ್ಧ ಪ್ರಾಣಿಗಳ ಬಲಿ ಶುರುವಾಯಿತು. ಅನಾಗರೀಕ ಜನರು ಉಗ್ರ ರೀತಿಯಲ್ಲಿ ಇಂಥ ಪ್ರಾಣಿಗಳನ್ನು ಕಡಿದರೆ ವೈದಿಕ ತತ್ತ್ವವೇತ್ತರು ಶಾಸ್ತ್ರೀಯವಾಗಿ ಮಂತ್ರ ಹೇಳುತ್ತ ಹೋತ, ಅಶ್ವ, ಗಜಗಳನ್ನು ಯಜ್ಞದಲ್ಲಿ ಕೊಲ್ಲ ತೊಡಗಿದರು. ಶಾಸ್ತ್ರೀಯ ಸಂಪ್ರದಾಯ (classical tradition) ಮತ್ತು ಕ್ಷುಲ್ಲಕ ಸಂಪ್ರದಾಯ petty tradition) ಎಂಬ ಈ ಎರಡೂ ಮಾರ್ಗಗಳನ್ನು ವಿರೋಧಿಸಿ ಬುದ್ಧ, ಮಹಾವೀರ, ಉಪನಿಷತ್‌ಕಾರರು, ಬಸವಣ್ಣನವರು ಅಹಿಂಸೆಯನ್ನು ಎತ್ತಿ ಹಿಡಿದು ಪ್ರಾಣಿವಧೆಯನ್ನು ವೈದಿಕರೇ ಮಾಡಲಿ, ಅನಾಗರಿಕರೇ ಮಾಡಲಿ ಅದನ್ನು ವಿರೋಧಿಸಿದರು. ಬ್ರಿಟಿಷರು ಆಳಿದ್ದರಿಂದ ಕಾನೂನು ಮಾಡಿ, ಕಾನೂನು ಬಲದಿಂದ ಎಷ್ಟೋ ಕ್ರೂರ ಆಚರಣೆಗಳನ್ನು ನಿಲ್ಲಿಸಿದರು. ಸ್ವಾತಂತ್ರ್ಯ ಸಿಕ್ಕ ಮೇಲೆ ಇವರಿವರದ್ದೇ ಆಟವಾಯಿತು. ಈಗೀಗಂತೂ ಜಾತಿವಾದ ಮಿತಿ ಮೀರುತ್ತಿದ್ದು ಪ್ರಾಣಿಬಲಿ, ಮಾಂಸಾಹಾರ, ಮದ್ಯಪಾನ ಇವು ಜಾತಿಧರ್ಮ ! ಆಯಾ ಜಾತಿಗಳವರು ಮಾಡುವುದೇ ಮಹಾನ್ ಕಾರ್ಯ ಎಂಬ ರೀತಿಯಲ್ಲಿ ಕೆಲವರು ಮಾತನಾಡತೊಡಗಿದ್ದಾರೆ. ಹೀಗಾಗಿ ಅಹಿಂಸೆಯನ್ನು ಅತ್ಯಂತ ಗೌರವಯುತವಾಗಿ ಭಾವಿಸಿ ಸಸ್ಯಾಹಾರಿಗಳಾದ ಜೈನರು, ಲಿಂಗಾಯತರನ್ನು ಗೌರವಪೂರ್ವಕವಾಗಿ ನಡೆಸಿಕೊಳ್ಳುತ್ತಿದ್ದವರು ಈಗ ಕುರುಡರ ರಾಜ್ಯದಲ್ಲಿ ಕಣ್ಣಿದ್ದವನೇ ಅಪರಾಧಿ ಎಂಬಂತೆ ಸಸ್ಯಾಹಾರಿಗಳನ್ನು ವ್ಯಂಗ್ಯವಾಗಿ ವಿಡಂಬಿಸುವುದರಿಂದ ಈ ಜನರು ತಮ್ಮದೇ ತಪ್ಪೇನೋ ಎಂಬಂತೆ ನಾಚಿ ತಾವೂ ಲಜ್ಜೆಗೆಟ್ಟು ಮಾಂಸಾಹಾರಕ್ಕೆ ತೊಡುಗುತ್ತಿದ್ದಾರೆ. ಈ ಜನರ ದೃಷ್ಟಿಯಲ್ಲಿ ದೇವರ ಹೆಸರಿನಲ್ಲಿ ನಡೆಯುವ ಪ್ರಾಣಿವಧೆ ನಿಲ್ಲಿಸಿದ ಬುದ್ಧ, ಮಹಾವೀರ, ಬಸವಣ್ಣನವರು ಅಪರಾಧಿ ಸ್ಥಾನದಲ್ಲಿ ನಿಲ್ಲುವ ಕಾಲ ದೂರವೇನಿಲ್ಲ.

ದಯೆ, ಮಾನವೀಯತೆ, ನೀತಿ, ಜೀವಿಸುವ ಹಕ್ಕು ಮುಂತಾದುವಕ್ಕೆ ಒಂದು ನಿಯಮವಿದೆ. ಅನ್ಯ ಧರ್ಮಗಳು ಮಾಂಸಾಹಾರಿ ಜೀವನವನ್ನೇ ಅವಲಂಬಿಸಿವೆ. ಕ್ರೈಸ್ತ, ಸಿಖ್, ಯಹೂದಿ, ಇಸ್ಲಾಂ ಮುಂತಾದುವು ಸಸ್ಯಾಹಾರಿ ಜೀವನ ಶೈಲಿಯನ್ನೇನೂ ಹೇಳುವುದಿಲ್ಲ. ಆದರೆ ಇಸ್ಲಾಂ (ಬಕ್ರೀದ್) ಹೊರತಾಗಿ ಉಳಿದ ಧರ್ಮಗಳು ಆಹಾರ ಕ್ರಮವೆಂದು ಮಾಂಸಾಹಾರ ಮಾಡಿದರೂ ದೇವರ ಹೆಸರಿನಲ್ಲಿ ಕಡಿಯುವುದಿಲ್ಲ. ಏಕೆಂದರೆ ದೇವರ ಪಾವಿತ್ರ್ಯ ಕಾಪಾಡುವಲ್ಲಿ ಕಾಳಜಿ ವಹಿಸುತ್ತವೆ. ಜೀವಿಗಳ ಬದುಕುವ ಹಕ್ಕು ಕಾಪಾಡದಿದ್ದರೂ ದೇವರ ಕಾರುಣ್ಯ ಗುಣವನ್ನು ಪ್ರತಿಪಾದಿಸಲು ಈ ಎಚ್ಚರಿಕೆ ವಹಿಸುತ್ತವೆ. ಆದರೆ ಬೌದ್ಧ, ಜೈನ, ಲಿಂಗಾಯತ ಧರ್ಮಗಳು ಜೀವಿಗಳು ಹಕ್ಕು ಎತ್ತಿ ಹಿಡಿಯುವಲ್ಲಿ ತೀವ್ರತರವಾಗಿ ಸ್ಪಂದಿಸುತ್ತವೆ.

ಮಾರಿಕಾಂಬೆಗೆ ಪ್ರಾಣ ಬಲಿ ಕೊಡುವ ಕಥೆಯ ಹಿಂದೆ ದಲಿತರನ್ನು ಅತ್ಯಂತ ನಿಕೃಷ್ಟವಾಗಿ

ಕಾಣುವ ಮನೋಭಾವವಿದೆ. ತಾವು ಮಾಂಸಾಹಾರ ಮಾಡುವ ಬಯಕೆ ಉಳ್ಳವರಾದರೆ ಮಾಡಿಕೊಳ್ಳಲಿ. ಆದರೆ ತಮ್ಮನ್ನು ನಿಕೃಷ್ಟವಾಗಿ ಕಾಣುವ ಕಥೆ ಇದ್ದರೂ ತಾವೇ ಹೋಗಿ ಪ್ರಾಣಬಲಿ ಕೊಡುವುದು ಅತ್ಯಂತ ದುಃಖದ ಸಂಗತಿಯಲ್ಲವೇ ? 20ನೆಯ ಶತಮಾನದಲ್ಲಿ ಬದುಕುತ್ತಿರುವ, ಓರ್ವ ವಿದ್ಯಾವಂತರಾದ, ಪ್ರಗತಿಪರ ವಿಚಾರಶೀಲರು ಎನ್ನಿಸಿಕೊಳ್ಳಲು ಹಾತೊರೆಯುತ್ತ ದಿನಕ್ಕೊಂದು ಕ್ರಾಂತಿಕಾರಿ ಹೇಳಿಕೆ ಕೊಡುವ ವಿಶ್ವನಾಥ ಅವರು ಎಂದಿನಿಂದಲೇ ನಡೆದುಕೊಂಡು ಬಂದಿರಲಿ ಅಂಥ ಮೂಢ ಮತ್ತು ಮತ್ತು ಕ್ರೂರ ಆಚರಣೆಯನ್ನು ಪ್ರತಿಭಟಿಸಬಾರದಿತ್ತೆ ? ಪ್ರಾಜ್ಞರು, ವಿದ್ಯಾವಂತರೂ ಎನ್ನಿಸಿಕೊಳ್ಳುವ ವಿಶ್ವನಾಥ ಅಂಥವರು ಹೇಳಿದಾಗ ಮೂಢ ಜನರು ಜಾತಿ ಅಭಿಮಾನದಿಂದಲಾದರೂ ಪುನರಾಲೋಚನೆ ಮಾಡುವುದು. ಸರಿ, ವಿಶ್ವನಾಥ ಅವರಿಗೆ ಇನ್ನೊಬ್ಬರನ್ನು ವೈಚಾರಿಕವಾಗಿ ಮನವೊಲಿಸುವ ಸಾಮರ್ಥ್ಯ ಇಲ್ಲ. ಹೇಳಲು ಹೋದರೆ ತಮ್ಮನ್ನೇ ಬಲಿ ತೆಗೆದುಕೊಂಡು ಬಿಡುತ್ತಾರೆ ಎಂಬ ಅಂಜಿಕೆ ಇದೆ ಎಂದೇ ಭಾವಿಸೋಣ. ಆಗ ಅವರು ತಾವು ಅಂಥ ಸ್ಥಳಕ್ಕೆ ಹೋಗುವುದನ್ನು ಬಿಟ್ಟಿದ್ದರೆ ಆಗುತ್ತಿತ್ತು. ಅದೂ ಒಂದು ಬಗೆಯ ಮೌನ ಪ್ರತಿಭಟನೆ ತಾನೆ ? ಅಂಥಲ್ಲಿ ಹೋಗಿ ತಾವು ಬಲಿ ಕೊಡಿಸಿ ನೈವೇದ್ಯವನ್ನೂ ಉಂಡು ಬಂದಿದ್ದಾರೆಂದ ಮೇಲೆ ಇನ್ನು ಹೇಳುವುದೇನಿದೆ ?

ಸಾಬೀತು ಪಡಿಸಲಿ ಎಂದು ವಿಶ್ವನಾಥ ಅವರು ಸವಾಲು ಹಾಕಿರುವಾಗಲೇ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವೆ ಮೇನಕಾ ಗಾಂಧಿಯವರು ಎರಡು ಕುರಿಗಳನ್ನು ಬಲಿ ನೀಡಿರುವ ವಿಶ್ವನಾಥ ಮೇಲೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ. ಕರ್ನಾಟಕ ಪ್ರಾಣಿ ಬಲಿ ತಡೆ ಕಾಯಿದೆ 1959 ಹಾಗೂ ಪ್ರಾಣಿ ಹಿಂಸೆ ತಡೆ ಕಾಯಿದೆ 1960 ಉಲ್ಲಂಘಿಸಿ ಘೋರ ಅಪರಾಧವೆಸಗಿರುವ ಸಚಿವರ ವರ್ತನೆ ನಾಚಿಕೆ ತರುವಂಥದ್ದು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಪ್ರಾಣಿಬಲಿ ತಡೆಗಟ್ಟಬೇಕಾದ ಜಿಲ್ಲಾಧಿಕಾರಿ ಭೀಮಯ್ಯ ಅವರೂ ಬಲಿ ಸಮಯದಲ್ಲಿ ಉಪಸ್ಥಿತರಿದ್ದುದನ್ನು ತಿಳಿಸಿ ಮೇನಕಾ ಗಾಂಧಿ, ಅವರ ವಿರುದ್ಧವೂ ಕಾನೂನು ಕ್ರಮ ಜರುಗಿಸಬೇಕೆಂದು ಮುಖ್ಯಮಂತ್ರಿ ಶ್ರೀ ಎಸ್.ಎಂ. ಕೃಷ್ಣರನ್ನೂ ಕೋರಿದ್ದಾರೆ.

ಇನ್ನು ಎರಡನೆಯ ಮಾತು. ವಿಶ್ವನಾಥ ಹೋಗಿದ್ದು ನಿಜ ; ಆದರೆ ಅವರು ಹೇಳುವಂತೆ ಬಲಿ ಕೊಡಿಸಿಲ್ಲ, ಅದರ ನೈವೇದ್ಯ ತಿಂದಿಲ್ಲ ಎಂದೇ ವಿಶ್ವಾಸವಿಡೋಣ. ಇದು ಲಂಕೇಶ ಪತ್ರಿಕೆಯಂತಹ ಕ್ರೂರ ಕಲ್ಪನಾ ವಿಲಾಸದಲ್ಲೇ ತೇಲುವ ಒಂದು ಪತ್ರಿಕೆ ಅನವಶ್ಯಕವಾಗಿ ಎಬ್ಬಿಸಿದ ಹುಯಿಲು ಎಂದೇ ನಂಬೋಣ. ಆದರೆ ವಿಶ್ವನಾಥ ಅವರ ಮುಂದಿನ ಮಾತುಗಳು ವಿಮರ್ಶಾರ್ಹ.

ಪ್ರೊ॥ ರಾಮದಾಸ್ ಅವರಷ್ಟು ಸತ್ಯ ಹರಿಶ್ಚಂದ್ರ ನಾನಲ್ಲ ; ಆದರೆ ಪ್ರಾಮಾಣಿಕ ಬದುಕು ನಡೆಸುತ್ತಿರುವವರಲ್ಲಿ ನಾನೂ ಒಬ್ಬ ಎಂದು ವಿಶ್ವನಾಥ ಮಾತನಾಡಿದ್ದಾರೆ. ಇಲ್ಲಿ ರಾಮದಾಸ್ ಆಗಲಿ, ವಿಶ್ವನಾಥ ಆಗಲಿ ಪ್ರಾಮಾಣಿಕರೋ, ಅಪ್ರಾಮಾಣಿಕರೋ ಎಂಬುದು ಚರ್ಚೆಯ ವಿಷಯವಲ್ಲ. ವಿಶ್ವನಾಥರಂತಹ ಆಧುನಿಕ ಶಿಕ್ಷಣ ಪಡೆದ, ಶಿಕ್ಷಣ ಮಂತ್ರಿಗಳು ಹೋಗಿ ಪ್ರಾಣಬಲಿ ಕೊಡಿಸಬಹುದೇ ? ಪೂಜ್ಯ ಸಿದ್ಧಗಂಗಾ ಮಠಾಧೀಶರು ಏಕದೇವನಿಷ್ಠೆ ಹೊಂದಿರದೆ ಗಣಪತಿ ಪೂಜೆ ಮಾಡಬಹುದೇ ಎಂದು ಪ್ರಶ್ನೆ ಕೇಳಿದರೆ, ಅದಕ್ಕೆ ಉತ್ತರಿಸದೆ, ಸಿದ್ಧಗಂಗಾ ಪೂಜ್ಯರು ಸಾವಿರಾರು ವಿದ್ಯಾರ್ಥಿಗಳಿಗೆ ಊಟಕ್ಕೆ ಹಾಕುತ್ತಾರೆ ಎಂದು ಸಿದ್ಧಗಂಗಾ ಮಾಸಪತ್ರಿಕೆ ಸಂಪಾದಕರು ಉತ್ತರಿಸಿದ ಶೈಲಿಯಂತಿದೆ ಈ ರೀತಿ ಉತ್ತರ. ಬೆಂಗಳೂರಿನ ಆಟೊ ರಿಕ್ಷಾದವರ ಬಗ್ಗೆ ಒಂದು ಜೋಕ್ ಇದೆ. ಜಯನಗರಕ್ಕೆ ಬರುತ್ತೀಯಾ? ಎಂದರೆ ಇಲ್ಲ ಪೀಣ್ಯಾ ಕ್ಕೆ ಎಂಬಂತಿದೆ

ಪ್ರೊ॥ ರಾಮದಾಸ್ ವಿಶ್ವನಾಥರವರ ಪ್ರಾಮಾಣಿಕತೆ ಪ್ರಶ್ನಿಸಿಲ್ಲ. ವೈಚಾರಿಕತೆಯನ್ನು

ಪ್ರಶ್ನಿಸಿದ್ದಾರೆ.

ಮುಂದುವರಿದು ವಿಶ್ವನಾಥ ಹೇಳಿದ್ದಾರೆ. ನಮ್ಮದು ಜಾತ್ಯತೀತ ರಾಷ್ಟ್ರ, ನಾವು ನಂಬಿದ ಧರ್ಮ-ನಂಬಿಕೆ, ಆಚರಣೆ ಉಳಿಸಿಕೊಳ್ಳಲು ಹಕ್ಕಿದೆ ಈ ಮಾತುಗಳಿಂದ ಕುರಿ ಬಲಿಯ ವಾಸನೆ ಬಲವಾಗಿಯೇ ಬಡಿಯುತ್ತದೆ.

ಜಾತ್ಯತೀ ತರಾಷ್ಟ್ರ ಎಂಬ ಪದವನ್ನು ಹೇಗೆಂದರೆ ಹಾಗೆ ಎಳೆಯಲು ಎಲ್ಲರೂ ಪ್ರಾರಂಭಿಸಿದ್ದಾರೆ. ಜಾತಿವಾದಕ್ಕೆ ಅತೀತರಾಗುವುದು ಜಾತ್ಯತೀತತೆಯ ಮುಖ್ಯ ಪರಿಕಲ್ಪನೆ. ಜೊತೆಗೆ ಜಾತಿ ಆಚರಣೆಗಳ ವಲಯವನ್ನು ಧಾಟುವುದೂ ಬಲು ಮುಖ್ಯ. ಜಾತಿಯ ವ್ಯಾಪ್ತಿಗೆ ಮೀರಿದ್ದು ದಯೆ-ಮಾನವೀಯತೆ. ಭಾರತವು ಜಾತ್ಯತೀತ ರಾಷ್ಟ್ರ. ಪ್ರತಿಯೊಬ್ಬನ ನಂಬಿಕೆ, ಆಚರಣೆ ಉಳಿಸಿಕೊಳ್ಳಬಹುದು ಎಂಬ ಸಿದ್ಧಾಂತಕ್ಕೆ ಬದ್ಧರಾದರೆ ಆಗ...

1. ನರಬಲಿ ಕೊಟ್ಟರೆ ದೇವಿ ಒಲಿಯುತ್ತಾಳೆ ಎಂದು ನರಬಲಿ ಕೊಡುವುದು ಹೇಗೆ ಕಾನೂನು ಪ್ರಕಾರ ತಪ್ಪು ?
2. ನರಬಲಿ ಕೊಟ್ಟರೆ ನಿಧಿ ದೊರೆಯುತ್ತದೆ ಎಂಬ ಮಂತ್ರವಾದಿಯ ಆಚರಣೆ ಹೇಗೆ ತಪ್ಪು ?
3. ಗಂಡು ಮಗ ವ್ಯಾಪಾರದ ಸರಕು. ಸೊಸೆ ಹೆಚ್ಚು ಹಣ ತರಬೇಕು. ತರದಿದ್ದರೆ ಅವಳನ್ನು ಸುಟ್ಟು ಬೇರೆ ಹೆಣ್ಣನ್ನು ತಂದರೆ ತಪ್ಪಲ್ಲ ಎಂಬ ಅತ್ತೆ-ಮಾವರ ನಂಬಿಕೆ ಕಾನೂನು ಪ್ರಕಾರ ಏಕೆ ತಪ್ಪಾಗಬೇಕು ?
4. ಸ್ತ್ರೀಯು ಗಂಡನ ಅಡಿಯಾಳು. ಅವಳಿಗೆ ಸ್ವತಂತ್ರವಾಗಿ ಬದುಕುವ ಹಕ್ಕಿಲ್ಲ. ಆದ್ದರಿಂದ ಗಂಡನ ಜೊತೆಗೆ ಸುಡಿಸಿಕೊಂಡು ಮಹಾಸತಿಯಾಗಿ ಪೂಜೆಗೊಳ್ಳುವುದು ಶ್ರೇಷ್ಠ ಎಂಬ ನಂಬಿಕೆ, ಗಂಡನೊಡನೆ ವಿಧವೆಯನ್ನು ಸುಡುವ ಆಚರಣೆ ಹೇಗೆ ತಪ್ಪಾಗಲು ಸಾಧ್ಯ ?
5. ಅವಿದ್ಯಾವಂತರು . ಅನಕ್ಷರಸ್ಥರು ಆದ ದಲಿತ ಸ್ತ್ರೀಯರು ಬೆತ್ತಲೆ ಸೇವೆ ಮಾಡುವುದು, ದೇವದಾಸಿಯರಾಗುವುದು ಅವರ ಜಾತಿ ನಿಯಮ. ಅದವರ ನಂಬಕೆ. ಹಾಗಾದರೆ ಅದನ್ನೇಕೆ ತಡೆಗಟ್ಟಬೇಕು ?

ಕಾಲಚಕ್ರ ತಿರುಗುತ್ತಿದೆ. ಕುರುಡರ ರಾಜ್ಯದಲ್ಲಿ ಕಣ್ಣಿದ್ದವನು ಅಪರಾಧಿ ! ಈವರೆಗೂ ಮಹಾಪುರುಷರು ಮಾಡಿದ ಸುಧಾರಣೆಗಳೆಲ್ಲ ಶುದ್ಧ ತಪ್ಪು. ಬುದ್ಧಿ ಹೀನರಾಗಿ, ಜಾತಿವಾದಿಗಳಾಗಿ ಅವರು ಏನೇನೊ ಸುಧಾರಣೆ ತರಲೆತ್ನಿಸಿದ್ದಾರೆ. ಆದ್ದರಿಂದ ಬುದ್ಧಿವಂತರೂ, ಜಾತ್ಯತೀತರು ಆಚರಣೆಯ ಹಕ್ಕಿಗಾಗಿ ಹೋರಾಡುವ ಶ್ರೀ ವಿಶ್ವನಾಥರವರ ಚಿಂತನೆಯ ಶೈಲಿಯನ್ನು ಅನುಸರಿಸಿ ಪ್ರಾಣಬಲಿ, ಮೂಢನಂಬಿಕೆ ವಿರೋಧಿಸಿದ ಬುದ್ಧ, ಮಹಾವೀರ, ಉಪನೀಷತ್‌ಕಾರರು, ಬಸವಣ್ಣ, ಡಾ॥ ಅಂಬೇಡ್ಕರ್, ಮಹಾತ್ಮಾಗಾಂಧಿ, ವಿನೋಬಾಜಿ ಎಲ್ಲರನ್ನೂ ಅಪರಾಧಿಗಳ ಸಾಲಿನಲ್ಲಿ ನಿಲ್ಲಿಸೋಣ.

ವಚನ ಕಿರಣ

ಮಾತೃಹೃದಯಿ ಮಾತಾಜಿ, ಬಲು ಮಧುರ ವಾಗ್ಮಿ
ಅಂಧಃ ಶ್ರದ್ಧೆ ಮೂಢ ಸಂಪ್ರದಾಯ ಬೆಳೆಸುವ
ದುರುದ್ದೇಶವಾದಿಗಳ ಕಂಡಡೆ ಕಠೋರ ಹೃದಯಿ
ದೀನ ದಲಿತರ ದುಃಖಿತರನ್ನ ಕಂಡಡೆ ಹೂವಿಗಿಂತ ಮೃದು,
ಇದು ಮಾತಾಜಿಯವರಲ್ಲಡಗಿದ ವಿಶೇಷ ಗುಣ, ಲೀಲಾ ವಿಶೇಷ ಲಿಂಗದೇವ

-ಮಹಾದೇವಿ, ಧಾರವಾಡ

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ 55ನೇ ಜನ್ಮದಿನ ನಿಮಿತ್ತ

55 ತ್ರಿಪದಿಗಳ ನುಡಿ ನೈವೇದ್ಯ

ರಚನೆ - ಶಿವಕುಮಾರ ಡಾಕುಳಗೆ
(ಲಿಂಗದೇವ ಪ್ರಿಯ ಬಸವ ಸುತ)

1) ಶ್ರೀಗುರುವೆ ಮಾತಾಜಿ । ಸದ್ಗುರುವೆ ಮಾತಾಜಿ ।
ಮಹಾಜಗದ್ಗುರುವೆ ಮಾತಾಜಿ ॥ ನಿಮ್ಮಡಿಗೆ
ಅನವರತ ನಾನು ವಂದಿಪೆನು॥

2) ಶರಣೆ ಗಂಗಮ್ಮ । ಬಸಪ್ಪರ ಚಿದ್ಗರ್ಭದಿ
ಜನಿಸಿದಿರಿ ತಾವು ಚಿತ್ರದುರ್ಗದಿ ॥ ಬೆಳೆದಿರಿ
ಬಸವಣ್ಣರ ಮುದ್ದು ಮಗಳಾಗಿ ॥

3) ರತ್ನಮ್ಮ ಎಂಬ । ಜನ್ಮ ನಾಮವ ಹೊತ್ತು ।
ಗುರು ಲಿಂಗಾನಂದರ ಕರುಣೆಯ ಪಡೆದು ॥ ಪೂಜ್ಯ
ಮಾತೆ ಮಹಾದೇವಿಯಾದಿರಿ ॥

4) ಸ್ತ್ರೀಕುಲಕಾಶ್ರಯವಾಗಿ । ಸುಯಿಧಾನಿ ತಾಯಾಗಿ ।
ಅಕ್ಕಮಹಾದೇವಿ ಪೀಠ ಏರಿದಿರಿ ॥ ಜಗದ
ಪ್ರಥಮ ಸ್ತ್ರೀಜಗದ್ಗುರು ತಾವಾದಿರಿ ॥

5) ಗುರುಬಸವಣ್ಣನವರ । ಆದೇಶವಿಡಿದು।
ಲಿಂಗದೇವನ ಮಹಿಮೆ ಜಗಕ್ಕೆ ತೋರಿ । ತಾವು
ಕ್ರಾಂತಿಯೋಗಿಣಿಯೇ ಆಗಿರುವಿರಿ॥

6) ದೇವರು-ಧರ್ಮಗಳ । ನಿಜ ಅರ್ಥವನು ಅರುಹಿ ।
ಧರ್ಮಕ್ರಾಂತಿಯನ್ನೇ ಮಾಡಿದಿರಿ॥ ತಾವು
ಧೀರಯೋಗಿಣಿಯೇ ಆಗಿರುವಿರಿ ॥

7) ಬಸವತತ್ತ್ವ ವಿರೋಧಿಗಳ । ಬಾಯಿ ಮುಚ್ಚಿಸಿದಿರಿ।
ಬಸವದ್ವೇಷಿ ಮಠಾಧೀಶರಿಗೆ ॥ ಇಂದು
ಸಿಂಹ ಸ್ವಪ್ನವೇ ತಾವಾದಿರಿ ॥

8) ಗುರುಬಸವಣ್ಣನವರ । ದಿವ್ಯಾನುಗ್ರಹ ಪಡೆದು ।
ಬಸವಾತ್ಮಜೆಯೇ ತಾವಾಗಿ ॥ ಜಗಕೆಲ್ಲಾ
ಬಸವ ಧರ್ಮದ ಸುಧೆಯ ಉಣ್ಣಿಸಿದಿರಿ॥

9) ಮಹಿಳಾ ಪ್ರತಿನಿಧಿಯಾಗಿ । ಸ್ತ್ರೀಕುಲ ಕಣ್ಮಣಿಯಾಗಿ ।
ಕೋಟಿ ಜನರ ಬಾಳಿಗೆ ಬೆಳಕ ನೀಡಿ ॥ ತಾವು
ಬಾಳ ಚಿನ್ಮಯವಾಗಿ ಮಾಡಿದಿರಿ ॥

10) ತಂದೆ-ತಾಯಿಯನ್ನಗಲಿ । ತಬ್ಬಲಿ ಮಕ್ಕಳಂತೆ ।
ಲಿಂಗಾಯತರು ಅಲೆಯುತಿರುವಾಗ । ತಾವು
ಸಂಗಮದ ತವರು ಮನೆ ತೋರಿದಿರಿ॥

11) ಕೂಡಲ ಸಂಗಮದ । ಧರ್ಮಕ್ಷೇತ್ರದಲ್ಲಿ ।
ಬಸವ ಮಹಾಮನೆಯ ಕಟ್ಟಿದಿರಿ॥ ಈ ಕ್ಷೇತ್ರವನು
ನವ ಕಲ್ಯಾಣ ಮಾಡಿ ನಿಲ್ಲಿಸಿದಿರಿ॥

12) ಕರ್ನಾಟಕ, ಮಹಾರಾಷ್ಟ್ರ । ತಮಿಳುನಾಡು, ಆಂಧ್ರದಲ್ಲಿ ।
ಹರಿದು ಹಂಚಿಹೋದ ಲಿಂಗಾಯತರನ್ನು ॥ ಒಂದು-
ಗೂಡಿಸಿದಿರಿ ಶರಣ ಮೇಳದಲ್ಲಿ ॥

13) ಬಸವ ಧರ್ಮ ಪೀಠ ಸ್ಥಾಪಿಸಿ । ಗುರುಲಿಂಗಾನಂದರನ್ನು ।
ಮಹಾಜಗದ್ಗುರು ಪೀಠವನೇರಿಸಿ ॥ ತಾವು
ಬಸವ ಮಣಿಹವ ಪೂರೈಸಿದಿರಿ॥

14) ಬಲ್ಲಿದ ಬಸವನ । ತತ್ವಾಮೃತ ಸಾರಲು ।
ಜ್ಞಾನವಾಹಿನಿಯೇ ತಾವಾಗಿ ॥ ಕೋಟ್ಯಂತರ
ಶರಣರಿಗೆ ಬಸವ ದರ್ಶನ ಮಾಡಿಸಿದಿರಿ ॥

15) ಅಕ್ಕಮಹಾದೇವಿಯ । ಪ್ರತಿರೂಪ ತಾವಾಗಿ ।
ತರಂಗಿಣಿ ಉದ್ಗ್ರಂಥವ (ಕಾದಂಬರಿ) ರಚಿಸಿದಿರಿ॥ ನಮಗೆ
ಅಕ್ಕನ ಚರಿತಾಮೃತ ಉಣಿಸಿದಿರಿ ।

16) ಹೆಪ್ಪಿಟ್ಟ ಹಾಲು । ರಚಿಸಿದಿರಿ ತಾಯಿ।
ಮನಸಿನ ಒಳಪದರನ್ನೂ ಬಿಡಿಸಿ ॥ ಸಾಧಕರಿಗೆ
ಮಾರ್ಗದರ್ಶನವ ಮಾಡಿದಿರಿ॥

17) ಹರಿತ ಲೇಖನಿಯಿಂದ । ನೂರಿಪ್ಪತ್ತು ಗ್ರಂಥ ಬರೆದು ।
ಕ್ರಾಂತಿಕಾರಿ ವಿಚಾರ ಅರುಹಿದಿರಿ । ಕುಂಭಕರ್ಣ
ನಿದ್ರೆಯಲ್ಲಿದ್ದ ಲಿಂಗಾಯತರನು ಎಚ್ಚರಿಸಿದಿರಿ॥

18) ಪಂಚಾಚಾರಕ್ಕೆ । ಬಸವಾಚಾರವ ಸೇರ್ಿಸಿ ।
ಷಡಾಚಾರದ ಮರ್ಮವನರುಹಿದಿರಿ॥ ಎಮಗೆ.
ಬಸವ ರಾಜಬೀದಿಯ ತೋರಿದಿರಿ॥

19) ತ್ರಿವಿಧ ದಾಸೋಹ ತತ್ತ್ವ । ಅಳವಡಿಸಿಕೊಂಡು ತಾವು ।
ಮೃಡನಿಗೆ ಅರ್ಪಿಸಿದಿರಿ ತನು-ಮನ-ಧನವ ॥ ಲೋಕಕ್ಕೆ
ಷಡಂಗ ದಾಸೋಹದ ಘನವ ಅರುಹಿದಿರಿ॥

20) ವಿಷಯವೆಂತೆಂಬುವ । ಹಸುರ ನೆಚ್ಚಿಕೊಂಡು।
ಭವಕ್ಕೆಳಸುತ್ತಿಹ ಮನದ ಹಸುಗಳಿಗೆ ॥ ಭಕ್ತಿ
ಸುಜ್ಞಾನವನ್ನಿತ್ತು ಸಲಹಿದಿರಿ॥

21) ಸೃಷ್ಟಿಕರ್ತನ ಅರಿಯದ । ಮಂದ ಮತಿ ಜನರಿಗೆ ।
ಪರಮನ ಇರುವನು ಅರುಹಿದಿರಿ॥ ನಮಗೆ
ಪರಮ ಸುಖವನು ತೋರಿಧಿರಿ॥

22) ಹೃದಯ ಬಟ್ಟಲ ಮಾಡಿ । ಭಕ್ತಿ ರಸವನು ತುಂಬಿ ।
ಶರಣಾಗತಿ ಭಾವದಿಂದ ಎರೆದಿರಿ ॥ ಬಾಳ ತೈಲವ
ಬಸವ ಧರ್ಮ ಪ್ರಣತೆಯುರಿಗೆ ।

23) ತತ್ತ್ವಕಾಗಿ ಬದುಕಿ। ಭಾವನೆ ಹೊತ್ತಿಸಿಕೊಂಡು ।
ಬಸವ ವಚನ ಪಚನ ಮಾಡಿಕೊಂಡು॥ ನಮಗೆ
ವಚನ ಶಾಸ್ತ್ರದ ರುಚಿಯ ತೋರಿಸಿದಿರಿ ॥

24) ನಿಮ್ಮೆದುರಿಗೆ ನಿಂತಾಗ । ಮಾತು ಮೌನವಾಗುವುದು ।
ನಿಮ್ಮ ಕೃತಿಗಳ ಓದುತ್ತಿರುವಾಗ ॥ ಮೈ-ಮನ
ಇಲ್ಲವಾಗುವವು ನನ್ನ ತಾಯೆ ॥

25) ನಿಮ್ಮ ಲೇಖನಿಯಲ್ಲಿ । ದಿವ್ಯಶಕ್ತಿಯಿಹುದು ।
ಎಂಥವರನ್ನೂ ಮಂತ್ರ ಮುಗ್ಧಗೊಳಿಸುವ ॥ ಶಕ್ತಿ
ತಮ್ಮ ವಾಣಿಯಲ್ಲಿಹುದು ಮಾತೆ ॥

26) ಅರಿಯದ ಮೂಢರು । ಜರಿಯುವರು ತಮ್ಮನ್ನು
ಜರಿದು ಅನುಭವಿಸುವರು ಭವದುಃಖವ ॥ ತಾಯಿ
ಭವದೊಳಗೆ ಬಿದ್ದು ಒದ್ದಾಡುವರು॥

27) ನರರೂಪವಾದರೂ । ನರಜನ್ಮದವರಲ್ಲ ।
ಮಹಾಹರನ ಪ್ರತಿನಿಧಿಯಾಗಿ ಬಂದವರು॥ ಗುರುಮಾತೆ
ಸಚ್ಚಿದಾನಂದನ ಸತಿ ನೀವು ॥

28) ಚಿನ್ಮೂಲಾದ್ರಿಯ । ಚಿತ್ಕಳೆಯು ತಾವಾಗಿ ।
ಚಿನ್ಮಯನ ಚೇತನವೇ ತಾವಾಗಿ ॥ ಲೋಕದೊಳು
ಬೆಳಗುತ್ತ ಜ್ಯೋತಿಯ ತೆರದಿ ॥

29) ಆರೇನೇ ಅಂದರೂ । ಓರಂತಿಪ್ಪುದೇ ಸಮತೆ ।
ಎಂಬ ವಚನ ವಾಣಿಯ ನಿಜಗೊಳಿಸಿ ॥ ಜಗದೊಳಗೆ
ಸತ್ಯ ಪ್ರತಿಪಾದಿಸಿದ ವಚನ ಜ್ಯೋತಿ ॥

30) ಬಸವಂಗೆ ಶರಣಾದ । ತತ್ತ್ವನಿಷ್ಠ ಶರಣರ ।
ಬಾಳಜ್ಯೋತಿಯು ನೀವಾಗಿ ॥ ಬೆಳಗಿದಿರಿ
ಬಸವ ಧರ್ಮದ ಕೀರ್ತಿ ದೆಸೆದೆಸೆಗೂ ॥

31) ಬಸವಣ್ಣನವರ । ಅಂಚೆ ಚೀಟಿ ಮಾಡಿಸಿ ।
ಬಸವನ ಮುದ್ರೆ ಮೆರೆಸಿದಿರಿ ॥ ಶರಣ ಕವಿ
ಸರ್ವಜ್ಞನ ಭವಿಷ್ಯವಾಣಿ ನಿಜವಾಯ್ತು ॥

32) ಭಾರತದ ರಾಜಧಾನಿ । ದೆಹಲಿಯ ಕೆಂಪು ಕೋಟೆಯ।
ಬಸವ ಧ್ವಜವನ್ನು ಹಾರಿಸಿ ॥ ಗುರುಲಿಂಗಾನಂದರ
ಸತ್‌ಸಂಕಲ್ಪವ ಪೂರೈಸಿದಿರಿ॥

33) ಭಾರೀ ಅಬ್ಬರದಿಂದ । ದುರ್ವ್ಯಸನ-ದುರಾಚಾರ ।
ಮೋಸ -ವಂಚನೆಯ ತೊಡೆದ್ಹಾಕಿ । ಮೆರೆದಿರಿ
ಬಸವಣ್ಣನ ವೀರ ಮಗಳಾಗಿ ।

34) ಧರ್ಮದ ಹೆಸರಿನಲ್ಲಿ । ಕುಹಕಿ ಮಠಾಧೀಶರು ।
ನಡೆಸುತ್ತಿದ್ದ ಮೋಸ-ಶೋಷಣೆಯ ॥ ಕಂಡು
ಮಮ್ಮಲ ಮರುಗಿದ ಕರುಣಾಮಯಿ ।

35) ಲಿಂಗದೇವನ ನಂಬಿ । ಬಸವಂಗೆ ಶರಣಾಗಿ।
ಕರುಣ ಪ್ರಸಾದ ಸ್ವೀಕರಿಸುವ ॥ ಮಾರ್ಗತೋರಿ
ದುಷ್ಟ ಮಠಾಧೀಶರ ಸೊಕ್ಕು ಮುರಿದಿರಿ ।

36) ಲಿಂಗಾಯತ ಧರ್ಮ, ಸ್ವತಂತ್ರ-ಪರಿಪೂರ್ಣ ಧರ್ಮ
ಲಿಂಗಾಯತರು ವೀರಶೈವರಲ್ಲ॥ ಎಂಬ ಸತ್ಯವನು
ದಿಟ್ಟತನದಿಂದ ತಾವು ಸಾರಿದಿರಿ॥

37) ವೀರ ವೀರಾಗಿಣಿ । ಅಕ್ಕಮಹಾದೇವಿ ।
ಒನಕೆ ಓಬವ್ವ, ಕಿತ್ತೂರು ಚೆನ್ನಮ್ಮ ॥ ಈ ಮೂವರ
ಶಕ್ತಿಯ ಸಂಗಮವು ।

38) ಮನುಕುಲದ ಸ್ವಾತಂತ್ರ್ಯಕೆ । ದುಡಿಯಲು ಕಂಕಣ ಕಟ್ಟಿ ।
ಲಿಂಗಾಯತ ಧರ್ಮವ ಉಳಿಸಿದಿರಿ ॥ ಕೋಟಿ ಜನರ
ಮುಕ್ತಿಗಾಗಿ ಆದಿ ಶಕ್ತಿ ನೀವಾದಿರಿ ॥

39) ಪೂಜ್ಯ ಜಗದ್ಗುರು ಮಾತೆ । ಗಂಗಾದೇವಿಯವರಂಥ ।
ಅಪೂರ್ವ ವಾಗ್ಮಿಗಳನ್ನು ಅನುಗ್ರಹಿಸಿ ॥ ವಿಶ್ವದ
ದ್ವಿತೀಯ ಸ್ತ್ರೀಜಗದ್ಗುರು ಮಾಡಿದಿರಿ॥

40) ಗಂಗಾಮಾತೆಯವರು । ಬಸವ ತತ್ತ್ವವನ್ನು ।
ಹರಿಸುತ್ತಿಹರು ವಿವಿಧ ಪ್ರಾಂತಗಳಲ್ಲಿ ॥ ಗಂಗೆಯಾಗಿ
ಶರಣ ಮೇಳದ ಕಂಪನು ಬೀರುತ್ತಿಹರು

41) ಜಂಗಮ ಜಾತಿಯಲ್ಲ । ಎಂಬ ಸತ್ಯವ ಸಾರಿ ।
ಜಾತಿಯಿಂ ಯಾರೂ ಮೇಲಲ್ಲ ॥ ಕೀಳಲ್ಲ
ಮಾನ್ಯತೆಯು ಜ್ಞಾನದಿಂ ಎಂದರುಹಿದಿರಿ॥

42) ಜ್ಯೋತಿ ಮುಟ್ಟಿದ ಬತ್ತಿ । ಜ್ಯೋತಿಯಾಗುವ ತೆರದಿ ।
ಗುರು ಮುಟ್ಟಿ ಗುರು ಮಹಿಮೆ ಅರಿದೇವು ॥ ಮಾತಾಜಿ
ದುಡಿವೇವು ಗುರು ಋಣ ತೀರಿಸಲು ॥

43) ನಿಜವನು ಅರಿಯದೆ। ದೆಸೆಗೆಟ್ಟ ದೇವತಾ ।
ಪಶುಗಳಿಗೆ ಪಶುಪತಿಯಾದನು ॥ ಬಸವಯ್ಯ
ಲಿಂಗತತ್ತ್ವದ ಮಾರ್ಗ ತೋರಿದನು ॥

44) ಧರ್ಮವನರಿಯದ । ಮತಿಹೀನ ಮಠಾಧೀಶರ।
ಅಜ್ಞಾನವ ಎತ್ತಿ ತೋರಿದಿರಿ ॥ ಸ್ವಾಮಿಗಳಿಗೆ
ಬಸವ ಧರ್ಮದ ಅರ್ಥವ ತಿಳಿಸಿದಿರಿ ॥

45) ನೂರಾರು ಸಾಧಕರಿಗೆ । ಪ್ರವಚನ ತರಬೇತಿ ನೀಡಿ ।
ಕಳಿಸಿದಿರಿ ಹಿಂದುಸ್ಥಾನದ ದೆಸೆದೆಸೆಗೂ ॥ ಪ್ರಚಾರಕ್ಕೆ
ಪ್ರವಚನಕಾರರ ನಿರ್ಮಾತೃ ತಾವಾದಿರಿ॥

46) ಅಜ್ಞಾನದ ಕತ್ತಲೆಯೊಳು । ಬಿದ್ದು ಒದ್ದಾಡುತ್ತಿದ್ದ ।
ಮುಗ್ಧ ಜನರಿಗೆ ಜ್ಞಾನದ ಬೆಳಕನು ತೋರಿ(ದ) ॥ ಮಹಾ
ದಿವ್ಯ ಜ್ಞಾನಿಗಳು ತಾವು ॥

47) ಬಸವೇಶ್ವರ ದಿವ್ಯ ಜ್ಞಾನ । ವಿದ್ಯಾಲಯ ಸ್ಥಾಪಿಸಿ ।
ಬಸವ ಭಾಸ್ಕರನ ಪ್ರಭೆಯನ್ನು ॥ ಚೆಲ್ಲಿದಿರಿ
ಬಸವ ಮಂತ್ರದ ಮಹಾ ಶಕ್ತಿಯಿಂದ ॥

48) ರಾಷ್ಟ್ರೀಯ ಬಸವ ದಳ । ಸ್ಥಾಪನೆ ಮಾಡಿದಿರಿ ।
ಲಿಂಗಾಯತ ಸಮಾಜವನು ಒಗ್ಗೂಡಿಸಿ ॥(ದಿರಿ)
ಸಮಾಜ - ರಾಷ್ಟ್ರ ಪ್ರಜ್ಞೆಯ ಮೂಡಿಸಿದಿರಿ ॥

49) ಕಲ್ಯಾಣ ಕ್ರಾಂತಿ । ಗ್ರಂಥದ ಮೂಲಕ ।
ಬಸವ ಕ್ರಾಂತಿಯ ಪರಿಚಯ ಮಾಡಿದಿರಿ॥ ತಾವು
ಶರಣರ ತ್ಯಾಗವ ಸ್ಮರಿಸಿದಿರಿ॥

50) ರಾಷ್ಟ್ರ ಕಲ್ಯಾಣ ವಿದ್ಯಾರ್ಥಿ ಗಣ । ವಿಶ್ವ ಕಲ್ಯಾಣ ಮಿಷನ್।
ಲಿಂಗಾಯತ ಧರ್ಮ ಮಹಾಸಭಾ ಸ್ಥಾಪಿಸಿ ॥
ಸಮಾಜದ ಭವಿಷ್ಯ ರೂಪಿಸಿದಿರಿ॥

51) ಕಲ್ಯಾಣ ಕಿರಣ । ಮಾಸ ಪತ್ರಿಕೆಯಿಂದ ।
ಲಕ್ಷಾಂತರ ಮನಗಳ ಕತ್ತಲೆ ಕಳೆ(ದು) ॥ ಯುತ್ತ
ಹೊತ್ತಿಸುತ್ತಿರುವಿರಿ ತತ್ತ್ವದ ಜ್ಯೋತಿ॥

52) ಕಲ್ಯಾಣ ಕಿರಣದ । ಒಂದೊಂದು ವಾಕ್ಯವೂ ।
ಜ್ಞಾನ ಪೀಠ ಪ್ರಶಸ್ತಿಗೆ ಅರ್ಹವಾದವು ॥ ಅಂತೆಯೇ
ನೆಲೆಸಿದಿರಿ ಕೋಟಿ ಹೃದಯ ಪೀಠಗಳಲ್ಲಿ॥

53) ನನ್ನೀ ಕಿರುನಾಲಿಗೆಯಿಂ । ಏನೆಂದು ಬಣ್ಣಿಸಲಿ ।
ದಿವ್ಯ ಚರಿತೆಯ ತಮ್ಮ ಘನ ನಿಲುವ ॥
ವರ್ಣಿಸುವುದು ಎನ್ನಳವಲ್ಲ ॥

54) ಧನಿಕರು ಕೊಡುವರು। ಧನವ ದಾಸೋಹಕ್ಕೆ।
ನಾನೇನು ಕೊಡಲಿ ತಾಯಿ ಕಡುಬಡವನು ॥ ಎನ್ನ
ಬಾಳೇ ತಮ್ಮ ಚರಣಕೆ ನೈವೇದ್ಯ ॥

55) ನನ್ನಂಥ ಕೋಟಿ ಜನರ। ಆಯುಷ್ಯವನು ತಮಗೆ ।
ಲಿಂಗದೇವ ನೀಡಲೆಂದು ಪ್ರಾರ್ಥಿಸುವೆ ॥ ಸೆರಗೊಡ್ಡಿ
ನಿತ್ಯವೂ ನಾನು ಬೇಡಿಕೊಳ್ಳುವೆನು ॥

★★★

ಕಲ್ಯಾಣ ಕಿರಣದ ಎರಡು ಪ್ರತಿಗಳು ಬರುತ್ತಿದ್ದರೆ ಒಂದರ ಕ್ರಮ ಸಂಖ್ಯೆ ಕಾಣಿಸಿ ದಯವಿಟ್ಟು ಪತ್ರ ಬರೆಯಿರಿ.
-ವ್ಯವಸ್ಥಾಪಕರು



ಓಂ ಶ್ರೀ ಗುರು ಬಸವಲಿಂಗಾಯ ನಮ:
86666

ಬೆಂಗಳೂರಿನಲ್ಲಿ ಪೂಜ್ಯ ಮಾತಾಜಿಯವರ

56 ನೆಯ ವರ್ಧಂತಿ ಆಚರಣೆ

ಶರಣ ಬಂಧುಗಳೇ, ದಿ. 13-3-2001ರಂದು ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು 55 ವರ್ಷಗಳನ್ನು ಪೂರೈಸಿ 56ನೆಯದಕ್ಕೆ ಪಾದಾರ್ಪಣೆ ಮಾಡುತ್ತಿರುವ ಸನ್ನಿವೇಶದಲ್ಲಿ ರಾಷ್ಟ್ರೀಯ ಬಸವ ದಳ, ಬೆಂಗಳೂರು ಘಟಕದ ಶರಣ ಬಂಧುಗಳು 56ನೆಯ ಹುಟ್ಟು ಹಬ್ಬವನ್ನು ಪೂಜ್ಯ ಮಾತಾಜಿಯವರ ದಿವ್ಯ ಸನ್ನಿಧಿಯಲ್ಲಿ ಆಚರಿಸಿ, ಪೂಜ್ಯರನ್ನು ಅಭಿನಂದಿಸುತ್ತಿದ್ದೇವೆ. ಮಂಗಳವಾರ ದಿ.13-3-2001ರಂದು ಸಂಜೆ 5-30ಕ್ಕೆ ವರ್ಧಂತಿ ಕಾರ್ಯಕ್ರಮವು ಜರುಗಲಿದೆ. ತಮ್ಮೆಲ್ಲರಿಗೂ ಹೃತ್ಪೂರ್ವಕ ಆಹ್ವಾನ ನೀಡುತ್ತೇವೆ.

ಶರಣ.ಎಸ್.ಪುಟ್ಟರುದ್ರ
ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಸದ್ಗುರು ಅಲ್ಲಮ ಪ್ರಭು ಸ್ವಾಮಿಗಳು
ರಾಷ್ಟ್ರೀಯ ಬಸವ ದಳ

ಸಂಪರ್ಕಿಸುವ ವಿಳಾಸ : ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ, ರಾಜಾಜಿನಗರ, 2ನೆಯ ಬ್ಲಾಕ್, ಬೆಂಗಳೂರು-560010. ದೂರವಾಣಿ : 3325335/3322790

ಬಸವಾತ್ಮಜೆ : ಶ್ರೀ ಗುರು ಮಾತೆ

ಹೆಣ್ಣಾಗಿ ಹುಟ್ಟಿಹ ಶ್ರೀ ಗುರುಮಾತೆ, ಹೆಣ್ಣಲ್ಲ
ಹೆಣ್ಣೆಂದಿಪ್ಪರೀ ಲೋಕದ ಮನುಜರು
ಸ್ವಯಲಿಂಗವಾದ ಪರಮಗುರು ಬಸವಣ್ಣನ ತೋರಲು ಬಂದ,
ಬಸವಾತ್ಮಜೆಯು ಸ್ವಯಲಿಂಗವಾದ ಪರಿಯ ಕಂಡು,
ಎನ್ನ ಭವಬಂಧನ ಹರಿಯಿತ್ತಯ್ಯಾ !
ಇದನರಿಯದೆ, ಕುಹಕಿಗಳೆಲ್ಲ, ಅಧರ್ಮವ ನುಡಿಯುತಿಹರು.
ನಿರ್ಜೀವ ಮನುಜರನೆಲ್ಲ ಸಜೀವಗೊಳಿಸಲು,
ನಿಜಗುರು ಬಸವಾತ್ಮಜೆಗಲ್ಲದೆ, ಲೋಭಿಗಳಿಗುಂಟೆ ಆತ್ಮಬಲ ?!
ಬಸವಾತ್ಮಜೆಯೇ ಪರಮಗುರು ಬಸವಣ್ಣನ ಪ್ರತಿನಿಧಿ !
ಬಸವಾತ್ಮಜೆಯೇ ಲಿಂಗಾಯತ ಧರ್ಮದ ನಿಜಗುರು!
ಲಿಂಗದೇವನ ತೋರಲೆಂದು ಇಷ್ಟಲಿಂಗ ದೀಕ್ಷೆಯ ಕೊಟ್ಟು,
ಭವಿಗಳ ಭಕ್ತರೆನಿಸಿದ ಬಸವಾತ್ಮಜೆ !
ದಿಕ್ಕು ದೆಸೆಗೆಟ್ಟ ಮನುಜರಿಗೆಲ್ಲ ಜಂಗಮವಾದರು ಬಸವಾತ್ಮಜೆ! ॥
ಇಂತು ಬಸವಾತ್ಮಜೆಯ ನೆನಹು ಪರಮ ಶಾಂತಿ ಸಾಗರವಯ್ಯಾ!
ಲಿಂಗಜ್ಞಾನಿ ಚನ್ನಬಸವಣ್ಣಾ,
ಬಸವಾತ್ಮಜೆಯನು ತೋರಿದಿರಾಗಿ ಆನು ಬದುಕಿದೆನಯ್ಯಾ!
ಲಿಂಗದೇವ ಶರಣರ ಪರಮಗುರು ಸಂಗನ ಬಸವಣ್ಣ! ॥

ಡಾ॥ ಮರಿಬಸಪ್ಪಾ. ಚ. ದನದಮನಿ. ಕೃಷಿ ಅಧಿಕಾರಿ, ಕಾರವಾರ.

ಸಮಸ್ಯೆ ?- ಸಮಾಧಾನ !

● **ಬಸಣ್ಣ ದೇವಣಗಾಂವ, ಪ್ರಾರ್ಥನಾ ಸಂಚಾಲಕರು, ಗುಲಬರ್ಗಾ ರಾಷ್ಟ್ರೀಯ ಬಸವ ದಳ** - ನಾನು ಪ್ರಾರ್ಥನೆ ಮಾಡಿಸಿಕೊಂಡು ಬರುತ್ತಿದ್ದೇನೆ. ಈ ಹಿಂದಿನ ಪ್ರಾರ್ಥನಾ ಕೆಸೆಟ್ಟಿನಲ್ಲಿ ಇದ್ದ ಶ್ರೀ ಮಹಾಕಾರಣಿಕ ಗೀತೆಯಲ್ಲಿ ಕೆಲವೊಂದು ಪದ ಈಗ ಬದಲಾವಣೆಗೊಂಡು ಬಂದಿವೆ. ಉದಾ : ಜಗದ ಗುರುಗಳಾರು ನಿನಗೆ ಗುರುಗಳಲ್ಲ ಬಸವ ಗುರುವೆ. ಜಗದ ಒಡೆಯ ಸಂಗಮನ ಕರುಣೆ ಪಡೆದೆ ಬಸವ ಗುರುವೆ. ಮೊದಲಿತ್ತು ; ಈಗ -

ಜಗದ ಗುರುಗಳಾರು ನಿನಗೆ ಗುರುಗಳಲ್ಲ ಬಸವ ಗುರು
ಜಗದ ಒಡೆಯ ಲಿಂಗದೇವನ ಕರುಣೆ ಪಡೆದೆ ಬಸವ ಗುರು. ಯಾವುದು ಸರಿ ?

★ ನಮ್ಮ ಬುದ್ಧಿ, ಚಿಂತನೆ, ಅನುಭಾವ ಗಟ್ಟಿಗೊಂಡಂತೆ ಸಣ್ಣಪುಟ್ಟ ದೋಷಗಳನ್ನು ಸರಿ ಪಡಿಸುವುದು ಅನಿವಾರ್ಯವಾಗುತ್ತದೆ. ಆ ಗೀತೆ ಬರೆದಾಗ **'ಲಿಂಗದೇವ'** ಎಂಬ ಅನರ್ಘ್ಯ ಪದ ದೊರಕಿರಲಿಲ್ಲ. ಲಿಂಗಾಯತ ಧರ್ಮದ ದೇವರ ಹೆಸರು ಸ್ಪಷ್ಟವಾಗಿರಲಿಲ್ಲ. ಹೀಗಾಗಿ ಅಸ್ಪಷ್ಟವಾಗಿ ಬಳಸುತ್ತಿದ್ದೆವು. ಈಗ ತಾತ್ತ್ವಿಕವಾಗಿ ತಿದ್ದುಪಡಿ ಮಾಡಲಾಗುವುದರಿಂದ ನಾವು ಇತ್ತೀಚೆಗೆ ಬರೆದುದನ್ನು ನೀವುಗಳು ಬಳಕೆಗೆ ತರಬೇಕು. **'ಬಸವ ಗುರುವೆ'** ಎಂದಾಗ ತಾಳಕ್ಕೆ ಹೆಚ್ಚಾಗುತ್ತದೆ ಮತ್ತು ಕಾವ್ಯಗಳಲ್ಲಿ ಕೆಲವು ಅಕ್ಷರ ಅಗತ್ಯ ಬೀಳವು. ಅದಕ್ಕೆ ಬಸವ ಗುರುವೆ ಬದಲು ಬಸವ ಗುರು ಎಂದು ಬಳಸಲಾಗಿದೆ. ಅದೇ ರೀತಿ ಹೇ ಪರಮಾತ್ಮದಲ್ಲಿ ಸೇರಿಸಿರುವ 3ನೆಯ ಚರಣ, ಒಂದು ಅಮೂಲ್ಯ ಪರಿಕಲ್ಪನೆ. ಆಳವಾಗಿ ಚಿಂತನೆ ಮಾಡಿ ಅಳವಡಿಸಿದವನ್ನು ಬೇಗನೇ ರೂಢಿಯಲ್ಲಿ ತರಬೇಕು. ಮತ್ಸರ ಪೂರ್ಣರಾದ ವಿರೋಧಿಗಳು ಏನಾದರೂ ಮಾಡಲಿ, ರಾಷ್ಟ್ರೀಯ ಬಸವ ದಳವು ಸತ್ಯದ, ತತ್ತ್ವದ ಅನುಷ್ಠಾನಕ್ಕೆ ಸದಾ ಸಿದ್ಧವಾಗಿರಬೇಕು.

● **ಕುಸುಮ ಮೃತ್ಯುಂಜಯಪ್ಪ, ದಾವಣಗೆರೆ** - ವಚನಾಂಕಿತ ಬದಲಾವಣೆ ವಿರುದ್ಧ, ನಿಮ್ಮ ವಿರುದ್ಧ ಹೋರಾಟ ಮಾಡಲು, ನೇತೃತ್ವ ವಹಿಸಲು ಮುರುಘರಾಜೇಂದ್ರ ಶರಣರು ಸಿದ್ಧವಂತೆ ; ಮಹಿಳಾ ಸಂಘಟನೆಗಳು ನೆರವಾಗುವುದಾದರೆ ?

★ ಮಜ್ಜಿಗೆ ಕುಡಿಯೋರಿಗೆ ಮೀಸೆ ಹಿಡಿಯಲು ಬೇರೊಬ್ಬರು ಬೇಕೆ ? ತಾವು ಹೋರಾಟ ಶುರುಮಾಡಬೇಕು. ಸಮಾನ ಮನಸ್ಕರು ಸಿಕ್ಕೇ ಸಿಕ್ಕುವರು. ಲಿಂಗದೇವನನ್ನು ಪ್ರತಿಷ್ಠಾಪಿಸಲು ನಾವು ಒಬ್ಬಂಟಿಯಾಗಿ ಹೋರಾಟ ಶುರು ಮಾಡಿದೆವೇ ವಿನಾ ಯಾರಿಗಾಗಿಯೂ ಕಾಯಲಿಲ್ಲ. ನಂತರ ಸಮಾನ ಮನಸ್ಕರು ತಯಾರಾಗಿ ಬೆಂಬಲಿಸುತ್ತ ಲಿಂಗದೇವನ ಮಹಿಮೆಯನ್ನು ಕೊಂಡಾಡುತ್ತಲಿದ್ದಾರೆ. ಪುರುಷ ಸ್ವಾಮಿಗಳು, ಪುರುಷರ ಸಂಘಟನೆಗಳ ಬಗ್ಗೆ ಮುರುಘರಾಜೇಂದ್ರ ಶರಣರು ನಿರಾಶರಾದಂತೆ ಕಾಣುತ್ತೆ ಅದಕ್ಕೇ ಮಹಿಳಾ ಸಂಘಟನೆಗಳವರ ಆಸರೆ ಬಯಸಿದ್ದಾರೆ.

● **ರಾಜಮಣಿ ಮಲ್ಲಿಕಾರ್ಜುನಪ್ಪ, ಮತ್ತೀಪುರ** - 1970ರಿಂದಲೂ ಪ್ರಯತ್ನಿಸಿದ್ದರೂ ಲಿಂಗಾಯತ ಧರ್ಮಕ್ಕೆ ಜನಗಣತಿಯಲ್ಲಿ ಪ್ರತ್ಯೇಕ ಅಂಕಣ, ಸಂಕೇತ ಸಂಖ್ಯೆ ಪಡೆಯಲು ಸಾಧ್ಯವಾಗಿಲ್ಲವೇಕೆ ?

★ ಪ್ರಯತ್ನವು ತಾತ್ತ್ವಿಕವಾಗಿ ಸರಿ ಇರಲಿಲ್ಲ. ನಾವೂ ಇದರಲ್ಲಿ ತೊಡಗಿಸಿಕೊಂಡಿರಲಿಲ್ಲ. ವೀರಶೈವ ಮಹಾಸಭೆಯವರ ಮೇಲೆ ನಂಬಿಕೆ ಇಟ್ಟು ಅವರ ಪ್ರಯತ್ನವನ್ನೇ ಪ್ರೋತ್ಸಾಹಿಸುತ್ತಿದ್ದೆವು. ಅವರದು ತಪ್ಪು ದಾರಿ ಎಂದು 1998ರಲ್ಲಿ ಮನವರಿಕೆಯಾಯಿತು. ಆಗಿನಿಂದ ನೇರವಾಗಿ ಜಾಗೃತಿ ಕಾರ್ಯದಲ್ಲಿ ತೊಡಗಿದೆವು. ಮುಂದೆ ಇನ್ನು ಬೇಗನೆ ಗುರಿ ತಲ್ಪಬಹುದೆಂಬ ವಿಶ್ವಾಸ ಬಂದಿದೆ.

● ಎಲ್ಲ ವೀರಶೈವರೂ ಲಿಂಗಾಯತರು ; ಎಲ್ಲಾ ಲಿಂಗಾಯತರೂ ವೀರಶೈವರಲ್ಲ - ಈ ಹೇಳಿಕೆ ಸರಿಯೆ ?

-ಎರಡೂ ಸಂಸ್ಕೃತ ಪದಗಳೆ. ಶಿವನಲ್ಲಿ ವೀರತಮವಾದ ಭಕ್ತಿಯುಳ್ಳವನು ವೀರಶೈವ . ಜಗತ್ತಿನ ಸೃಷ್ಟಿಕರ್ತ ಒಬ್ಬನು. ಅವನು ನಿರಾಕಾರ - ಅವನು ಲಿಂಗದೇವ. ಅವನ ಸಾಕಾರ ಶರೀರವೇ ಬ್ರಹ್ಮಾಂಡ. ಇದು ಗೋಲಾಕಾರವಾಗಿದೆ. ಪರಮಾತ್ಮನನ್ನು ಗೋಲಾಕಾರದ ಇಷ್ಟಲಿಂಗ ರೂಪದಲ್ಲಿ ಚುಳುಕಾಗಿ ಮಾಡಿಕೊಂಡು ದೇಹಕ್ಕೆ ಆಯತ (ಸಂಬಂಧ) ಮಾಡಿಕೊಂಡವನು ಯಾರೋ ಅವನು ಲಿಂಗಾಯತ. ವೀರಶೈವ ಶಿವಪೂಜಕ, ಲಿಂಗಾಯತನು ದೇವಪೂಜಕ. ವೀರಶೈವ ಶೈವದ ಒಂದು ಶಾಖೆ ; ಲಿಂಗಾಯತವು ಒಂದು ಸ್ವತಂತ್ರ ಧರ್ಮ.

● ಇಷ್ಟಲಿಂಗದೊಳಗಿರುವ ಪಿಂಡವಾಳವು ಸ್ಥಾವರಲಿಂಗದ ಸಂಕೇತವಲ್ಲವೆ ?ಎಂದು ಕೆಲವರು ಕೇಳುತ್ತಾರೆ.

★ ಸ್ಥಾವರಲಿಂಗದ ಮತ್ತೊಂದು ಹೆಸರು, ಶಿವಲಿಂಗ. ಯೋಗಿರಾಜ ಶಿವನ ಪ್ರತೀಕ ಆ ಶಿವಲಿಂಗ. ಹುಟ್ಟು ಲಿಂಗವು ಜೀವಾತ್ಮನ ಪ್ರತೀಕ. ಬ್ರಹ್ಮಾಂಡದ ಆಕಾರದಲ್ಲಿರುವ ಕಂಥೆ ಲಿಂಗ (ದೇವನ)ದ ಪ್ರತೀಕವಾದರೆ, ಪಿಂಡಾಂಡದ ಅಂದರೆ ದೇಹದ ಆಕಾರದಲ್ಲಿರುವ ಹುಟ್ಟುಲಿಂಗವು ಜೀವಾತ್ಮನ ಪ್ರತೀಕ. ಲಿಂಗದಲ್ಲಿ ಅಂಗವಿದೆ ; ಬ್ರಹ್ಮಾಂಡದಲ್ಲಿ ಪಿಂಡಾಂಡವಿದೆ ಎಂಬ ತತ್ತ್ವದ ಪ್ರತೀಕ ಇಷ್ಟಲಿಂಗ.

● ಕೆಲವರು ವೀರಶೈವ/ಲಿಂಗಾಯತ ಎಂದು ಜನಗಣತಿಯಲ್ಲಿ ಬರೆಸಿರಿ ಎಂಬ ಪ್ರಚಾರ ನೋಡಿ ಎರಡರಲ್ಲಿ ಒಂದು ಪದ ಬರೆಸಬೇಕೆಂಬುದನ್ನು ಅರಿಯದೆ ವೀರಶೈವ ಲಿಂಗಾಯತ ಎಂದು ಬರೆಸಿದ್ದಾರೆ. ಈ ಬಗ್ಗೆ ತಮ್ಮ ಅಭಿಪ್ರಾಯವೇನು ?

★ ವೀರಶೈವ ಮಹಾಸಭೆ ಲಿಂಗಾಯತ ಸಮಾಜಕ್ಕೆ ಮಾಡಿದ ಮಹಾನ್ ಅಪಕಾರ ಈ ಗೊಂದಲ. ಎಲ್ಲ ಜನ ತಾವು ಲಿಂಗಾಯತರೆಂದು ನೆಮ್ಮದಿಯಿಂದ ಬರೆಸುತ್ತಿದ್ದವರಿಗೆ ವೀರಶೈವ ಪದವನ್ನು ಕೃತಕ ಪ್ರಚಾರ ಮಾಡಿ ತುರುಕಿದರು ; ಮೊದಲೇ ತೂಕಡಿಸುವ ಜನ ; ಇವರಿಗೆ ಹಾಸಿಗೆ ಹಾಸಿ ಕೊಟ್ಟಂತೆ ಆಯಿತು. ಹೀಗಾಗಿ ಕೆಲವರು ವೀರಶೈವ ಲಿಂಗಾಯತ ಎಂದು ಬರೆಸಿರಲೂ ಸಾಕು. ವೀರಶೈವ ಮಹಾಸಭೆ ಹಠ ತೊಟ್ಟು ತನ್ನ ಸಮಾಜಕ್ಕೆ ಕೇಡು ಬಗೆದಿದೆ ಎಂದು ಹೇಳುವುದಷ್ಟೆ ಉಳಿದಿದೆ.

● **ಶರಣೆ. ಪಾರ್ವತಮ್ಮ, ಚಿತ್ರದುರ್ಗ.** - ಚಿತ್ರದುರ್ಗದಲ್ಲಿ ಬೃಹನ್ಮಠದವರು ನಡೆಸುವ ಒಂದು ಟಿ.ವಿ. ನೆಟವರ್ಕ್ ಇದೆ. ನೀವು ದಿ.27-11-2000ರಂದು ಕರೆದ ಪತ್ರಿಕಾಗೋಷ್ಠಿಯಲ್ಲಿ ಕೋಟ್ಯಂತರ ರೂಪಾಯಿ ಬೆಲೆಬಾಳುವ ಪ್ರಾಚ್ಯ ವಸ್ತುಗಳನ್ನು ವಿದೇಶಕ್ಕೆ ಸಾಗಿಸುವ ಕೆಲಸದಲ್ಲಿ ಚಿತ್ರದುರ್ಗ ಬೃಹನ್ಮಠದವರ ಕೈವಾಡವಿದೆ ಎಂಬ ದಟ್ಟ ವದಂತಿಯ ನಿಜ ಸಂಗತಿ ತಿಳಿಯಲು ಸಿ.ಬಿ.ಐ ತನಿಖೆಯಾಗಬೇಕು ಎಂದು ಹೇಳಿದಿರಿ. ಅದು ಪತ್ರಿಕೆಗಳಲ್ಲಿ ಮಾತ್ರವಲ್ಲ ಉದಯ ವಾರ್ತೆಯಲ್ಲೂ ಬಂದಿತು. ಇದಕ್ಕೆ ಪ್ರತಿಯಾಗಿ ದಿ.3-12-2000ರ ಸುಮಾರಿಗೆ ತಮ್ಮ ಸ್ಥಳೀಯ ಟಿ.ವಿ. ವಾರ್ತೆಯಲ್ಲಿ ರಾಷ್ಟ್ರೀಯ ಬಸವ ದಳದವರು ನಿಮ್ಮನ್ನು ಚರ್ಚೆಗೆ ಆಹ್ವಾನಿಸಿರುವುದಾಗಿ ಹೇಳಿಸಿದರು. ನಮಗೆ ಆಗಿರುವ ಕಳವಳವೇನೆಂದರೆ ನೀವೆಲ್ಲಿ ನಮ್ಮ ಬಗ್ಗೆ ತಪ್ಪು ತಿಳಿಯುವಿರೋ ಎಂಬುದಾಗಿದೆ.

★ ನಾನ್ಯಾಕೆ ತಪ್ಪು ತಿಳಿಯಲಿ ? ಬೃಹನ್ಮಠದ ತಂತ್ರಗಳು ನಮಗೆ ಎಂದಿನಿಂದಲೂ ತಿಳಿದಿವೆ. ಜನರಲ್ಲಿ ಗೊಂದಲ ಹುಟ್ಟಿಸಲು ಯಾವಾಗಲೂ ಒಂದು ಅದೇ ಹೆಸರಿನ ಖೋಟಾ ಸಂಸ್ಥೆಯನ್ನು ಸೃಷ್ಟಿಸುವರು ಉದಾ: ಸರ್ಪಭೂಷಣಮಠ, ಅದರ ಸ್ವಾಮಿಗಳು, ಸಮಿತಿ ಇದ್ದಂತೆಯೇ ಇನ್ನೊಂದು ಸಂಸ್ಥೆಯನ್ನು (ಹಿಂದಿನ ಸ್ವಾಮಿಗಳು) ಸೃಷ್ಟಿಸಿದರು. ಆ ಮಠದ ಅಧಿಕೃತ ಅಧಿಕಾರಿ ಕೆರೂರಿನ ಮಲ್ಲಿಕಾರ್ಜುನ ಸ್ವಾಮಿಗಳು ಮಠದಲ್ಲಿರುವಂತೆ ಇನ್ನೊಬ್ಬ ಮಲ್ಲಿಕಾರ್ಜುನ ದೇವರನ್ನು ನೇಮಕ ಮಾಡಿದರು. ಅದೇ ತಂತ್ರಗಾರಿಕೆ ಹೂಡಿ ಚಿತ್ರದುರ್ಗದಲ್ಲಿ ಅಧಿಕೃತ ರಾಷ್ಟ್ರೀಯ ಬಸವ ದಳ ಟ್ರಸ್ಟ್ ಇರುವಾಗಲೇ ಓರ್ವ

ಅವಕಾರಿ ದೊರೆಯನ್ನು ಅಧ್ಯಕ್ಷನನ್ನಾಗಿ ಮಾಡಿ ರಾಷ್ಟ್ರೀಯ ಬಸವ ದಳ ಸಮಿತಿ ಮಾಡಿದ್ದಾರೆ. ಇದನ್ನು ಅರಿಯದಷ್ಟು ಮಂದಮತಿಗಳೇನಲ್ಲ ನಾವು ; ಕಳವಳ ಪಡಬೇಡಿರಿ.

● **ಕುಮಾರಿ ವಚನ ಸುಧಾ, ಚಿತ್ರದುರ್ಗ** - 'ಲಿಂಗದೇವ' ವಚನಾಂಕಿತ ಬದಲಾಯಿಸಿದ್ದನ್ನು ಸಮರ್ಥನೆ ಮಾಡಿಕೊಳ್ಳಲು ತಮ್ಮನ್ನು ಚರ್ಚೆಗೆ ಆಹ್ವಾನಿಸಿರುವುದಾಗಿಯೂ, ದಿ.15ರೊಳಗೆ ಬಂದು ಚರ್ಚೆಯಲ್ಲಿ ಭಾಗವಹಿಸಬೇಕೆಂದು ಆಹ್ವಾನ ನೀಡಿರುವುದಾಗಿಯೂ ಬೃಹನ್ಮಠದವರು ನಡೆಸುವ ಟಿ.ವಿ. ನೆಟ್ ವರ್ಕ್‌ದಲ್ಲಿ ಹೇಳಲಾಯಿತು. ದಿ.15ರೊಳಗೆ ತಾವು ಬರಬಹುದೆಂದು ನಿರೀಕ್ಷಿಸಿದೆವು.

★ ವಿದ್ವಾಂಸರು ಚರ್ಚೆ ಮಾಡುವಾಗ ಎದುರಿನಲ್ಲಿರುವ ಪಂಡಿತರ ಮಟ್ಟವನ್ನು ತಿಳಿದು ಚರ್ಚೆಗಿಳಿಯುವರು. ಚರ್ಚೆಗೆ ಕರೆದವರ ಹೆಸರೇ ನಾಪತ್ತೆ ; ಅಂದಾಗ ಇಲ್ಲದೇ ಇರುವ (ಖೋಟಾ ರಾಷ್ಟ್ರೀಯ ಬಸವ ದಳ) ಸಮಿತಿಯ, ಹೆಸರೇ ಇಲ್ಲದ ವಿದ್ವಾಂಸರೊಡನೆ ಚರ್ಚೆ ಮಾಡಲು ಅಂಥವರನ್ನು ಎಲ್ಲಿ ಹುಡುಕಬೇಕು ?

● **ಪ್ರೇಮಾ ಚಂದ್ರಯ್ಯ, ದಾವಣಗೆರೆ** -ವಚನಾಂಕಿತ ಬದಲಾವಣೆಯಲ್ಲಿ ನಿಮ್ಮದು ಭಂಡ ಧೈರ್ಯ ಎಂದು ಮುರುಘರಾಜೇಂದ್ರ ಶರಣರು ಜಯದೇವ ಸ್ವಾಮಿಗಳ ಸಂಸ್ಮರಣ ಕಾರ್ಯಕ್ರಮದಲ್ಲಿ ಟೀಕಿಸಿದರು. ಇದಕ್ಕೆ ನೀವೇನಂತೀರಿ ?

★ ನಮಗೆ ಧೈರ್ಯವೇನೋ ಇದೆ ಆದರೆ ರಾಷ್ಟ್ರದ್ರೋಹದಂತಹ ಪ್ರಾಚ್ಯ ವಸ್ತು ಕಳ್ಳ ಸಾಗಾಣಿಕೆ ಮುಂತಾದ್ದು ಮಾಡುವಷ್ಟು ಭಂಡ ಧೈರ್ಯ ಮಾತ್ರ ನಮಗಿಲ್ಲ. ಭಂಡ ಧೈರ್ಯದಲ್ಲಿ ನಮಗಿಂತಲೂ ಅವರು ಮುಂದೆ ಎನ್ನುವುದನ್ನು ಪ್ರಾಮಾಣಿಕವಾಗಿ ಒಪ್ಪುತ್ತೇವೆ. ಅದಿರಲಿ. ಲಿಂ|| ಜಯದೇವ ಸ್ವಾಮಿಗಳ ಸಂಸ್ಮರಣೆಯಲ್ಲೂ ನಮ್ಮದೇ ಸ್ಮರಣೆ ಮಾಡುವರಲ್ಲ. ಇಷ್ಟೇಕೆ ನಮಗೆ ಹೆದರುತ್ತಾರೆ, ಕೇಳಿನೋಡಿ !

● **ಬಿ.ಎಂ. ರುದ್ರಶೆಟ್ಟಿ, ಹಾಸನ.** - ಲಿಂಗಾಯತ ಧರ್ಮ ಸ್ವತಂತ್ರ ಧರ್ಮ, ಅಹಿಂದು ಧರ್ಮ ಎಂದು ನೀವು ಪ್ರತಿಪಾದಿಸುತ್ತೀರಿ. ಮೊದಲು ನಿಮ್ಮ ಅಭಿಮಾನಿಗಳಾಗಿದ್ದ ಕೆಲವು ಲಿಂಗಾಯತೇತರರು (ಹೆಸರು ಬೇಡ) ಈಗ ವಿರೋಧಿಸುತ್ತ ಇವನಾರವ ಎಂದು ಭೇದ ಮಾಡದೆ, ಇವ ನಮ್ಮವ ಎನ್ನಬೇಕಾದ ನೀವೇ ಈಗ ಹಿಂದುತ್ವದಿಂದ ಹೊರಹೋಗುವುದು ಸಂಕುಚಿತವಲ್ಲವೆ ಎನ್ನುತ್ತಿದ್ದಾರೆ. ಈ ಬಗ್ಗೆ ನಿಮ್ಮ ವಿವರಣೆ ಏನು ?

★ ಬಹಳ ಜನಕ್ಕೆ ಚಿಂತನ ಸಾಮರ್ಥ್ಯ ಇರದು. ಇವರು ತಿಪ್ಪೆಯನ್ನು ಕೆದರುವಂತೆ ವೈದಿಕ ಧರ್ಮ, ಶೃತಿ, ಸ್ಮೃತಿಗಳ ತಿಪ್ಪೆಯನ್ನು ಕೆದರುತ್ತ ಹೋಗುವರು, ದುರ್ನಾತ ಎಬ್ಬಿಸುವರು. ಆದರೆ ಪರ್ಯಾಯವಾಗಿ ಒಂದು ವ್ಯವಸ್ಥೆಯನ್ನು ರಚಿಸುವ ಸಮ್ಯಕ್ ಪ್ರಜ್ಞೆ ಹೊಂದಿರುವುದಿಲ್ಲ. ಇಲ್ಲಿ ರೋಗವಿದೆ, ಈ ರೋಗ ಹೀಗಿದೆ ಎಂದು ಹಿಂದು ಸಮಾಜದ ರೋಗಗಳ ಬಗ್ಗೆ ಬರಹ ಬರೆದು ಭಾಷಣ ಬಿಗಿದರೆ ಸಾಲದು. ರೋಗವನ್ನು ವಾಸಿ ಮಾಡುವ ವಿಧಾನ ಏನು ? ಔಷಧಿ ಯಾವುದು ಎಂದು ತಿಳಿದು ಚಿಕಿತ್ಸೆ ಮಾಡಬೇಕು. ಇವನು ಯಾರು ? ಇವನು ಬ್ರಾಹ್ಮಣನೇ, ಕ್ಷತ್ರಿಯನೇ, ವೈಶ್ಯನೇ, ಶೂದ್ರನೇ, ಅಸ್ಪೃಶ್ಯನೆ ? ಎನ್ನುವುದೇ ವರ್ಣಾಶ್ರಮ ಆಧಾರಿತ ವೈದಿಕ-ಹಿಂದು ಧರ್ಮ. ಇವನು ಹುಟ್ಟನಿಂದ ಏನೇ ಇರಲಿ, ಯಾವುದೇ ಉದ್ಯೋಗ ಮಾಡಲಿ ಈತ ದೇವನಿಗೆ ಒಲಿದಾತನೆ ? ಹಾಗಾದರೆ ಇವನು ನಮ್ಮವ ! ಇವನು ಸಕಲ ಜೀವಾವಳಿಗೆ ಲೇಸನ್ನು ಬಯಸುವ ಶರಣ ಎನ್ನುವುದೇ ಶರಣ ಧರ್ಮ, ಬಸವ ಧರ್ಮ, ಲಿಂಗಾಯತ ಧರ್ಮ. ಆದ್ದರಿಂದ ಹಿಂದುದೊಳಗಣ ಜಾತಿಯಾಗಿ ಉಳಿಯದೆ, ಸಂಕುಚಿತತ್ವದಿಂದ ಹೊರಹೋಗಿ ಸ್ವತಂತ್ರವಾದರೆ ವಿಶಾಲತ್ವವನ್ನು ಬಸವೋಕ್ತ ಲಿಂಗಾಯತ ಧರ್ಮವು ಪಡೆಯುತ್ತದೆ ಎಂದು ಅಂಥ ಜನರಿಗೆ ತಿಳಿಸಿಹೇಳಿರಿ.

● ನೀವು ಕೆಲವೊಂದು ಧಾರ್ಷ್ಟ್ಯದ ಹೆಜ್ಜೆ ಇಡುತ್ತೀರಿ. ಉದಾಹರಣೆಗೆ ವಚನಾಂಕಿತ ಬದಲಾವಣೆ. ರಾಷ್ಟ್ರೀಯ ಬಸವ ದಳ ಸ್ಥಾಪಿಸಿ, ನಾವು ಸಮಾಜ ಸಂಘಟನೆ ಮಾಡುವಾಗ ಕೆಲವು ಆತಂಕಗಳು ಇದಿರಾಗುತ್ತವೆ. ನೀವು ನಿಮ್ಮದೇ ರಚನೆ ಮಾಡಿ ಲಿಂಗದೇವ ಎಂದು ಬಳಸಬಹುದಿತ್ತಲ್ಲ. ಆಗ ತೊಂದರೆಯೇ ಇರಲಿಲ್ಲ.

★ ಸೃಷ್ಟಿಕರ್ತ ಲಿಂಗದೇವ. ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ಜಾಗತಿಕ ಧರ್ಮಗಳ ಅಧ್ಯಯನ ಮತ್ತು ಅನುಭವದಿಂದ ನಮಗೆ ಸಾಕಷ್ಟು ಸಮಾಜ ಕಟ್ಟುವ ಪರಿಜ್ಞಾನ ಉಂಟಾಗಿದೆ. ಅಂಥ ಒಂದು ಸುಂದರ ಶರಣ ಸಮಾಜದ ಆಧಾರ ಸ್ತಂಭ - ಒಬ್ಬನೇ ಆದ ಸೃಷ್ಟಿಕರ್ತ, ಧರ್ಮಗುರು ಬಸವಣ್ಣನವರು ಮುದ್ದಾಗಿ ಕರೆದ ಲಿಂಗದೇವ. ಅಂಥ ಧರ್ಮಗುರುವಿನ ಸುಂದರ ಪರಿಕಲ್ಪನೆ -ಲಿಂಗದೇವನನ್ನು ನನ್ನ ಕೊಡುಗೆ ಎಂದು ಕರೆದುಕೊಂಡು ಧರ್ಮಗುರುವಿಗೆ ದ್ರೋಹ ಬಗೆಯಲೆ ? ನಮ್ಮ ಧರ್ಮದ ಸಂವಿಧಾನ ಕೊಟ್ಟವರು ಆದಿ ಗುರು ಬಸವಣ್ಣನವರು ಮತ್ತು ಅವರ ಸಮಕಾಲೀನರು ಎಂಬುದನ್ನು ನಾನು ಜಗತ್ತಿಗೆ ತಿಳಿಸಬೇಕಾಗಿದೆ. ಅವರ ಎಲ್ಲ ವಚನಗಳನ್ನು ಕೈಬಿಟ್ಟು, ನಾನೇ ವಚನಗಳನ್ನು ಬರೆದು-ಬರೆಯುವ ಸಾಮರ್ಥ್ಯ ನನಗಿದೆ ಎಂಬುದು ನಿಮಗೆಲ್ಲ ತಿಳಿದಿದೆ, ಕೀರ್ತಿಯನ್ನು ಕದಿಯುವ ಅಪ್ರಾಮಾಣಿಕತೆ ನನ್ನದಲ್ಲ. ಸಂಘಟನೆಗೆ ಪೂರಕವಾದುದನ್ನೇ ನಾನು ಮಾಡುತ್ತಿರುವುದು. ಇದನ್ನು ಅರಿತು ಜನರಿಗೆ ಮನವರಿಕೆ ಮಾಡಿಕೊಡುತ್ತ ಸಂಘಟನೆಯನ್ನು ಬಲಪಡಿಸಿರಿ.

● **ಶಿವಕುಮಾರ ಡಾಕುಳಗಿ, ಅಧ್ಯಕ್ಷ, ರಾಷ್ಟ್ರ ಕಲ್ಯಾಣ ವಿದ್ಯಾರ್ಥಿಗಣ, ಧಾರವಾಡ.** -ಧಾರವಾಡದಲ್ಲಿ ದಲಿತರ ಒಂದು ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಬಂದ ನಿಡುಮಾಮಿಡಿ ಶ್ರೀಗಳು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು. ಆಗ ತಮ್ಮನ್ನು ಮತ್ತು ಡಾ|| ಚಿದಾನಂದ ಮೂರ್ತಿಯವರನ್ನು ಬಿಜೆಪಿ, ಆರ್‌ಎಸ್‌ಎಸ್ ವಕ್ತಾರರು ಎಂದು ಟೀಕಿಸಿದರು. (ವಿಜಯ ಕರ್ನಾಟಕ 20-2-2001) ಈ ಬಗ್ಗೆ ತಮ್ಮ ಅಭಿಪ್ರಾಯ ?

★ ಈ ದೇಶ, ಇದರಲ್ಲಿರುವ ಜನ, ಅದರಲ್ಲೂ ಲಿಂಗಾಯತ ಸಮಾಜ ಇವನ್ನು ಕುರಿತು ಆಲೋಚಿಸುವಾಗ ಒಂದು ಓಣಿಯಲ್ಲಿ ವಿಪರೀತ ನಾಯಿಗಳು ಸೇರಿಕೊಂಡು ಸುಮ್ಮಸುಮ್ಮನೆ ಒಂದು ಬೊಗಳಿತು ಎಂದು ಇನ್ನೊಂದು ಬೊಗಳುವಂತೆ ಎಲ್ಲರೂ ಮಾತನಾಡುವುದು ಅಭ್ಯಾಸವಾಗಿಬಿಟ್ಟಿದೆ. ಇಲ್ಲಿ ತಲೆ ಮುಂದಾಗುವುದಕ್ಕಿಂತ ನಾಲಿಗೆಯೇ ಮುಂದು. ಅದರಲ್ಲೂ ಪತ್ರಿಕೆಗಳಿಗೆ ರಂಜನೀಯ ಸುದ್ದಿಗಳು ಸಿಗುವುದರಿಂದಲೂ ಇಂಥ ಮುಂದಾಲೋಚನೆ ಇಲ್ಲದೆ ಮಾತನಾಡುವವರಿಗೆ ಆದ್ಯತೆ ಕೊಡುವುದರಿಂದಲೂ ಇಂಥ ಹೇಳಿಕೆಗಳು ಜಾಸ್ತಿಯಾಗುತ್ತಿವೆ. ಡಾ|| ಚಿ.ಮೂ ಮತ್ತು ನಮ್ಮ ವಿಚಾರ ಉತ್ತರ ದಕ್ಷಿಣ ಧ್ರುವಗಳಂತೆ ಅವರು ಆರ್.ಎಸ್.ಎಸ್ ವಕ್ತಾರರಾಗಿ ಮಾತನಾಡುತ್ತಿದ್ದಾರೆ. ನಾವು ಪೂರ್ತಿ ಭಿನ್ನವಾದ ನಿಲುವು ತಳೆದವರು. ಸೈದ್ಧಾಂತಿಕ, ಸಾಮಾಜಿಕ, ಸಾಂಸ್ಕೃತಿಕ ಎಲ್ಲಾ ರಂಗದಲ್ಲೂ ವೈದಿಕ ಹಿಂದೂದಿಂದ ಲಿಂಗಾಯತವು ಬೇರೆ ಎಂದು ದಿನ ನಿತ್ಯ ಘಂಟಾಘೋಷವಾಗಿ ಸಾರುತ್ತಿರುವ ನಾವು ಅದೆಂತು ಬಿಜೆಪಿ ವಕ್ತಾರರಾಗಲು ಸಾಧ್ಯ ? ಆರ್.ಎಸ್.ಎಸ್‌ದ ಬಹುಪಾಲು ಧೋರಣೆ ನಮಗೆ ಹೊಂದದು. ಅವರ ರಾಷ್ಟ್ರಪ್ರೇಮ, ಶಿಸ್ತು, ತ್ಯಾಗ ಮೆಚ್ಚುಗೆಯಾದ ಸಂಗತಿ ಎಂದು ಹೇಳುತ್ತಲೇ ಇರುವಾಗ ಅದೆಂತು ನಾವು ಬಿ.ಜೆ.ಪಿ ಅಥವಾ ಆರ್.ಎಸ್.ಎಸ್ ವಕ್ತಾರರಾಗಲು ಸಾಧ್ಯ ? ನಿಡುಮಾಮಿಡಿ ಶ್ರೀಗಳು ಕಣ್ಣು ತೆರೆಯುವ ಹಿಂದಿನ ಸಮಯದಿಂದಲೇ ಶೂದ್ರ, ದಲಿತರ ಹಕ್ಕುಗಳ ಕುರಿತು ನಾವು ಪ್ರತಿಪಾದಿಸುತ್ತ ಬಂದಿರುವುದಲ್ಲದೆ ಇಂದು ಅಸಂಖ್ಯಾತ ದಲಿತರು, ಶೂದ್ರರು, ಎಲ್ಲರೂ ನಮ್ಮ ಶರಣ ಸಮುದಾಯದ ಅಂಗವಾಗಿದ್ದಾರೆ. ಬಹುಪಾಲು ಲಿಂಗಾಯತ ಮಠಾಧೀಶರು ಧರ್ಮಗುರು ಬಸವಣ್ಣನವರ ಮತ್ತು ಆದಿ

ಶರಣರ ಆಶಯಕ್ಕೆ ವಿರುದ್ಧವಾಗಿ ಲಿಂಗಾಯತೇತರರಿಗೆ ಧಾರ್ಮಿಕ ಹಕ್ಕುಗಳನ್ನು ನಿರಾಕರಿಸಿದಾಗ ಮುಂದೆ ಹೆಜ್ಜೆ ಇಟ್ಟು ದೀಕ್ಷೆ ನೀಡಿದುದು ನಮ್ಮ ಸಂಸ್ಥೆ.

ಪ್ರತಿಯೊಂದು ಧರ್ಮಕ್ಕೂ ತನ್ನದೇ ಆದ ಸೈದ್ಧಾಂತಿಕ ಚೌಕಟ್ಟು-ನಂಬಿಕೆ, ವಿಚಾರ-ಆಚಾರ, ವಿಧಿ-ವಿಧಾನ ಇರುತ್ತವೆ. ಅದೇ ರೀತಿ ಲಿಂಗಾಯತ ಧರ್ಮಕ್ಕೂ. ಬಸವಾದಿ ಪ್ರಮಥರ ಆಶಯಕ್ಕೆ ವಿರುದ್ಧವಾಗಿ ತಪ್ಪು ಆಚರಣೆ ಒಳಸೇರಿ ಲಿಂಗಾಯತ ಸಮಾಜ ಮಡುಗಟ್ಟಿ ನಿಂತಿರುವುದನ್ನು ತಿದ್ದೋಣ, ತಿಳಿಹೇಳಿ ಸರಿಪಡಿಸೋಣ ಲಿಂಗಾಯತವು ಹಿಂದುದೊಳಗಣ ಒಂದು ಜಾತಿ ಎಂದು ಚಿ.ಮೂ ಅನ್ನುವುದು ತಪ್ಪಾದರೆ, ಇದು ಜಾತಿಯಲ್ಲ ಸ್ವತಂತ್ರ ಧರ್ಮ ಎಂಬ ನಮ್ಮ ಅಭಿಪ್ರಾಯ ಸರಿ ಇರಲೇ ಬೇಕು ತಾನೆ ? ಅದೂ ತಪ್ಪು ಇದೂ ತಪ್ಪು ಎಂದು ಬಾಯಿ ಚಪಲಕ್ಕಾಗಿ, ಟೀಕಿಸುವುದಕ್ಕಾಗಿ ಟೀಕಿಸಿದರೆ ಅಂಥವರ ಮಾತನ್ನು ನಾವು ಗಂಭೀರವಾಗಿ ಪರಿಗಣಿಸಬಾರದು. ವಿಭೂತಿ-ರುದ್ರಾಕ್ಷಿ-ಲಿಂಗಧಾರಣೆ ಏನೊಂದು ಇಲ್ಲದ (ಹಾಗೆಂದು ಅವರ ಒಡನಾಡಿದವರು ಹೇಳುತ್ತಾರೆ) ಮಾಜಿ ಲಿಂಗಾಯತರಾದ ನಿಡುಮಾಮಿಡಿ ಶ್ರೀಗಳು ಲಿಂಗಾಯತ ಧರ್ಮ ಕುರಿತು ಮಾತನಾಡುವ ಧಾರ್ಷ್ಟ್ಯ ನೈತಿಕ ಹಕ್ಕು ಹೇಗೆ ಹೊಂದಿದ್ದಾರೆ ಎಂದು ಆಶ್ಚರ್ಯವೆನಿಸುತ್ತದೆ.

● **ರಾಜಶೇಖರ್ ಹುಲ್ಲಹಳ್ಳಿ, ದಾವಣಗೆರೆ.** - ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ ಅವರು ಜನಗಣತಿಯಲ್ಲಿ ಧರ್ಮ ಕಾಲಂದಲ್ಲಿ ಮಾನವ ಧರ್ಮ ಎಂದು ಬರೆಸಿದರಂತೆ. ಇದು ಸರಿಯೆ ?

★ ಮಾನವ ಧರ್ಮಕ್ಕೂ ಸಾವಿರಪಟ್ಟು ಘನವಾದುದು ಲಿಂಗಾಯತ ಎಂದುಕೊಳ್ಳುವುದು. ಏಕೆಂದರೆ ಮಾನವ ಎಂದರೆ 1. ಮರೆವಿನಲ್ಲಿ ಇರುವವನು. 2. ಹುಟ್ಟು ಗುಣಗಳಲ್ಲಿ ಬದುಕುವವನು 3. ಮನಸ್ಸು ಎಂಬ ಅಂತರೀಂದ್ರಿಯ ಹೇಳಿದಂತೆ ನಡೆವವನು. ಲಿಂಗಾಯತ ಎಂದರೆ ದೇವರು ಎಂಬ ನಿಯಾಮಕ ಶಕ್ತಿಯನ್ನು ನಂಬಿ, ದೇವನನ್ನು ಗೋಳಾಕಾರದ ಇಷ್ಟಲಿಂಗರೂಪದಲ್ಲಿ ಚುಳುಕಾಗಿ ಮಾಡಿಕೊಂಡು ಧರಿಸಿದವನು ; ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ವಿಶ್ವಕುಟಂಬಿ. ಜನಗಣತಿಯಲ್ಲಿ ಸುಳ್ಳು ಮಾಹಿತಿ ಕೊಡುವುದು ಅಪರಾಧ ಎಂಬ ಕಾನೂನಿದೆ. ಎಂ.ಎಲ್.ಎ ಆಗುವಾಗ ಲಿಂಗಾಯತರು ಎಂದು ಹೇಳಿಕೊಂಡು, ಸಚಿವರಾಗುವಾಗ ಲಿಂಗಾಯತರಿಗೆ ಸಚಿವ ಪದವಿ ಕೊಡಬೇಕು ಎಂದು ಸವಲತ್ತುಗಳನ್ನು ಪಡೆದುಕೊಳ್ಳುವ ಇಂಥ ಜನರು ಸಂದರ್ಭಕ್ಕೆ ತಕ್ಕಂತೆ ಮಾತು ಬದಲಿಸುವರು. ಕೆಲವು ಲಿಂಗಾಯತ ಮಠಾಧೀಶರೂ ಇದ್ದಾರೆ. ಅವರು ತಾವು ಸರ್ವ ಧರ್ಮ ಸಮನ್ವಯ ಮಾಡುವವರು ಎಂದು ಭಾಷಣ ಮಾಡುತ್ತ, ತನ್ನ ಧರ್ಮ ಕುರಿತು ಎಳ್ಳಷ್ಟೂ ಹೇಳದೆ, ಒಳಗೊಳಗೇ ಉಪ ಪಂಗಡಗಳ ಸಂಘಟನೆ ಮಾಡಿ ರಾಜಕೀಯ ವೈಷಮ್ಯಗಳನ್ನು ಬೆಳೆಸಲು ಪ್ರೋತ್ಸಾಹಿಸುವರು. ಇಂಥವರ ನಡೆ-ನುಡಿಗಳಲ್ಲಿ ಅಜ-ಗಜದಷ್ಟು ಅಂತರವನ್ನು ಕಾಣಬಹುದು. ★

ವಿಶ್ವಧರ್ಮ ಪ್ರವಚನ ಕಾರ್ಯಕ್ರಮ

ದ್ವಿತೀಯ ಮಹಿಳಾ ಜಗದ್ಗುರುಗಳು, ಅಪೂರ್ವ ವಾಗ್ಮಿಯೂ, ಆದ
ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾಧ್ಯಕ್ಷೆ,

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ

ಅವರ ಪ್ರವಚನವು ಧಾರವಾಡ ನಗರದ ಕಡಪಾ ಮೈದಾನದಲ್ಲಿ ಶುಕ್ರವಾರ ದಿ. 9-2-2001ದಿಂದ ಅವ್ಯಾಹತವಾಗಿ ಅಖಂಡವಾಗಿ ಪ್ರತಿನಿತ್ಯ ಸಂಜೆ 6-30 ರಿಂದ 8-30ರವರೆಗೆ ನಡೆಯುತ್ತಲಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ : 0836-773005, ಅಕ್ಕಮಹಾದೇವಿ ಆಶ್ರಮ, ಧಾರವಾಡ-3

ಭಾರತ ದೇಶದ ಸರ್ಕಾರಿ ಆಡಳಿತ ಯಂತ್ರ

ಜೀನ್ ಲೆಪರ್ಟ್; ಸಂಸ್ಕೃತ ಹೆಸರು ಆಶ್ಚರ್ಯ ಚರ್ಯ ಎಂಬ ಓರ್ವ ಬೆಲ್ಜಿಯಂ ದೇಶದ ವಿದ್ವಾಂಸರು ಒಂದು ದಿನ ಭೇಟಿಯಾದರು. ಅವರು ಭಾರತಕ್ಕೆ ಬಂದು ಆಗಲೇ 20 ವರ್ಷಗಳ ಅನುಭವ ಹೊಂದಿದವರು ; ಎಷ್ಟೋ ಸಲ ಬಂದು ಹೋಗಿದ್ದಾರೆ. ಈ ಸಲ ಮಾತ್ರ ದಿ.21-12-2000 ದಂದು ಬಂದವರು ಕರ್ನಾಟಕವನ್ನು ಕೇಂದ್ರವಾಗಿ ಇಟ್ಟುಕೊಂಡಿದ್ದಾರೆ. ದಿ.21ರಂದು ಬಂದು ಜನವರಿ 6ರಂದು ಕೂಡಲ ಸಂಗಮಕ್ಕೆ ಹೋಗಿದ್ದಾರೆ. ಎಲ್ಲಾ ನೋಡಿ ಬಹಳ ಪ್ರಭಾವಿತರಾಗಿದ್ದಾರೆ. ಬರುವಾಗ SRI BASAVESHWARA- Beacon of the Universe ಪುಸ್ತಕ ತಂದು ಓದಿ ವಿಪರೀತ ಪ್ರಭಾವಕ್ಕೆ ಒಳಗಾಗಿರುವುದಾಗಿ ಹೇಳಿದರು. ಅನಂತರ ಪ್ರತಿದಿನವೂ ಒಂದು ಗಂಟೆ ಕಾಲ ಆ ಪುಸ್ತಕವನ್ನು ನಿತ್ಯವೂ ಪಾರಾಯಣ ಮಾಡುವುದಾಗಿ ಹೇಳಿದರು. ಸುಮಾರು 20ದಿನಗಳ ಹಿಂದೆ ಭೇಟಿಯಾಗಿ ತಾವು ವಿಶ್ವಗುರು ಬಸವಣ್ಣನವರ ವಿಚಾರದಿಂದ ತುಂಬಾ ಪ್ರಭಾವಿತರಾಗಿರುವುದಾಗಿ ಹೇಳಿದ್ದಲ್ಲದೆ ತಾವು ಬರೆದ ಒಂದು ಬಹುವರ್ಣೀಯ ಚಿತ್ರವನ್ನು ಸಹ ತೋರಿಸಿದರು.

" ವಚನ ಸಾಹಿತ್ಯ ಸರಿಯಾದ ರೀತಿಯಲ್ಲಿ ಹೊರ ಜಗತ್ತಿಗೆ ಪರಿಚಯಿಸಲ್ಪಟ್ಟಿಲ್ಲ. ನೀವು ಈ ಕಾರ್ಯದಲ್ಲಿ ತೊಡಗಿಸಿಕೊಳ್ಳಿರಿ. ನಾವು ನಮ್ಮ ಕೈಲಾದಷ್ಟು ನೆರವು ನೀಡುತ್ತೇವೆ. " ಎಂದು ಹೇಳಿದೆ. ಒಪ್ಪಿಕೊಂಡರು. ಅವರ ಹೆಂಡತಿಯೂ ಏಪ್ರಿಲ್‌ದಲ್ಲಿ ಇಲ್ಲಿಗೆ ಬರುತ್ತಿರುವುದಾಗಿ ಅವಳಿಗೂ ಈ ಬಗ್ಗೆ ಅಧ್ಯಯನ, ಬರಹ ಮಾಡಲು ಆಸಕ್ತಿಯುಂಟು ಎಂದು ಹೇಳಿದರು. ಮುಂದೆ 10-12 ದಿನ ಬರಲಿಲ್ಲ. ನಂತರ ಬಂದರು. ತುಂಬಾ ಹತಾಶರಾಗಿದ್ದರು. " ನನಗೆ ಒಂದು ದೊಡ್ಡ ಸಮಸ್ಯೆ ಎದುರಾಗಿದೆ. ನಾನು ಇಲ್ಲೇ ನೆಲೆಸಿ ಮುಂದಿನ ಅಧ್ಯಯನದ ರೂಪುರೇಷೆ ಹಾಕುತ್ತಿದ್ದೆ. ಅಷ್ಟರಲ್ಲಿ ತಾಯಿಯಿಂದ ಫೋನ್ ಬಂದಿದೆ. ಆಕೆಗೆ 86ವರ್ಷ. ಕ್ಯಾನ್ಸರ್ ತೀವ್ರಗೊಂಡಿದೆ. ನನ್ನ ದೇಶದಲ್ಲಿ (ಬೆಲ್ಜಿಯಂ) ಮಾರ್ಚ್ 1ನೇ ತಾರೀಖು ತಾಯಿ ಆಸ್ಪತ್ರೆಗೆ ಸೇರಬೇಕಾಗಿದೆ. ನಾನೊಬ್ಬನೇ ಮಗ. ನೋಡಿಕೊಳ್ಳಲು ಹೋಗಲೇ ಬೇಕಾಗಿದೆ. 24ನೇ ತಾರೀಖಿಗೆ ಪ್ಲೇನ್ ಟಿಕೆಟ್ ಖರೀದಿಯಾಗಿದೆ. ಆದರೆ ಇಲ್ಲಿ ನನಗೆ ಅನುಮತಿ ಕೊಡಲು ಸರ್ಕಾರಿ ಅಧಿಕಾರಿಗಳು ಸುತ್ತಾಡಿಸುತ್ತಿದ್ದಾರೆ. ಒಂದು ವಾರವಾಯಿತು. ಕಛೇರಿಗಳಿಗೆ ಸುತ್ತಾಡಿ ನಿರಾಶನಾಗಿದ್ದೇನೆ. 22ನೇ ತಾರೀಖು ಬನ್ನಿ ಎಂದು ಬೇಜವಾಬ್ದಾರಿಯಿಂದ ಉತ್ತರಿಸುತ್ತಾರೆ. 24ಕ್ಕೆ ಪ್ರಯಾಣ ಮಾಡದಿದ್ದರೆ ಸಹಸ್ರಾರು ರೂಪಾಯಿಗಳ ಟಿಕೆಟ್ ನಷ್ಟವಾಗುತ್ತದೆ. ಟಿಕೆಟ್ ನಷ್ಟವಾಗಬಾರದೆಂದಿದ್ದರೆ 72 ಗಂಟೆ ಮೊದಲು ತಿಳಿಸಬೇಕು. ಇವರು 22ನೇ ತಾರೀಖು ಏನಾದರೂ ಕುಂಟು ನೆಪ ಹೇಳಿದರೆ, ನನ್ನ ಟಿಕೆಟ್ ನಷ್ಟ, ತಾಯಿಯ ಬಗ್ಗೆ ಚಿಂತೆ. ನಾನು ಕಂಗಾಲಾಗಿದ್ದೇನೆ. " ಎಂದರು

ದಿ.21-12-2000 ದಂದು ಬಂದ ಲೆಪರ್ಟ್‌ರವರಿಗೆ 1 ವರ್ಷದ ವೀಸಾ ದೊರೆತಿದೆ. ಅದನ್ನೇ ಬಳಸಿಕೊಂಡು ಹೋದರೆ ವೀಸಾ ರದ್ದಾಗುತ್ತೆ. ಹೋಗಿ ಕೆಲವೇ ಸಮಯದಲ್ಲಿ ವಾಪಸ್ಸು ಬರಲಿರುವುದರಿಂದ ಒಂದು ತಾತ್ಕಾಲಿಕ ಪರವಾನಗಿ ಬೇಕಾಗಿತ್ತು ಅಷ್ಟೇ. ಉದ್ದೇಶ ಅತ್ಯಂತ ಪ್ರಾಮಾಣಿಕ. ವ್ಯಕ್ತಿಯು ಡಾಕ್ಟರೇಟ್ ಆದಂತಹ ಓರ್ವ ವಿದ್ವಾಂಸ. ಆತ ಫ್ರೆಂಚ್ ಭಾಷೆಯಲ್ಲಿ ಒಂದು ಉದ್ದಾಮ ಕೃತಿ ಬರೆದಿದ್ದಾರೆ. ಆ ಪುಸ್ತಕ ತೋರಿಸಿದರೂ ನಮ್ಮ ಐ.ಎ.ಎಸ್ ಅಧಿಕಾರಿಗಳು ಕೊಂಚವೂ ಸ್ಪಂದಿಸಲಿಲ್ಲವಂತೆ. ಪಾಪ ! ಅವರಿಗೆ ವಿದ್ವತ್, ವಿದೇಶಿ ಜನರ ಪ್ರತಿಭೆ, ಪರಿಶ್ರಮ ಎಲ್ಲಿ ಕಾಣುತ್ತವೆ. ಅವರಿಗೆ ಬೇಕಾದುದು ನಮ್ಮ ದೇಶದ ವಿಶೇಷ ಭಕ್ಷ್ಯ - ವಿಟಮಿನ್ ಎಂ. ಲಂಚ.

ನಮ್ಮ ದೇಶದ ಆಡಳಿತ ವ್ಯವಸ್ಥೆ ಬಗ್ಗೆ ಆಕ್ರೋಶ, ಆತನ ಬಗ್ಗೆ ಮರುಕ ! ನಮಗೆಲ್ಲ ಬಹಳ ತಳಮಳವಾಯಿತು. ವಿಧಾನ ಸೌಧದಲ್ಲೇ ಕೆಲಸ ಮಾಡುವ ಓರ್ವ ಪರಿಚಿತರಿಗೆ ಫೋನ್ ಮಾಡಿದಾಗ ಅವರನ್ನು ಕಳಿಸಲು ತಿಳಿಸಿದರು. ಓರ್ವ ಉತ್ತಮ ಅಧಿಕಾರಿಗಳನ್ನು ಕೊಟ್ಟು ಫೈಲ್ ಹುಡುಕಲು ಕಳಿಸಿದರೆ ಅತ್ಯಂತ ನಿರ್ಭಯವಾಗಿ ನಿಮ್ಮ ಫೈಲ್ ಬಂದೇ ಇಲ್ಲ ಎನ್ನುವರಂತೆ. ಇನ್ನೊಂದು ವಿಭಾಗದಿಂದ ಫೈಲ್ ಹೋಗಿರುವ ದಾಖಲೆ ತೋರಿಸಿದರೂ ಉಡಾಫೆ ಮಾಡುತ್ತಿದ್ದರಂತೆ. ಇವರು ಪಟ್ಟುಬಿಡದೆ ಹುಡುಕಿದಾಗ ಫೈಲ್ ಅಲ್ಲೇ ಅದೇ ವ್ಯಕ್ತಿಯ ಟೇಬಲ್ ಮೇಲಿದ್ದು ಸಿಕ್ಕಿಬಿಟ್ಟಿತಂತೆ. ಅಲ್ಲಿಂದ ಅದನ್ನು ಮುಂದಿನ ಟೇಬಲ್‌ಗೆ ಸಾಗಿಸಿದ ಮೇಲೆ "ಈ ಕೆಲಸ ಬೇಗನೇ ಆಗುವಂಥದಲ್ಲ 22ನೇ ತಾರೀಖಿಗೆ ಬನ್ನಿರಿ..." ಎಂದು ಆಫೀಸ್ ಸಮಯವಾಯಿತು ಎಂದು ಹೊರಟುಬಿಟ್ಟರಂತೆ.

ಪುನಃ ಕೆಲವು ಜನರನ್ನು ಸಂಪರ್ಕಿಸಿ, "ವಿದೇಶಿ ವ್ಯಕ್ತಿ, ವಿದ್ವಾಂಸ ನಮ್ಮ ದೇಶದ ಭಂಡ ಮತ್ತು ಲಜ್ಜೆಗೇಡಿ ವ್ಯವಸ್ಥೆಯಿಂದ ನೊಂದಿದ್ದಾರೆ" ಎಂದು ಹೇಳಿದ್ದಾಯಿತು. ಅದೇ ವೇಳೆಗೆ ಕೇಂದ್ರ ಸರಕಾರದ ಅತ್ಯುನ್ನತ ಹುದ್ದೆಯಲ್ಲಿರುವ ಶರಣರೊಬ್ಬರು ದೆಹಲಿಯಿಂದ ದರ್ಶನಕ್ಕೆ ಬಂದರು. ಅವರಿಗೂ ವಿಷಯ ತಿಳಿಸಿದೆವು. ಅವರ ಜೊತೆ ಮತ್ತೋರ್ವ ಅಧಿಕಾರಿ ಬಂದಿದ್ದರು. ಅವರು ಭರವಸೆ ಕೊಟ್ಟರು. ಮರುದಿನ ಆಫೀಸ್ ಶುರುವಾಗುತ್ತಲೇ ಮೂರು ನಾಲ್ಕು ಕಡೆಯಿಂದ ಫೋನ್ ಬರುತ್ತಲೇ ಸಂಬಂಧಿಸಿದ ಪುಣ್ಯಾತ್ಮ (?) ಕಿಡಿಕಿಡಿಯಾಗಿ, ಇವರು ಹೋಗಿ ಕಾಣುತ್ತಲೇ "ಎಷ್ಟು ಕಡೆಯಿಂದ ಫೋನ್ ಮಾಡಿಸುತ್ತೀರಿ ?" ಎಂದು ಅಂತೂ ಅನುಮತಿ ಪತ್ರ ಕೊಟ್ಟನಂತೆ. ಎಲ್ಲರಿಗೂ ನಿರುಮ್ಮಳವಾಯಿತು. ಧನ್ಯವಾದ ಹೇಳಲು ಬಂದ ಲೇಪರ್ಟ್ ಹೇಳಿದರು, "ಎಂಥಾ ಕೆಟ್ಟ ವ್ಯವಸ್ಥೆ, ಇಲ್ಲಿಯ ತತ್ತ್ವಶಾಸ್ತ್ರ, ದರ್ಶನಶಾಸ್ತ್ರ ಎಲ್ಲಾ ಓದಿ ಅಭಿಮಾನವಿಟ್ಟು ಬಂದವರ ಕನಸು ಇಂಥ ಆಡಳಿತ ಯಂತ್ರದಿಂದ ನುಚ್ಚುನೂರಾಗುವುದು. ನಮ್ಮ ದೇಶಗಳಲ್ಲಿ ಅರ್ಜಿ ಸಲ್ಲಿಸಿದರೆ ಸಾಕು. ಎಲ್ಲ ದಾಖಲೆ ಪರಿಶೀಲಿಸುವರು. ಸರಿಯಾಗಿದ್ದರೆ ಸಹಜವಾಗಿ ಕೆಲಸ ಮಾಡುವರು. ಇಲ್ಲಿ ಇಲ್ಲದ ದೋಷ ಹುಡುಕುವರು ಎಂದು ಒಂದು ಉದಾಹರಣೆ ಹೇಳಿದರು. ಒಂದು ಇನ್‌ಡೆಮ್ನಿಟಿ ಬಾಂಡ್ ಕೊಡಬೇಕಿತ್ತಂತೆ. 5 ರೂ. ಛಾಪಾ ಕಾಗದ ಸಿಗಲಿಲ್ಲ ಎಂದು 10 ರೂ. ಕಾಗದದ ಮೇಲೆ ಬರೆದು ಸಹಿ ಮಾಡಿದ್ದರಂತೆ. 5 ರೂ. ಬದಲು 10 ರೂದು ಕೊಂಡರೆ ಸರ್ಕಾರಕ್ಕೆ ಹಾನಿ ಇಲ್ಲ ತಾನೆ ? ಆದರೆ ಅದನ್ನೆ ಕುಂಟು ನೆಪ ಮಾಡಿಕೊಂಡು 5 ರೂ. ಕಾಗದದ ಮೇಲೆ ಕೊಡಿರಿ ಎಂದು ಅಧಿಕಾರಿಗಳು ಪಟ್ಟು ಹಿಡಿದಾಗ, ಪುನಃ 5 ರೂ ಛಾಪಾ ಕಾಗದದ ಮೇಲೆ ಬರೆದು ಕೊಡಲು ಒಂದು ದಿನ ಹಾಳಾಯಿತಂತೆ. ಇನ್ನೊಂದು ಅನುಭವ ಹೇಳಿದರು. "ಒರಿಸ್ಸಾ ಚಂಡಮಾರುತದಿಂದ ಭಯಂಕರ ಹಾನಿಯಾದಾಗ ಜರ್ಮನಿ 6 ಸಾಗಾಣಿಕೆ ವಿಮಾನಗಳಲ್ಲಿ ಆಹಾರ ಪದಾರ್ಥಗಳು, ಔಷಧಿಗಳು, ಬಟ್ಟೆಬರೆ, ರಗ್ಗುಗಳನ್ನು ದಾನರೂಪದಲ್ಲಿ ಕಳಿಸಿತಂತೆ. ಆ ವಿಮಾನ ಬಂದಾಗ ಆ ದಾನದ ವಸ್ತುಗಳಿಗೆ ಕಸ್ಟಮ್ಸ್ ಸುಂಕ ತುಂಬಲೇ ಬೇಕು ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ಹಠ ಹಿಡಿದರಂತೆ. ದಾನದ ವಸ್ತುಗಳಿಗೆ ಕಸ್ಟಮ್ಸ್ ಶುಲ್ಕ?! ಯಾರು ತುಂಬ ಬೇಕು? 10 ದಿವಸ ಕಾಲ ಕಾಯ್ದು ವಿಮಾನ ಚಾಲಕರು ವಾಪಸ್ಸು ಸಾಮಗ್ರಿಗಳನ್ನು ತೆಗೆದುಕೊಂಡು ತಮ್ಮ ದೇಶಕ್ಕೆ ಹೋದರಂತೆ. ಹೇಗಿದೆ ಈ ದೇಶ ? ಮೇರಾ ಭಾರತ್ ಮಹಾನ್ ! ಯಾವ ಸಂತೋಷದಿಂದ ಹೇಳಬೇಕು ಈ ವಾಕ್ಯವನ್ನು ? ಹೃದಯ ಹೀನ ರಾಜಕಾರಣಿಗಳು ಮತ್ತು ಅಧಿಕಾರಿಗಳ ಬೀಡಾದ ಭಾರತದ ಹೆಸರು ಹೇಗೆ ತಾನೇ ಚೆನ್ನಾಗಿ ಉಳಿಯಲು ಸಾಧ್ಯ ?!

-ಮಾತಾಜಿ

ಸೌ ಮೇ ನಬ್ಬೆ ಬೆಯಿಮಾನ್ ! ಮೇರಾ ಭಾರತ ಮಹಾನ್ ?

ಶರಣ ಮೇಳ : ಅದ್ಭುತ ಧಾರ್ಮಿಕ ಕಾರ್ಯಾಗಾರ

ಪರಮಪೂಜ್ಯ ಮಾತಾಜಿಯವರಿಗೆ ಭಕ್ತಿಪೂರ್ವಕ ಶರಣು ಶರಣಾರ್ಥಿಗಳು

ಪೂಜ್ಯರೇ, ಆಧ್ಯಾತ್ಮಿಕ ಸಾಧನೆ ಅಳವಡದ ಯಾವುದೇ ಒಬ್ಬ ವ್ಯಕ್ತಿಯ ಬೋಧನೆ ಜನಸಾಮಾನ್ಯರನ್ನು ಆಧ್ಯಾತ್ಮದ ಕಡೆಗೆ ಆಕರ್ಷಿಸಲು ಅಶಕ್ತವಾಗಿರುತ್ತದೆಯಷ್ಟೇ ಅಲ್ಲದೆ ಅದು ನಿಷ್ಪ್ರಯೋಜಕ ಬೋಧನೆಯಾಗಿಯೇ ಉಳಿದುಬಿಡುತ್ತದೆ.

ಆದರೆ ಅಪಾರ ಅಧ್ಯಯನ, ಉದಾತ್ತ ತಾತ್ವಿಕ ಚಿಂತನೆಗಳನ್ನೊಳಗೊಂಡು ಅಪೂರ್ವ ವ್ಯಕ್ತಿಯಾಗಿ, ಸೃಷ್ಟಿಕರ್ತ ಲಿಂಗದೇವ ಹಾಗೂ ಧರ್ಮಕರ್ತ ಬಸವಗುರುವಿನ ಕರುಣೆಯಿಂದ ಅದ್ಭುತ ಶಕ್ತಿಯಾಗಿ ತಮ್ಮ ಆಧ್ಯಾತ್ಮದ ಸಾಧನೆಯಿಂದ ಆತ್ಮೋದ್ಧಾರದ ಜೊತೆಗೆ ಸಮಾಜೋದ್ಧಾರ ಕಾರ್ಯದಲ್ಲಿ ಅಹರ್ನಿಶಿ ಕ್ರಿಯಾಶೀಲರಾಗಿ ಸಂಸ್ಕಾರ, ಸಮಾನತೆ, ಸಂಘಟನೆ ಹಾಗೂ ಸಹೋದರತ್ವಗಳ ತಳಹದಿಯ ಮೇಲೆ ಸುಂದರ ಸಮಾಜವನ್ನು ಕಟ್ಟಬೇಕೆಂಬ ಹಿನ್ನೆಲೆಯಲ್ಲಿ ತಾವು ಕೈಗೊಂಡಿರುವ ಧರ್ಮಬೋಧನೆ ಸಂಪೂರ್ಣವಾಗಿ ಫಲಪ್ರದಾಯಕವಾಗುವುದರಲ್ಲಿ ಕಿಂಚಿತ್ತೂ ಸಂಶಯವಿಲ್ಲ ಎಂಬುದಕ್ಕೆ ತಾವು ನಡೆಸುತ್ತಿರುವ ಶರಣ ಮೇಳವೇ ಸಾಕ್ಷಿಭೂತವಾಗಿದೆ.

ಶರಣ ಮೇಳ ಜಾತ್ರೆಯಲ್ಲ, ಜನಜಂಗುಳಿಯಲ್ಲ ಅರ್ಥರಹಿತ ಆಚರಣೆಗಳನ್ನು ಅನುಸರಿಸುವ ಮತಿಹೀನರ ಕೂಟವಲ್ಲ. ಅದೊಂದು ಅರ್ಥಪೂರ್ಣ, ವೈಚಾರಿಕ, ವಿಮರ್ಶಾತ್ಮಕ ಧಾರ್ಮಿಕ ಕಾರ್ಯಾಗಾರ. ಅದು ಧರ್ಮದ ಪರಿಪಾಲನೆಯ ರೀತಿ ನೀತಿಗಳನ್ನು ಕಲಿಸುತ್ತದೆ. ಮೌಢ್ಯದ ಸಂಕೋಲೆಯಿಂದ ಮಾನವರನ್ನು ಬಿಡುಗಡೆಗೊಳಿಸುತ್ತದೆ. ದಿವ್ಯ ಜ್ಞಾನದ ಅನುಭವಾಮೃತ-ವನ್ನುಣಬಡಿಸುತ್ತದೆ. ಅಲ್ಲಿನ ಶಿಸ್ತುಬದ್ಧ ಕಾರ್ಯಚಟುವಟಿಕೆಗಳು ಮಾನವನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಅಲ್ಲಿ ಕೈಗೊಂಡ ನಿರ್ಣಯಗಳು ಸಮಾಜದಲ್ಲಿ ಹೊಸ ಕ್ರಾಂತಿಯನ್ನೆಬ್ಬಿಸುತ್ತಿರುವುದು ವೈಚಾರಿಕತೆಯ ದ್ಯೋತಕವಾಗಿದೆ. ಇದಕ್ಕೆ ನಿದರ್ಶನವೆಂದರೆ ಅಜ್ಞಾನದಿಂದ ಜಾತಿ ಸೂಚಕವಾಗಿ ರೂಢಿಯಲ್ಲಿದ್ದ ಲಿಂಗಾಯತ ವನ್ನು ತಮ್ಮ ಅಧ್ಯಯನ ಹಾಗೂ ಪ್ರಚಾರದ ಮೂಲಕ ಲಿಂಗಾಯತ ಧರ್ಮ ಎಂಬುದಾಗಿ ಸಮಾಜಕ್ಕೆ ಮನಗಾಣಿಸಿರುವುದೇ ಆಗಿದೆ.

ಕರ್ನಾಟಕದಲ್ಲಿ ಎಷ್ಟೆಲ್ಲಾ ಮಠಾಧಿಪತಿಗಳಿದ್ದರೂ ಸಹ ಇಂತಹ ಸತ್ಯಾನ್ವೇಷನೆಯ ಕೆಲಸಕ್ಕೆ ಅವರುಗಳು ಕೈಹಾಕದಿರುವುದು ಅವರವರ ಬೌದ್ಧಿಕ ಕೊರತೆ, ಹಾಗೂ ನಿರಾಸಕ್ತಿಯನ್ನು ತೋರ್ಪಡಿಸುತ್ತದೆ. ಜಾಗತಿಕ ಧರ್ಮಗಳ ಸಾಲಿನಲ್ಲಿ ಸೇರಲು ಲಿಂಗಾಯತ ಧರ್ಮ ಎಲ್ಲ ರೀತಿಯ ಅರ್ಹತೆಗಳನ್ನೊಳಗೊಂಡಿದೆ, ಈ ಧರ್ಮದಲ್ಲಿನ ದೇವರ ಹೆಸರು ಲಿಂಗದೇವ ಎಂಬ ತಮ್ಮ ಅದ್ಭುತ ಸಂಶೋಧನೆಗಳು ಧಾರ್ಮಿಕ ಇತಿಹಾಸದಲ್ಲಿ ಮಹತ್ವಪೂರ್ಣ ಮೈಲಿಗಲ್ಲುಗಳಾಗಿವೆ. ಇಂತಹ ವೈಚಾರಿಕ ಧರ್ಮದ ಬಗ್ಗೆ ತಿಳುವಳಿಕೆ ನೀಡುವಲ್ಲಿ ತಾವು ನಡೆಸುವ ಶರಣ ಮೇಳ ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ. ಅಷ್ಟೇ ಅಲ್ಲದೆ ಧರ್ಮ ಜಿಜ್ಞಾಸುಗಳಿಗೆ, ಧರ್ಮ ಪ್ರಚಾರ ಕೈಗೊಂಡು ಬದುಕನ್ನು ಸಾರ್ಥಕ ಪಡಿಸಿಕೊಳ್ಳಬೇಕೆಂಬ ಸ್ಫೂರ್ತಿಯನ್ನು ನೀಡುತ್ತದೆ. ಇಂತಹ ಸ್ಫೂರ್ತಿಯ ಕಿಡಿ ನನ್ನಲ್ಲಿ ಹೊತ್ತಿದೆ. ಅದು ಆದಷ್ಟು ಬೇಗ ದೇದೀಪ್ಯಮಾನವಾಗಿ ಬೆಳಗುವಂತೆ ಸೃಷ್ಟಿಕರ್ತ ಲಿಂಗದೇವನಲ್ಲಿ ಪ್ರಾರ್ಥಿಸುತ್ತೇನೆ.

ತಮ್ಮ ನಂಬುಗೆಯ ಶಿಷ್ಯ,

ಸುಜ್ಞಾನ ಪ್ರಭು, ಕಾರ್ಯದರ್ಶಿ
ರಾಷ್ಟ್ರೀಯ ಬಸವ ದಳ, ತುಮಕೂರು

ನೀನೊಲಿಯಿತ್ತೇ ಪುಣ್ಯ, ನೀನೊಲ್ಲದುದೇ ಪಾಪ ಕಂಡಯ್ಯ

ಜನವರಿ-ಫೆಬ್ರವರಿ ತಿಂಗಳಲ್ಲಿ ದೇಣಿಗೆ ಸಲ್ಲಿಸಿದ ದಾಸೋಹಿಗಳು

ಬಸವ ಧರ್ಮ ಪೀಠದ ಕಟ್ಟಡ ನಿಧಿಗೆ

ಶರಣರುಗಳಾದ :

1. ಎ. ತಾರಕನಾಥ್, ಹಿರಿಯೂರು (ಸಿಂಗಲ್ ಕೋಣೆಗೆ)	ರೂ. 51,000-00
2. ಗೌರವ್ವ ಮತ್ತು ಬಸವರಾಜ ಮ್ಯೆಂದರಗಿ, ಇಳಕಲ್	ರೂ. 10,000-00
3. ಪಿ.ಜಿ. ಕುಲಕರ್ಣಿ, ಚಾರಿಟಿ ಕಮೀಷನರ್, ಬೆಳಗಾಂವ	ರೂ. 2,500-00
4. ಶಿವಲಿಂಗಪ್ಪ ಸಿದ್ಧರಾಮಪ್ಪ ತೇಲಿ, ಮುಧೋಳ	ರೂ. 2,000-00
5. ಎಸ್.ವಿ. ಹರಳ, ಪೂನಾ	ರೂ. 1,001-00

ಶರಣ ಮೇಳದ ಪುದುವಟ್ಟು

ಶರಣರುಗಳಾದ :

ವಿ. ಎನ್. ದೇವಪ್ಪಯ್ಯ , ಬೆಂಗಳೂರು	ರೂ. 10,000-00
ಜಿ.ಬಿ. ಚನ್ನಬಸಮ್ಮ, ಚಿತ್ರದುರ್ಗ, ಜೆ.ಜ.ಬಸಪ್ಪನವರ ಸ್ಮರಣಾರ್ಥ	ರೂ. 5,000-00

ಗುರುಕಾಣಿಕೆ

ಶರಣರುಗಳಾದ :

ಚಂದ್ರಮ್ಮ ಮತ್ತು ಸದಾನಂದಸ್ವಾಮಿ, ಧಾರವಾಡ	ರೂ. 5,001-00
ಪದ್ಮಾ ಮತ್ತು ತ್ರಿನೇಶ್ವರ್, ಮಲ್ಲೇಶ್ವರಮ್, ಬೆಂಗಳೂರು	ರೂ. 5,001-00
ಮಲ್ಲೇಶಪ್ಪ. ಬಿ. ಶಿರವಂತಿ, ಬೈಲಹೊಂಗಲ	ರೂ. 2,001-00

ನಿತ್ಯ ದಾಸೋಹ ನಿಧಿಗೆ 1111ರೂ. ಕೊಟ್ಟ ದಾಸೋಹಿಗಳು

ಶರಣರುಗಳಾದ :

ಬಿ.ಜಿ. ಜಯಣ್ಣ, ಚಿತ್ರದುರ್ಗ
ಎನ್. ಹುಚ್ಚಮ್ಮ, ಬಳ್ಳಾರಿ
ಕಮಲವ್ವ ಮಲ್ಲಪ್ಪ ಹರಕುಣಿ, ದುಂಡಗಿ
ಮಲ್ಲಿಕಾರ್ಜುನ, ಬೀದರ
ಶಿವಲಿಂಗಪ್ಪ ಬಿಡಕರ್, ಮಹಾರಾಷ್ಟ್ರ
ಶೋಭಾ ಅಗ್ರಾಣಪ್ಪ ಬಾವಲತ್ತಿ, ಬನಹಟ್ಟಿ
ಕುಪೇಂದ್ರ ವೀರಶೆಟ್ಟೆಪ್ಪ ನಿಡಗುಂದಾ
ಬಸಪ್ಪ ಶಿವಲಿಂಗಪ್ಪ ಬೆಳಕೇರಾ, ಮನ್ನಳ್ಳಿ
ಲಿಂಗಾಯತ ಸಮಾಜ ದತ್ತವಾಡ, ಮಹಾರಾಷ್ಟ್ರ
ಅಣ್ಣಾಸೋ ಮಾಲಗೊಂಡ ಪಾಟೀಲ, ದಾನವಾಡ, ಮಹಾರಾಷ್ಟ್ರ
ಸುರೇಶ ರಾಮಚಂದ್ರ ಫರಾಳೆ, ಮಹಾರಾಷ್ಟ್ರ
ವಿದ್ಯಾ ಗಣಪತಿ ಲಿಂಗಾಯತ್, ರತ್ನಗಿರಿ, ಮಹಾರಾಷ್ಟ್ರ
ವಿವೇಕಾನಂದ ಅಶೋಕ ಗುಡನವರು, ಚಿಕ್ಕೋಡಿ
ಶಶಿಕಲಾ ಮಹಾದೇವ ಖಾತಿ, ಸವದತ್ತಿ
ಗುಂಡಾ ದಾದಾ ಲಾಂಬೆ, ನಾಗಾಂವ, ಮಹಾರಾಷ್ಟ್ರ
ಶ್ರೀ ಬಸವೇಶ್ವರ ಸಂಘ, ಚಿಕ್ಕದೇವನೂರು
ಕೆ.ಬಿ. ರುದ್ರೇಶ್. ಶಿವಮೊಗ್ಗ
ಎಂ. ಪ್ರಭುಸ್ವಾಮಿ ಇಕ್ಕಡಹಳ್ಳಿ, ಚಾಮರಾಜನಗರ ಜಿಲ್ಲೆ
ಬಸಪ್ಪ ನಿಂಗಪ್ಪ ಮುಗಳಖೋಡ, ಗುರ್ಲಾಪುರ

ಬಿದ್ದಗೌಡ ಶಿವಮೊಗ್ಗಪ್ಪ ಮುಗಳಖೋಡ, ಗುರ್ಲಾಪುರ
ಶಿವಬಸು ಗಿರಿಮಲ್ಲಪ್ಪ ಹಂಚಿನಾಳ, ಗುರ್ಲಾಪುರ
ಶ್ರೀ ಬಸವೇಶ್ವರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್, ಹಳ್ಳೂರು
ಸತ್ಯವ್ವ ಬಸವ ಪ್ರಭು ಕಬ್ಬೂರು, ಶಿವಾಪುರ
ಬಸವ ಪ್ರಭು ಗುರುಲಿಂಗಪ್ಪ ನಿಡಗುಂದ, ಮೂಡಲಗಿ
ಬಸಯ್ಯ ಚನ್ನಮಲ್ಲಯ್ಯ ನಿರ್ವಾಣಿ, ಮೂಡಲಗಿ
ಸುಭಾಷ್ ಗಿರೆಪ್ಪ ಧವಳೇಶ್ವರ, ಮೂಡಲಗಿ
ಡಾ॥ ಅನಿಲ್.ಎನ್ ಪಾಟೀಲ್, ಮೂಡಲಗಿ
ಅಶೋಕ ಬಸವಂತಪ್ಪ ಗೋಡಿಗೌಡರ, ಮುನ್ಯಾಳ
ಗುಂಡಪ್ಪ ಸಿದ್ಧರಾಮಪ್ಪ ಗೋಡಿಗೌಡರ, ಮುನ್ಯಾಳ
ಗಿರಿಮಲ್ಲಪ್ಪ ವೀರಭದ್ರಪ್ಪ ಹುಕ್ಕೇರಿ, ಮುನ್ಯಾಳ
ಮಹಾಲಿಂಗಪ್ಪ ಮಲ್ಲಪ್ಪ ಹುಕ್ಕೇರಿ, ಮುನ್ಯಾಳ
ಬಾಬು ಚನ್ನಬಸಪ್ಪ ಬಸರಕೋಡ, ಮಾರ್ಗನಕೊಪ್ಪ
ಅಣ್ಣಪ್ಪ ವೀರಪ್ಪ ವಾಲಿ, ಬೈಲಹೊಂಗಲ
ಎ. ರಾಜಶೇಖರ್, ಕೆಂಗೇರಿ, ಉಪನಗರ, ಬೆಂಗಳೂರು

ವಿ.ಸೂ. ಪೂಜಾನಿಧಿಗೆ 501 ರೂ ಕೊಟ್ಟವರ ಪಟ್ಟಿಯು ದೊಡ್ಡದಿದ್ದು ಸ್ಥಳಾಭಾವದಿಂದ ಪ್ರಕಟಿಸಲಾಗಿಲ್ಲ. ಈ ಎಲ್ಲಾ ಧನ ದಾಸೋಹಿಗಳಿಗೆ ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ಕರುಣಿಸಲೆಂದು ಹಾರೈಸುತ್ತೇವೆ.

-ಮಾತಾಜಿ

ದೇವನಲ್ಲಿ ಪ್ರಾರ್ಥನೆ


ಹೃದಯ ಮಂದಿರವ ಹಸನುಗೊಳಿಸಿ ನೆಲೆಸೆನ್ನಲಿ ದೇವಾ
ಕೋಪ ತಾಪಗಳ ಕಳೆದು ದ್ವೇಷ ಮತ್ಸರಗಳನಳಿಸಿ
ದೌರ್ಬಲ್ಯದುರಿಯ ದಹಿಸಿ ನೆಲೆಸೆನ್ನಲಿ ದೇವಾ
ಉನ್ನತ ಗುರಿಯಿರಿಸಿ ಯೋಗಪಥದಲಿ ನಡೆಸಿ ದಿವ್ಯದರ್ಶನವೆನಗೀಯಯ್ಯಾ
ನಿನ್ನ ಸೇರುವ ಅರ್ಹತೆ ಎನಗಿಲ್ಲವೆಂದು ಕಳವಳಿಸುತಿದೆ ಮನ,
ಅದನೆಲ್ಲ ನೀನರಿತು ಕೇಳೆನ್ನ ಮೊರೆಯ
ಲೋಪ ದೋಷಗಳನ್ನೆಣಿಸುವೆಯೋ ? ಮಾನವ ಸಹಜ ಗುಣದಿಂದಲಿರುವ
ಎನ್ನ ಮನದ ಕಾಳಿಕೆಯ ಕಳೆದು ಹೃದಯ ಹಣತೆಯಲಿ ಬೆಳಗು
ಅಂತರಾತ್ಮದಲಿ ವಾಸವಾಗಿ ನೆಲೆಸಿರುವೆ ನೀನೆಂದು
ಹೇಳುವುದ ನಾ ಕೇಳಿದೆ ಮಹಾತ್ಮರನುಭಾವದಿಂದ
ನಿನ್ನನೊಲಿಸಿಕೊಳ್ಳುವ ಹಾದಿ ತಿಳಿಯದೆ ಬಳಲುತಿರುವೆ
ಹಂಬಲಕೆ ಒಲಿವೆಯೆಂದು ಬೋಧಿಸಿದರು ಬಲ್ಲವರು
ಭಕ್ತಿಗೆ ಒಲಿವೆಯೆಂಬರು ಹಲವರು, ಹೇಗೆ ನಿನ್ನನೊಲಿಸಿಕೊಳ್ಳಲಿ ದೇವಾ
ನೀನೇ ಮಾರ್ಗದೋರೆನಗೆ, ನಿನ್ನ ಕಾಣುವ ದಾರಿ ತೋರದೆ ಬಳಲುತಿರುವೆ
ಅಳಲುತಿರುವೆ ತೊಳಲುತಿರುವೆನಯ್ಯಾ
ಕೂಗಿದರೆ ಕಾಣುವೆಯೋ, ನೆನೆದರೆ ಬರುವೆಯೋ
ಸ್ಮರಿಸಿದರೆ ತೋರುವೆಯೋ ? ಹಂಬಲಿಸಿದರೆ ಹರಸುವೆಯೋ
ಏನು ಮಾಡಲಿ ತೋಚದೆನಗೆ ದೇವಾ ತಿಳಿದುದನೆಲ್ಲ ಮಾಡುವೆ
ನಿನಗೊಲಿಮೆಯಾದಾಗ ಒಲಿಯಯ್ಯಾ ಮಾತಾ ಪ್ರಿಯ ಸಚ್ಚಿದಾನಂದ.

-ಮಾತೆ ಅಕ್ಕಮಹಾದೇವಿ, ಬಸವ ಧರ್ಮ ಪೀಠ, ಕೂಡಲಸಂಗಮ

1965



1969





1971



1971

ಕಲ್ಯಾಣ ಕಿರಣ CPMG/KA/BGW-50 ಮಾರ್ಚ್ -2001
R.NO. 19980/70 WPP (W) - 17

